# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಸೋಮವಾರ, ಮಾರ್ಚ್ 29, 2021

ಸಂಪುಟ : 47 ಸಂಚಿಕೆ : 329 ☎ 254736 91642 99999 RNI No: 27369/75, KA/SK/CTA-275/2021-2023. O/P @ J.D. Circle P.O. ಪುಟ : 6 ರೂ : 4.00 www.janathavani.com janathavani@mac.com






**ಕಾಮದಹನ, ಬಣ್ಣ ಖರೀದಿ**

ದಾವಣಗೆರೆ ನಗರದ ವಿವಿಧ ಬಡಾವಣೆಗಳಲ್ಲಿ ಭಾನುವಾರ ರಾತ್ರಿ ಕಾಮದಹನ ನಡೆಸಲಾಯಿತು. ಸೋಮವಾರ ಹೋಳಿ ಹಬ್ಬದ ಅಂಗವಾಗಿ ಜನತೆ ಬಗೆ ಬಗೆಯ ಬಣ್ಣಗಳನ್ನು ಖರೀದಿಸಿದರು.

## ಇಂದು ಪಾಲಿಕೆ ಉಪ ಚುನಾವಣೆ

**20 ಹಾಗೂ 22ನೇ ವಾರ್ಡ್‌ನಲ್ಲಿ ಕಾಂಗ್ರೆಸ್-ಬಿಜೆಪಿ ಅಭ್ಯರ್ಥಿಗಳ ನಡುವೆ ನೇರ ಸ್ಪರ್ಧೆ**

ದಾವಣಗೆರೆ ಮಹಾನಗರ ಪಾಲಿಕೆಯ 20 ಹಾಗೂ 22ನೇ ವಾರ್ಡ್‌ಗಳಿಗೆ ಇಂದು ಚುನಾವಣೆ ನಡೆಯಲಿದೆ.

2020ರ ರಲ್ಲಿ ನಡೆದ ಮೇಯರ್ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದಿಂದ ಗೆದ್ದಿದ್ದ ಯಶೋಧ ಉಮೇಶ್, 2021ರ ಮೇಯರ್ ಚುನಾವಣೆಯಲ್ಲಿ ಕಾಂಗ್ರೆಸ್‌ನ ದೇವರಮನೆ ಶಿವಕುಮಾರ್ ರಾಜೀನಾಮೆ ನೀಡಿದ್ದರಿಂದ ಎರಡೂ ವಾರ್ಡ್‌ಗಳಿಗೆ ಇದೀಗ ಮತ್ತೆ ಚುನಾವಣೆ ನಡೆಯಲಿದೆ.

ಪರಿಶಿಷ್ಟ ಜಾತಿ ಮಹಿಳೆಗೆ ಮೀಸಲಾದ 20ನೇ ವಾರ್ಡ್ ಭಾರತ್ ಕಾಲೋನಿಯಲ್ಲಿ ಕಾಂಗ್ರೆಸ್‌ನಿಂದ ಎಂ.ಮೀನಾಕ್ಷಿ ಹಾಗೂ ಬಿಜೆಪಿಯಿಂದ ಎಂ.ರೇಣುಕಾ ಕೃಷ್ಣ ಇಬ್ಬರೇ ಕಣದಲ್ಲಿದ್ದಾರೆ.

22ನೇ ವಾರ್ಡ್ ಯಲ್ಲಮ್ಮ ನಗರ ಸಾಮಾನ್ಯ ವರ್ಗಕ್ಕೆ ಮೀಸಲಾದ ಸದಸ್ಯ ಸ್ಥಾನಕ್ಕೆ ಐವರು ಅಭ್ಯರ್ಥಿಗಳು ಕಣದಲ್ಲಿದ್ದು, ಪ್ರಮುಖವಾಗಿ ಕಾಂಗ್ರೆಸ್‌ನಿಂದ ರವಿಸ್ವಾಮಿ ಮತ್ತು ಬಿಜೆಪಿಯಿಂದ ಶಿವಾನಂದ ರಾಮಚಂದ್ರಪ್ಪ ಸ್ಪರ್ಧಿಸಿದ್ದಾರೆ.

ಕಾಂಗ್ರೆಸ್ ಟಿಕೆಟ್ ಸಿಗದ ಕಾರಣಕ್ಕೆ ಬಂಡಾಯ ಎದ್ದಿರುವ ಆಕಾಂಕ್ಷಿ ಮಹಮದ್ ಮುಜಾಹಿದ್ ಪಾಷಾ ಸಹ ಸ್ವತಂತ್ರ ಅಭ್ಯರ್ಥಿಯಾಗಿ ಕಣಕ್ಕಿಳಿದಿದ್ದಾರೆ.

ಮಹಾನಗರ ಪಾಲಿಕೆ ಅಧಿಕಾರ ಹಿಡಿಯಲು ಕಾಂಗ್ರೆಸ್ ಹಾಗೂ ಬಿಜೆಪಿ ಎರಡೂ ಪಕ್ಷಗಳಿಗೆ ಈ ಉಪ ಚುನಾವಣೆ ಅತಿ ಮುಖ್ಯವಾಗಿದ್ದು, ಮತದಾರ ಯಾರ ಪರವಾಗಿದ್ದಾನೆ ಎಂಬುದು ಶೀಘ್ರವೇ ತಿಳಿಯಲಿದೆ.

# ಮತ್ತೆ ಲಾಕ್‌ಡೌನ್‌ನತ್ತ ಮಹಾರಾಷ್ಟ್ರ

### ಆರ್ಥಿಕತೆಗೆ ಅತಿ ಕಡಿಮೆ ಧಕ್ಕೆಯಾಗುವ ರೀತಿಯ ಲಾಕ್‌ಡೌನ್ ಯೋಜನೆ ರೂಪಿಸಲು ಮುಖ್ಯಮಂತ್ರಿ ಸೂಚನೆ

**ಕಳೆದ ವಾರದಲ್ಲಿ ಲಕ್ಷಕ್ಕಿಂತ ಹೆಚ್ಚು ಜನರಿಗೆ ಸೋಂಕು**
**ಭಾನುವಾರ 40 ಸಾವಿರಕ್ಕೂ ಹೆಚ್ಚು ಸೋಂಕುಗಳು ಪತ್ತೆ**
**ಆಸ್ಪತ್ರೆಗಳಲ್ಲಿ ಬೆಡ್, ಆಕ್ಸಿಜನ್, ವೆಂಟಿ ಲೇಟರ್ ಕೊರತೆಯ ಕಳವಳ**
**ಕೆಲ ಜಿಲ್ಲೆಗಳಲ್ಲಿ ಬೆಡ್‌ಗಳ ಕೊರತೆ**
**ಕೈಗಾರಿಕಾ ಆಕ್ಸಿಜನ್‌ನಲ್ಲಿ ಶೇ.80ರಷ್ಟು ಕೊರೊನಾ ಚಿಕಿತ್ಸೆಗೆ ಮೀಸಲಿಗೆ ಸೂಚನೆ**

ಮುಂಬೈ, ಮಾ. 28 - ಮಹಾರಾಷ್ಟ್ರದಲ್ಲಿ ಕೊರೊನಾ ಪ್ರಕರಣಗಳ ಸಂಖ್ಯೆ ದಿನೇ ದಿನೇ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ, ಆರ್ಥಿಕತೆಗೆ ಅತಿ ಕಡಿಮೆ ಧಕ್ಕೆಯಾಗುವ ರೀತಿಯ ಲಾಕ್‌ಡೌನ್ ಹೇರಿಕೆ ಮಾಡುವ ಯೋಜನೆ ರೂಪಿಸುವಂತೆ ಅಧಿಕಾರಿಗಳಿಗೆ ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಸೂಚನೆ ನೀಡಿದ್ದಾರೆ.

ಗೃಹ ಸಚಿವ ರಾಜೇಶ್ ಟೋಪೆ ಹಾಗೂ ಉನ್ನತ ಅಧಿಕಾರಿಗಳ ಜೊತೆ ಮುಖ್ಯಮಂತ್ರಿ ಸಭೆ ನಡೆಸಿ ಪರಿಸ್ಥಿತಿಯ ವಿವರ ಪಡೆದಿದ್ದಾರೆ. ಪರಿಸ್ಥಿತಿ ಹೀಗೆಯೇ ಮುಂದುವರೆದರೆ ಆಸ್ಪತ್ರೆಗಳಲ್ಲಿ ಬೆಡ್‌ಗಳು, ಆಕ್ಸಿಜನ್ ಪೂರೈಕೆ ಹಾಗೂ ವೆಂಟಿಲೇಟರ್ ಕೊರತೆಯಾಗಲಿದೆ ಎಂದು ಸಭೆಯಲ್ಲಿ ಅಭಿಪ್ರಾಯ ವ್ಯಕ್ತವಾಗಿದೆ.

ಭಾನುವಾರ ರಾಜ್ಯದಲ್ಲಿ 40,414 ಸೋಂಕುಗಳು ಪತ್ತೆಯಾಗಿವೆ. ಇದೇ ದಿನ 108 ಜನರು ಸಾವನ್ನಪ್ಪಿದ್ದಾರೆ. ಮುಂಬೈನಲ್ಲೂ ದಾಖಲೆಯ 6,933 ಸೋಂಕಿತರು ಪತ್ತೆಯಾಗಿದ್ದು, 8 ಜನ ಸಾವನ್ನಪ್ಪಿದ್ದಾರೆ.

ಆಸ್ಪತ್ರೆಗಳಲ್ಲಿ ಲಭ್ಯವಿರುವ ಬೆಡ್‌ಗಳು, ಆಕ್ಸಿಜನ್, ಔಷಧಿ ಇತ್ಯಾದಿಗಳ ವಿವರ ಪಡೆದಿರುವ ಮುಖ್ಯಮಂತ್ರಿ ಠಾಕ್ರೆ, ಕಠಿಣ ಲಾಕ್‌ಡೌನ್ ಹೇರುವಂತೆ ಕಾರ್ಯಪಡೆ ಮಾಡಿರುವ ಶಿಫಾರಸ್ಸನ್ನೂ ಪರಿಶೀಲಿಸಿದ್ದಾರೆ.

ಆರ್ಥಿಕತೆಯ ಮೇಲೆ ಕನಿಷ್ಠ ಪರಿಣಾಮ ಬೀರುವಂತಹ ಲಾಕ್‌ಡೌನ್ ಹೇರಿಕೆಯ ವಿಸ್ತೃತ ಯೋಜನೆ ರೂಪಿಸುವಂತೆ ಅಧಿಕಾರಿಗಳಿಗೆ ಮುಖ್ಯಮಂತ್ರಿ ಸೂಚಿಸಿದ್ದಾರೆ ಎಂದು ಅಧಿಕೃತ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಕಳೆದ ವಾರದಿಂದ ರಾಜ್ಯದಲ್ಲಿ ಕೊರೊನಾ ಸೋಂಕಿನ ಪ್ರಮಾಣ ಗಣನೀಯವಾಗಿ ಹೆಚ್ಚಾಗುತ್ತಿದೆ. ವಾರದಲ್ಲೇ ಹೊಸದಾಗಿ ಲಕ್ಷಕ್ಕೂ ಹೆಚ್ಚು ಕೊರೊನಾ ಸೋಂಕುಗಳು ಕಂಡು ಬಂದಿವೆ.

ಈ ಹಿನ್ನೆಲೆಯಲ್ಲಿ ಲಾಕ್‌ಡೌನ್ ಅನಿವಾರ್ಯವಾಗುವತ್ತ ರಾಜ್ಯ ಸಾಗುತ್ತಿದೆ. ಲಾಕ್‌ಡೌನ್ ಘೋಷಣೆಯಾದ ನಂತರ ಜನರ ಮನಸ್ಸಿನಲ್ಲಿ ಯಾವುದೇ ಅನುಮಾನ ಇರದ ರೀತಿಯಲ್ಲಿ ಯೋಜನೆ ರೂಪಿಸಬೇಕು ಎಂದು ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ.

ಸೆಪ್ಟೆಂಬರ್ 2020ರಲ್ಲಿ ಒಂದೇ ದಿನ 24,619 ಸೋಂಕುಗಳು ಕಾಣಿಸಿಕೊಂಡಿದ್ದವು. ಆದರೆ, ಈ ವರ್ಷ ಮಾರ್ಚ್ 27ರಂದು 35,726 ಹೊಸ ಪ್ರಕರಣಗಳು ಕಂಡುಬಂದಿವೆ. ಮುಂದಿನ 24 ಗಂಟೆಗಳಲ್ಲಿ ಸೋಂಕುಗಳ ಸಂಖ್ಯೆ 40 ಸಾವಿರ ದಾಟಲಿದೆ ಎಂದು ಕಾರ್ಯಪಡೆಯ ಸದಸ್ಯರೊಬ್ಬರು ತಿಳಿಸಿದ್ದಾರೆ.

ಸಭೆಯಲ್ಲಿ ಮಾತನಾಡಿದ ಆರೋಗ್ಯ ಇಲಾಖೆಯ ಪ್ರಧಾನ ಕಾರ್ಯದರ್ಶಿ ಡಾ. ಪ್ರದೀಪ್ ವ್ಯಾಸ್, ರಾಜ್ಯದಲ್ಲಿ 3.57 ಲಕ್ಷ ಪ್ರತ್ಯೇಕ ಬೆಡ್‌ಗಳಿದ್ದು, ಇವುಗಳಲ್ಲಿ 1.07 ಲಕ್ಷ ತುಂಬಿವೆ. ಉಳಿದ ಬೆಡ್‌ಗಳೂ ವೇಗವಾಗಿ ತುಂಬಿಕೊಳ್ಳುತ್ತಿವೆ ಎಂದಿದ್ದಾರೆ.

ಪ್ರಸಕ್ತ 60,349 ಆಕ್ಸಿಜನ್ ಬೆಡ್‌ಗಳಿದ್ದು, ಇವುಗಳಲ್ಲಿ 12,701 ತುಂಬಿವೆ. 9,030 ವೆಂಟಿಲೇಟರ್‌ಗಳಿದ್ದು, 1,881 ಬಳಕೆಯಾಗುತ್ತಿವೆ. ಆಸ್ಪತ್ರೆಗೆ ದಾಖಲಾಗಿರುವವರಲ್ಲಿ 8,342 ಜನರಲ್ಲಿ ಲಘು ಲಕ್ಷಣಗಳಿವೆ ಎಂದು ಡಾ. ವ್ಯಾಸ್ ಹೇಳಿದ್ದಾರೆ.

ಕೆಲ ಜಿಲ್ಲೆಗಳಲ್ಲಿ ಈಗ ಯಾವುದೇ ಖಾಲಿ ಬೆಡ್‌ಗಳಿಲ್ಲ. ಇದು ಆರೋಗ್ಯ ವ್ಯವಸ್ಥೆಯ ಮೇಲೆ ಹೆಚ್ಚಿನ ಹೊರೆಯಾಗುತ್ತಿರುವುದನ್ನು ತೋರಿಸುತ್ತದೆ ಎಂದವರು ತಿಳಿಸಿದ್ದಾರೆ.

ಜನರು ಸರಿಯಾದ ಸಮಯದಲ್ಲಿ ಟೆಸ್ಟ್‌ಗೆ ಒಳಗಾಗುತ್ತಿಲ್ಲ ಹಾಗೂ ಕೊರೊನಾ ಮಾರ್ಗಸೂಚಿಗಳನ್ನು ಪಾಲಿಸುತ್ತಿಲ್ಲ. ಇದೇ ವೇಳೆ ಖಾಸಗಿ ಸಂಸ್ಥೆಗಳೂ (2ನೇ ಪುಟಕ್ಕೆ)

# ಹಾಲಿನಂತೆ ಕೃಷಿಯಲ್ಲೂ ಕ್ರಾಂತಿ

### ಮನ್ ಕಿ ಬಾತ್‌ನಲ್ಲಿ ಕೃಷಿ ಆಧುನೀಕರಣಕ್ಕೆ ಪ್ರಧಾನಿ ನರೇಂದ್ರ ಮೋದಿ ಕರೆ

ನವದೆಹಲಿ, ಮಾ. 28 - ಕೃಷಿ ವಲಯದ ಆಧುನೀ ಕರಣಕ್ಕೆ ಈಗಾಗಲೇ ಸಾಕಷ್ಟು ವಿಳಂಬವಾಗಿದ್ದು, ಆಧುನೀಕರಣ ಈ ಸಮಯದ ಅಗತ್ಯವಾಗಿದೆ ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಹೇಳಿದ್ದಾರೆ.

ಮಾಸಿಕ ಮನ್ ಕಿ ಬಾತ್ ರೇಡಿಯೋ ಕಾರ್ಯಕ್ರಮದಲ್ಲಿ ಮಾತನಾಡುತ್ತಿದ್ದ ಅವರು, ಕೃಷಿ ವಲಯದಲ್ಲಿ ಆಧುನಿಕ ಪದ್ಧತಿಗಳನ್ನು ರೂಢಿಸಿಕೊಳ್ಳುವ ಅಗತ್ಯವಿದೆ. ಜೀವನದ ಪ್ರತಿಯೊಂದು ಅಂಶದಲ್ಲೂ ಹೊಸತನ ಹಾಗೂ ಆಧುನೀಕರಣ ಅಗತ್ಯ ಎಂದಿದ್ದಾರೆ.

ಭಾರತದ ಕೃಷಿ ವಲಯದ ಆಧುನೀಕರಣ ಈಗಾಗಲೇ ಸಾಕಷ್ಟು ಸಮಯದಿಂದ ವಿಳಂಬವಾಗಿದೆ. ಹೀಗಾಗಿ ಕೃಷಿ ವಲಯದ ಆಧುನೀಕರಣ ಈಗಿನ ಅಗತ್ಯವಾಗಿದೆ ಎಂದವರು ಹೇಳಿದ್ದಾರೆ.

75ನೇ ಮನ್ ಕಿ ಬಾತ್‌ನಲ್ಲಿ ತಮ್ಮ ವಿಚಾರಗಳನ್ನು ಹಂಚಿಕೊಂಡಿರುವ ಪ್ರಧಾನಿ, ಕೃಷಿಯಲ್ಲಿ ಉದ್ಯೋಗಾವಕಾಶ ಹೆಚ್ಚಿಸಲು ಹಾಗೂ ರೈತರ ಆದಾಯ ಹೆಚ್ಚಿಸಲು ಹೊಸ ಪರ್ಯಾಯಗಳಿಗೆ ಮಹತ್ವ ನೀಡಬೇಕು ಹಾಗೂ ಸಾಂಪ್ರದಾಯಿಕ ಕೃಷಿ ಪದ್ಧತಿಯ ಜೊತೆಗೆ ಅನ್ವೇಷಣೆಗಳನ್ನು ಅಳವಡಿಸಿಕೊಳ್ಳಬೇಕು ಎಂದರು.

ಹಾಲಿನ ವಲಯದಲ್ಲಿ ಕ್ರಾಂತಿಯಾದ ಸಂದರ್ಭಕ್ಕೆ ದೇಶ ಸಾಕ್ಷಿಯಾಗಿದೆ. ಕೃಷಿ ವಲಯಕ್ಕೂ ಸಹ ಇಂತಹ ಪರ್ಯಾಯ ಬೇಕಿದೆ



ಎಂದು ಮೋದಿ ಪ್ರತಿಪಾದಿಸಿದ್ದಾರೆ.

ದೆಹಲಿಯ ಘಾಜಿಪುರ, ಸಿಂಘು ಹಾಗೂ ಟಿಕ್ರಿ ಗಡಿಗಳಲ್ಲಿ ನವೆಂಬರ್‌ನಿಂದ ರೈತರು ಮೂರು ಕೃಷಿ ಕಾಯ್ದೆಗಳ ವಿರುದ್ಧ ಪ್ರತಿಭಟನೆ ನಡೆಸುತ್ತಿದ್ದಾರೆ. ಆ ನಡುವೆಯೇ, ಪ್ರಧಾನ ಮಂತ್ರಿ ಆಧುನಿಕ ಪದ್ಧತಿಗಳಿಗೆ ಕರೆ ನೀಡಿದ್ದಾರೆ.

ಕೃಷಿ ಸುಧಾರಣೆಗಳಿಂದ ರೈತರ ಆದಾಯ ಹೆಚ್ಚಾಗುತ್ತದೆ, ಹೂಡಿಕೆ ಸಿಗುತ್ತದೆ, ಆಧುನಿಕ ಪದ್ಧತಿಗಳನ್ನು ಅಳವಡಿಸಿಕೊಳ್ಳಲು ಸಾಧ್ಯವಾಗುತ್ತದೆ ಹಾಗೂ ಕೃಷಿ ಇಳುವರಿಯನ್ನು ದೇಶಾದ್ಯಂತ ಮಾರಲು ಅವಕಾಶ ಸಿಗುತ್ತದೆ ಎಂದು ಕೇಂದ್ರ ಸರ್ಕಾರ ತಿಳಿಸುತ್ತಿದೆ.

ಜೇನು ಕೃಷಿ ಕುರಿತು ಮಾತನಾಡಿರುವ ಪ್ರಧಾನಿ ಮೋದಿ, ಜೇನು (2ನೇ ಪುಟಕ್ಕೆ)

## ಲಸಿಕಾ ಅಭಿಯಾನಕ್ಕೆ ಮೆಚ್ಚುಗೆ

ಭಾರತದಲ್ಲಿ ನಡೆಯುತ್ತಿರುವ ವಿಶ್ವದ ಅತಿ ದೊಡ್ಡ ಕೊರೊನಾ ಲಸಿಕಾ ಅಭಿಯಾನಕ್ಕೆ ಪ್ರಶಂಸೆ ವ್ಯಕ್ತಪಡಿಸಿರುವ ಪ್ರಧಾನ ಮಂತ್ರಿ ನರೇಂದ್ರ ಮೋದಿ, ಲಸಿಕೆಯ ಜೊತೆಗೆ ಕೊರೊನಾ ಮಾರ್ಗಸೂಚಿಗಳನ್ನು ಪಾಲಿಸಿ ಸೋಂಕು ತಡೆಯಬಹುದು ಎಂದು ಹೇಳಿದ್ದಾರೆ.

ಕಳೆದ ವರ್ಷ ಜನತಾ ಕರ್ಫ್ಯೂ, ಕೊರೊನಾ ವಾರಿಯರ್‌ಗಳಿಗೆ ಗೌರವಿಸಲು ತಟ್ಟೆ ಬಡಿಯಲು ಹಾಗೂ ದೀಪ ಬೆಳಗಲು ಕರೆ ನೀಡಿದ್ದನ್ನೂ ಪ್ರಧಾನಿ ನೆನಪಿಸಿಕೊಂಡಿದ್ದಾರೆ.

ಕಳೆದ ಇಡೀ ವರ್ಷ ನಾವು ನಾಗರಿಕರ ಜೀವ ರಕ್ಷಣೆಗಾಗಿ ಅವಿರತವಾಗಿ ಶ್ರಮಿಸಿದ್ದೆವು. ಆರಂಭದಿಂದಲೇ ಭಾರತೀಯರು ಕೊರೊನಾ ವಿರುದ್ಧ ಸ್ಫೂರ್ತಿಯುತ ಹೋರಾಟ ನಡೆಸಿದ್ದರು ಎಂದು ಮೋದಿ ಹೇಳಿದ್ದಾರೆ.

ಕೊರೊನಾ ಲಸಿಕೆ ಯಾವಾಗ ಸಿಗಲಿದೆ ಎಂಬ ಪ್ರಶ್ನೆ ಕಳೆದ ವರ್ಷ ಇತ್ತು. ವಿಶ್ವದ ಅತಿ ದೊಡ್ಡ ಕೊರೊನಾ ಲಸಿಕೆ ಅಭಿಯಾನ ಈಗ ಭಾರತದಲ್ಲಿ ನಡೆಯುತ್ತಿರುವುದು ನಮಗೆಲ್ಲ ಹೆಮ್ಮೆ. ಜನರು ಲಸಿಕೆ ಪಡೆಯಬೇಕು ಎಂದು ಪ್ರಧಾನಿ ಕರೆ ನೀಡಿದ್ದಾರೆ.

ಕ್ರೀಡಾ ವಲಯದಲ್ಲಿ ಮಹಿಳೆಯರು ಸಾಧನೆ ಮಾಡುತ್ತಿರುವುದನ್ನು ಪ್ರಸ್ತಾಪಿಸಿರುವ ಪ್ರಧಾನ ಮಂತ್ರಿ ನರೇಂದ್ರ ಮೋದಿ, ಮಹಿಳಾ ಕ್ರಿಕೆಟ್ ಆಟಗಾರ್ತಿ ಮಿಥಾಲಿ ರಾಜ್ ಅವರು ಇತ್ತೀಚೆಗೆ 10 ಸಾವಿರ ರನ್ ಗಳಿಸಿದ್ದಕ್ಕೆ ಮತ್ತು ಶೆಟ್ಲರ್ ಪಿ.ವಿ. ಸಿಂಧು ಅವರು ಸ್ವಿಸ್ ಮುಕ್ತ ಪಂದ್ಯಾವಳಿಯಲ್ಲಿ ಎರಡನೇ ಸ್ಥಾನ ಪಡೆದಿದ್ದಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

# ಮೀಸಲಾತಿ: ಮಾತು ತಪ್ಪಿದರೆ ಅ.15ರಂದು ಉಗ್ರ ಹೋರಾಟ



ದಾವಣಗೆರೆ, ಮಾ. 28- ಬರುವ ಸೆ.15ರೊಳಗೆ ಪಂಚಮಸಾಲಿ ಸಮಾಜಕ್ಕೆ 2ಎ ಮೀಸಲಾತಿ ನೀಡದಿದ್ದರೆ ಅಕ್ಟೋಬರ್ 15ರಂದು 25ಲಕ್ಷಕ್ಕೂ ಹೆಚ್ಚು ಜನರನ್ನು ಸೇರಿಸಿ ಬೃಹತ್ ಮಟ್ಟದ ಉಗ್ರ ಹೋರಾಟ ನಡೆಸಲಾಗುವುದು ಎಂದು ಕೂಡಲ ಸಂಗಮ ಪಂಚಮಸಾಲಿ ಪೀಠದ ಶ್ರೀ ಬಸವ ಜಯಮೃತ್ಯುಂಜಯ ಸ್ವಾಮೀಜಿ ಎಚ್ಚರಿಸಿದರು.

ನಗರದಲ್ಲಿರುವ ಮಾಜಿ ಶಾಸಕ ಎಚ್.ಎಸ್ ಶಿವಶಂಕರ್ ನಿವಾಸದಲ್ಲಿ ಭಾನುವಾರ ಮುಂಜಾನೆ ಪತ್ರಿಕಾಗೋಷ್ಠಿ ನಡೆಸಿ ಮಾತನಾಡಿದ ಶ್ರೀಗಳು, ಸಮುದಾಯಕ್ಕೆ 6 ತಿಂಗಳೊಳಗೆ ಮೀಸಲಾತಿ ನೀಡುವುದಾಗಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಸದನದಲ್ಲಿ ಭರವಸೆ ನೀಡಿದ್ದಾರೆ. ಸೆಪ್ಟೆಂಬರ್ 15ರೊಳಗೆ ಮೀಸಲಾತಿ ನೀಡುವ ವಿಶ್ವಾಸವಿದೆ ಎಂದು ಹೇಳಿದರು.

ಮುಖ್ಯಮಂತ್ರಿಗಳು ಕೇವಲ ನಾಲ್ಕು ಗೋಡೆಯ ಮಧ್ಯೆ ನಮಗೆ ಮಾತು ಕೊಟ್ಟಿಲ್ಲ. ಬದಲಾಗಿ ಅಧಿವೇಶನದಲ್ಲಿ ಮಾತು ಕೊಟ್ಟಿದ್ದಾರೆ. ಅದು ದಾಖಲೆಯಾಗಿ ದಾಖಲಾಗಿರುತ್ತದೆ. ಆದ್ದರಿಂದ ಅವರ ಮೇಲೆ ಭರವಸೆ ಇಟ್ಟು ಹೋರಾಟಕ್ಕೆ ಅಲ್ಪ ವಿರಾಮ ನೀಡಲಾಗಿದೆಯೇ ಹೊರತು, ಹೋರಾಟ ಕೈ ಬಿಟ್ಟಿಲ್ಲ ಎಂದು ಹೇಳಿದರು.

ಭಕ್ತರು ಸಮಾಜದ ಬೆನ್ನೆಲುಬು, ನಮ್ಮ ಮತ್ತು ಭಕ್ತರ ಸಂಬಂಧ ತಾಯಿ - ಮಗನ ಸಂಬಂಧ, ಇದು ತಾತ್ಕಾಲಿಕ ವಿರಾಮ ಅಷ್ಟೇ. ಮೀಸಲಾತಿ ಆದೇಶ ಬರುವವರೆಗೂ ಭಕ್ತರೂ ಮೈಮರೆಯಬಾರದು ಎಂದು ಎಚ್ಚರಿಸಿದರು.

**ಲಿಂಗಾಯತ ಪಂಚಮಸಾಲಿ ಎಂದು ಬರೆಯಿಸಿ:** ಸಮಾಜ ಬಾಂಧವರು ಜನಗಣತಿ ಹಾಗೂ ಶಾಲಾ ದಾಖಲಾತಿಗಳಲ್ಲಿ 'ಲಿಂಗಾಯತ ಪಂಚಮಸಾಲಿ' ಎಂದು ಬರೆಸಬೇಕು ಎಂದು ಶ್ರೀಗಳು ಕರೆ ನೀಡಿದರು.

ಈ ರೀತಿ ಬರೆಸದೇ ಇದ್ದರೆ 2ಎ ಮೀಸಲಾತಿ ಸಿಗುವುದು ಕಷ್ಟ. ಆದ್ದರಿಂದ ಸಮಾಜದ ಮುಖಂಡರು ಈಗಿನಿಂದ ಈ ಬಗ್ಗೆ ಅರಿವು ಮೂಡಿಸಬೇಕು ಎಂದು ಹೇಳಿದರು.

23 ದಿನಗಳ ಧರಣಿ ಸತ್ಯಾಗ್ರಹದ ನಂತರ ಹೋರಾಟದಲ್ಲಿ ಭಾಗವಹಿಸಿದ ಸ್ವಾಭಿಮಾನಿ ಬಂಧುಗಳಿಗೆ ಕೃತಜ್ಞತೆ ಸಲ್ಲಿಸಲು 'ಶರಣು ಶರಣಾರ್ಥಿ ಸಂದೇಶ' ಜಾಥಾ ಎಲ್ಲಾ ಕಡೆಯಲ್ಲೂ ಸಂಚರಿಸಿ ಜಾಗೃತಿ ಮೂಡಿಸಲಿದೆ.

ಜಾಥಾ ಜೆ.ಎಚ್.ಪಟೇಲ್ ಸಮಾಧಿ ಸ್ಥಳ ತಲುಪಿ ಅಲ್ಲಿಂದ ಉಡುತಡಿ ತಲುಪಿ ಅಕ್ಕ ಮಹಾದೇವಿ ಪ್ರತಿಮೆಗೆ ನಮಿಸಿ, ಹಿರೇಕೆರೂರಿನಲ್ಲಿ ವಾಸ್ತವ್ಯ ಹೂಡಲಾಗುವುದು ಎಂದರು.

ಹರಿಹರ ಪೀಠದ ಶ್ರೀ ವಚನಾನಂದ ಸ್ವಾಮೀಜಿ ಅವರು ಕಾಲಿನಲ್ಲಿ ಬೊಬ್ಬೆ (2ನೇ ಪುಟಕ್ಕೆ)

# ಕಾಯಕ ಸಿದ್ಧಾಂತ ಪಾಲಿಸುವ ಪ್ಲಂಬರ್‌ಗಳು: ವಚನಾನಂದ ಶ್ರೀ



ದಾವಣಗೆರೆ, ಮಾ. 28 - ಯೋಗ ಎಂದರೆ ಕೂಡಿಸುವುದು ಹಾಗೂ ಜೋಡಿಸುವುದು ಎಂಬ ಅರ್ಥ ಬರುತ್ತದೆ. ಅದೇ ರೀತಿ ಪ್ಲಂಬರ್‌ಗಳೂ ಸಹ ನೀರು ಪೂರೈಕೆಗಾಗಿ ಪೈಪ್ ಜೋಡಿಸುವ - ಕೂಡಿಸುವ ಕೆಲಸ ಮಾಡುತ್ತಾ ಕಾಯಕ ಮಾಡುತ್ತಿದ್ದಾರೆ ಎಂದು ಹರಿಹರದ ವೀರಶೈವ ಪಂಚಮಸಾಲಿ ಗುರುಪೀಠದ ಶ್ರೀ ವಚನಾನಂದ ಸ್ವಾಮೀಜಿ ಹೇಳಿದ್ದಾರೆ.

ನಗರದ ಚನ್ನಗಿರಿ ವಿರೂಪಾಕ್ಷಪ್ಪ ಧರ್ಮಶಾಲೆಯಲ್ಲಿ ಆಯೋಜಿಸಲಾಗಿದ್ದ ಜಿಲ್ಲಾ ಸರ್ ಎಂ. ವಿಶ್ವೇಶ್ವರಾಯ ಕಟ್ಟಡ, ನಲ್ಲಿ ಮತ್ತು ಸ್ಯಾನಿಟರಿ ಕಾರ್ಮಿಕರ ಸಂಘದ ಒಂಭತ್ತನೇ ವರ್ಷದ ವಾರ್ಷಿಕೋತ್ಸವ, ವಿಶ್ವಜಲ ದಿನಾಚರಣೆ, ವಿಶ್ವ ಪ್ಲಂಬರ್‌ಗಳ ದಿನಾಚರಣೆ, ಹಿರಿಯ ಪ್ಲಂಬರ್ ಮೇಸ್ತ್ರಿಗಳಿಗೆ, ಯೋಧರಿಗೆ ಸನ್ಮಾನ, ವಿದ್ಯಾರ್ಥಿಗಳಿಗೆ ಪುರಸ್ಕಾರ, ಯುವ ಮತ್ತು ಹಿರಿಯ ರೈತರಿಗೆ ಗೌರವ ಪುರಸ್ಕಾರದ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಶ್ರೀಗಳು ಮಾತನಾಡುತ್ತಿದ್ದರು.

ಪ್ಲಂಬರ್‌ಗಳು ತನು, ಮನ, ಭಾವ ಶುದ್ಧವಾಗಿ ದುಡಿಯುತ್ತಿದ್ದಾರೆ ಹಾಗೂ ಬಸವಣ್ಣನವರ ಕಾಯಕ ಸಿದ್ಧಾಂತದ ಮೇಲೆ ನಂಬಿಕೆ ಇರಿಸಿದವರಾಗಿದ್ದಾರೆ ಎಂದ ಶ್ರೀಗಳು, ಕಾಯಕ ಮಾಡುವವರು ಸೈನಿಕರು, (2ನೇ ಪುಟಕ್ಕೆ)

## ಮೇ 2 ರ ನಂತರ ಮುಖ್ಯಮಂತ್ರಿ ಬದಲಾವಣೆ : ಶಾಸಕ ಯತ್ನಾಳ್

ರಾಣೇಬೆನ್ನೂರು, ಮಾ.28- ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ರಾಜ್ಯದ ಎಲ್ಲ ಮಾಹಿತಿ ತರಿಸಿಕೊಂಡಿದ್ದಾರೆ. ಮೇ 2 ರ ನಂತರ ಮುಖ್ಯಮಂತ್ರಿ ಯಡಿಯೂರಪ್ಪ ಅವರನ್ನು ಬದಲಾಯಿಸುವ ನಿರ್ಧಾರ



ಕೈಗೊಳ್ಳಲಿದ್ದಾರೆ ಎಂದು ನಿನ್ನೆ ಶರಣು-ಶರಣಾರ್ಥಿ ಕಾರ್ಯಕ್ರಮಕ್ಕೆ ಆಗಮಿಸಿದ್ದ ಬಿಜೆಪಿ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಅವರು ಮಾಧ್ಯಮದ ಜೊತೆ ಮಾತನಾಡುತ್ತಾ ಹೇಳಿದರು.

ಹಿಂದೂಗಳನ್ನು ಬಯ್ಯುವ ಜಮೀರ್ ಆಹ್ಮದ್, ಕಾಂಗ್ರೆಸ್‌ನ ಸಿದ್ರಾಮಯ್ಯ, ಜೆಡಿಎಸ್‌ನ ಕುಮಾರಸ್ವಾಮಿ, ಬೀಗರಾದ ಜಿಪಂ ಅಧ್ಯಕ್ಷ ಮರಿಸ್ವಾಮಿ, ಬಿಜೆಪಿಯ ಕೆಲ ಶಾಸಕರಿಗೆ ಅನುದಾನ ಕೊಡುವ ಯಡಿಯೂರಪ್ಪ ಅವರು, ಉಳಿದ ಶಾಸಕರಿಗೆ ಕೊಡುತ್ತಿಲ್ಲ. ವಿಷ ಕುಡಿಯಲು ಕಾಸಿಲ್ಲ ಎಂದು ಹೇಳುತ್ತಾರೆ. ಇವರದು ಹೊಂದಾಣಿಕೆ ರಾಜಕಾರಣ. ಈ ಎಲ್ಲ ಮಾಹಿತಿ ಪ್ರಧಾನ ಮಂತ್ರಿಗಳ ಗಮನಕ್ಕೆ ಬಂದಿದೆ ಎಂದು ಶಾಸಕ ಯತ್ನಾಳ್ ಹೇಳಿದರು. (2ನೇ ಪುಟಕ್ಕೆ)



**ತಂಪೆರೆದ ಮಳೆ**

ದಾವಣಗೆರೆಯಲ್ಲಿ ಭಾನುವಾರ ಸಂಜೆ ಬಿರುಗಾಳಿ ಸಹಿತ ಕೆಲ ನಿಮಿಷಗಳ ಕಾಲ ಮಳೆ ಸುರಿಯಿತು. ಬಿಸಿಲಿನಿಂದ ಕಂಗೆಟ್ಟಿದ್ದ ನಗರದ ಜನತೆಗೆ ಮಳೆ ತಂಪು ನೀಡಿತು.

## ಕಸಾಪ ರಾಜ್ಯಾಧ್ಯಕ್ಷ ಸ್ಥಾನಕ್ಕೆ ಸಂಗಮೇಶ ಬಾದವಾಡಗಿ ಸ್ಪರ್ಧೆ

ದಾವಣಗೆರೆ, ಮಾ.28- ಕನ್ನಡ ಸಾಹಿತ್ಯ ಪರಿಷತ್ ರಾಜ್ಯಾಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸುತ್ತಿರುವುದಾಗಿ ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ ಗೌರವ ಕಾರ್ಯದರ್ಶಿ ಸಂಗಮೇಶ ಬಾದವಾಡಗಿ ತಿಳಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿಂದು ಮಾತನಾಡಿದ ಅವರು, ತಾವು ಅಧ್ಯಕ್ಷರಾದರೆ, ಗ್ರಾಮೀಣ ಮಟ್ಟಕ್ಕೂ ಸಾಹಿತ್ಯ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳನ್ನು ವಿಸ್ತರಿಸುವುದು, ತಾಲ್ಲೂಕು ಮತ್ತು ಹೋಬಳಿ ಮಟ್ಟದಲ್ಲಿ ಕನ್ನಡ ಭವನಗಳನ್ನು ನಿರ್ಮಿಸಲು ಮುಂದಾಗು ವುದಾಗಿ ಹೇಳಿದರು.

ಪರಿಷತ್ತಿಗೆ ಯುವ ಸದಸ್ಯರನ್ನು ಸೆಳೆಯಲು ಕ್ರಮ ಕೈಗೊಳ್ಳುತ್ತೇನೆ. ಅನ್ಯ ಭಾಷಿಗರಿಗೆ ಕನ್ನಡ ಕಲಿಸುವ ಕಲಿಕಾ ಕೇಂದ್ರಗಳನ್ನು ಆರಂಭಿಸ ಲಾಗುವುದು. ಪರಿಷತ್‌ನ ಚುನಾವಣಾ ವೆಚ್ಚಗಳನ್ನು ಕಡಿತ ಗೊಳಿಸಲು ಚಿಂತಿಸುವುದಾಗಿ ಹೇಳಿದರು. ಶರಣಸಬಪ್ಪ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

## ನಂದಗೋಕುಲ ಪ್ರೌಢಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ಕೋವಿಡ್ ತಪಾಸಣೆ



ದಾವಣಗೆರೆ, ಮಾ.28 - ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ಶಿಕ್ಷಣ ಇಲಾಖೆಯಿಂದ ನಗರದ ಶ್ರೀ ಮಾತಾ ವಿದ್ಯಾಸಂಸ್ಥೆ, ನಂದಗೋಕುಲ ಆಂಗ್ಲ ಮಾಧ್ಯಮ ಪ್ರೌಢಶಾಲೆಯಲ್ಲಿ 210 ವಿದ್ಯಾರ್ಥಿಗಳಿಗೆ ಕೋವಿಡ್-19 ತಪಾಸಣಾ ಶಿಬಿರವನ್ನು ನಡೆಸಲಾಯಿತು.

ಈ ಸಂದರ್ಭದಲ್ಲಿ ಶಿಕ್ಷಣ ಸಂಯೋಜಕ ಡಿ. ನಾಗರಾಜ್, ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಎಂ. ಪಿ ಗಾಯತ್ರಿ, ನೋಡಲ್ ಅಧಿಕಾರಿ ಹೆಚ್. ವಿ. ಶ್ರೀನಿವಾಸ್, ಶಾಲಾ ಕಾರ್ಯದರ್ಶಿ ಶ್ರೀಮತಿ ಅನಸೂಯ.ಬಿ , ಮುಖ್ಯ ಶಿಕ್ಷಕರಾದ ಶ್ರೀಮತಿ ರೆಹಾನಾ ಬಾನು ನಾಸಿಕ ಹಾಗೂ ಮಲ್ಲಿಕಾರ್ಜುನ, ಶಿಕ್ಷಕಿ ಶ್ರೀಮತಿ ಕಸ್ತೂರಿ, ವ್ಯವಸ್ಥಾಪಕಿ ಶ್ರೀಮತಿ ರೇಣುಕಾ ಹಾಜರಿದ್ದರು.

# ಅನ್ನ ನೀಡುವ ರೈತನ ಬಾಳು ಉಜ್ವಲವಾಗಲಿ



**ರಂಭಾಪುರಿ ಶ್ರೀ**

ರಂಭಾಪುರಿ ಪೀಠ (ಬಾಳೆಹೊನ್ನೂರು), ಮಾ.28- ಮನುಷ್ಯ ಬದುಕಿ ಬಾಳಲು ಅನ್ನ ಬೇಕು. ಹಣವಿಲ್ಲದೇ ಬದುಕಬಹುದು. ಆದರೆ ಅನ್ನ, ನೀರಿಲ್ಲದೇ ಬದುಕಲು ಸಾಧ್ಯವಿಲ್ಲ. ದೇಶಕ್ಕೆ ಅನ್ನ ನೀಡುವ ರೈತನ ಬಾಳು ಉಜ್ವಲಗೊಳ್ಳಬೇಕೆಂದು ಶ್ರೀ ರಂಭಾಪುರಿ ಡಾ. ವೀರಸೋಮೇಶ್ವರ ಜಗದ್ಗುರುಗಳು ಅಭಿಪ್ರಾಯಪಟ್ಟರು.

ಅವರು ಶ್ರೀ ರಂಭಾಪುರಿ ಪೀಠದಲ್ಲಿ ಶ್ರೀ ಜಗದ್ಗುರು ರೇಣುಕಾಚಾರ್ಯ ಜಯಂತಿ ಯುಗಮಾನೋತ್ಸವ ಹಾಗೂ ಕ್ಷೇತ್ರನಾಥ ಶ್ರೀ ವೀರಭದ್ರಸ್ವಾಮಿ ಮಹಾರಥೋತ್ಸವದ ಅಂಗವಾಗಿ ಜರುಗಿದ 'ರೈತ ಮತ್ತು ಕೃಷಿ' ಚಿಂತನ ಸಮಾರಂಭದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡುತ್ತಿದ್ದರು.

ಇಂದಿನ ಸ್ಪರ್ಧಾತ್ಮಕ ಪ್ರಪಂಚದಲ್ಲಿ ರೈತನ ಪರಿಸ್ಥಿತಿ ಸಂಕಷ್ಟಕ್ಕೊಳಗಾಗಿದೆ. ಸಾಂಪ್ರದಾಯಿಕ ಕೃಷಿಯಿಂದ ರೈತರ ಬದುಕು ಉಜ್ವಲಗೊಳ್ಳುವುದು ಕಷ್ಟವಾಗಿದೆ. ಸುಧಾರಿತ ಕೃಷಿ ಅಳವಡಿಸಿಕೊಳ್ಳುವ ಅಗತ್ಯ ಬಹಳಷ್ಟಿದೆ ಎಂದರು.

ಉತ್ತಮ ಬೀಜ, ಸಾವಯವ ಗೊಬ್ಬರ ಬಳಕೆ, ನೀರಿನ ಸೌಕರ್ಯ, ಆಧುನಿಕ ಬೇಸಾಯದಿಂದ ರೈತ ಬೆಳೆಯಲು ಸಾಧ್ಯವಾಗುತ್ತದೆ. ಪೃಥ್ವಿ ತತ್ವದ ಅಧಿನಾಯಕರಾದ ಶ್ರೀ ಜಗದ್ಗುರು ರೇಣುಕಾಚಾರ್ಯರು ಕಾಯಕವೇ ಕಳಾ ಚೈತನ್ಯವೆಂದು ಸಾರಿ, ಹಸಿರು ಧ್ವಜ ಎತ್ತಿ ಹಿಡಿದು ಸರ್ವರ ಬಾಳು ಶಾಂತಿ, ಸಮೃದ್ಧಿ ಯಿಂದ ಅಭಿವೃದ್ಧಿ ಹೊಂದಬೇ ಕೆಂದು ಹಾರೈಸಿದ್ದಾರೆ ಎಂದರು.

'ಸಾಧನೆಯ ಸತ್ಪಥ ಭಾಗ-2' ಕೃತಿಯನ್ನು ಬಿಡುಗಡೆ ಮಾಡಿದ ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ಡಿ.ಎನ್. ಜೀವರಾಜ್ ಮಾತನಾಡಿ, ಶ್ರೀ ರಂಭಾಪುರಿ ಪೀಠ ಯಾವಾಗಲೂ ಧರ್ಮ, ಸಂಸ್ಕೃತಿ ಉಳಿಸಿ, ಬೆಳೆಸಿಕೊಂಡು ಬರುವ ನಿಟ್ಟಿನಲ್ಲಿ ಅತ್ಯುತ್ತಮ ಕಾರ್ಯ ಮಾಡುತ್ತಾ ಬಂದಿದೆ. ಅಸಿ, ಮಸಿ, ಕೃಷಿ ನಾಡಿನ ಸಂರಕ್ಷಣೆಗೆ ಬೇಕೇಬೇಕು. ದೇಶ ಕಾಯುವ ಸೈನಿಕ, ಉತ್ತಮ ಸಾಹಿತ್ಯ ಸಂರಕ್ಷಣೆ ಮತ್ತು ಕೃಷಿ ಇವುಗಳತ್ತ ಎಲ್ಲರ ಒಲವು, ಸಹಕಾರ ಬೇಕಾಗುತ್ತದೆ. ಸಾಧನೆಯ ಸತ್ಪಥ ಕೃತಿ ಶ್ರೀ ರಂಭಾಪುರಿ ಜಗದ್ಗುರುಗಳವರ ಆದರ್ಶ ಚಿಂತನೆಗ ಳನ್ನು ಒಳಗೊಂಡು ಮೌಲ್ಯಾಧಾರಿತ ಬದುಕಿಗೆ ಈ ಕೃತಿ ಸಾಕ್ಷಿಯಾಗಿದೆ ಎಂದರು. ವಿ.ಪ. ಸದಸ್ಯ ಎಸ್. ಎಲ್. ಭೋಜೇಗೌಡರು ಮಾತನಾಡಿದರು.

ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮದ ಅಧ್ಯಕ್ಷ, ಶಾಸಕ ಕಳಕಪ್ಪ ಬಂಡಿ, ಅ.ಭಾ.ವೀ. ಮಹಾಸಭಾ ಜಿಲ್ಲಾಧ್ಯಕ್ಷ ಹೆಚ್.ಎಂ.ಲೋಕೇಶ್, ಜಿ.ಪಂ.ಮಾಜಿ ಉಪಾಧ್ಯಕ್ಷ ಎಂ.ಎಸ್. ಚನ್ನಕೇಶವ್, ಬೆಂಗಳೂರಿನ ಮಂಜುನಾಥ ಆರಾಧ್ಯ, ಚಿಕ್ಕಮಗಳೂರು ವೀರಶೈವ ಸಮಾಜದ ಕಾರ್ಯ ದರ್ಶಿ ಜಗದೀಶ್ ನುಡಿ ನಮನ ಸಲ್ಲಿಸಿದರು.

ಪ್ರಗತಿಪರ ಕೃಷಿಕ ಚಂದ್ರಶೇಖರ ನಾರಾಯಣಪುರ 'ನೈಸರ್ಗಿಕ ಕೃಷಿ' ಕುರಿತು ಉಪನ್ಯಾಸ ನೀಡಿದರು. ನೆಗಳೂರಿನ ಶ್ರೀ ಗುರುಶಾಂತೇಶ್ವರ ಶಿವಾಚಾರ್ಯರು ರೈತರ ಸಮಕಾಲೀನ ಸಮಸ್ಯೆ ಪರಿಹಾರ ಕುರಿತು ಮಾತನಾಡಿದರು. ಸೂಡಿ ಜುಕ್ತಿ ಹಿರೇಮಠದ ಡಾ॥ ಕೊಟ್ಟೂರು ಬಸವೇಶ್ವರ ಶಿವಾಚಾರ್ಯರು ನೇತೃತ್ವ ವಹಿಸಿ, ಕೃಷಿ ಕ್ಷೇತ್ರದ ಹರವು ವಿಸ್ತಾರಗಳ ಕುರಿತು ಮಾಹಿತಿ ನೀಡಿದರು. ನೀಲಗಲ್ಲ ಹಿರೇಮಠದ ಶ್ರೀ ಪಂಚಾಕ್ಷರ ಶಿವಾಚಾರ್ಯರು, ತರೀಕೆರೆ ಹಿರೇಮಠದ ಶ್ರೀ ಜಗದೀಶ್ವರ ಶಿವಾಚಾರ್ಯರು, ಲೋಕೋಪ ಯೋಗಿ ಇಲಾಖೆ ಕಾರ್ಯದರ್ಶಿ ಡಾ. ಕೆ.ಎಸ್. ಕೃಷ್ಣಾರೆಡ್ಡಿ, ಬೆಂಗಳೂರಿನ ಶ್ರೀನಿವಾಸ ರೆಡ್ಡಿ, ಶಿವಮೊಗ್ಗದ ಹನಸವಾಡಿ ಕೇಶವಮೂರ್ತಿ, ಗ್ರಂಥ ದಾನಿ ಎಂ.ಕೊಟ್ರೇಶಪ್ಪ ಹರಪನಹಳ್ಳಿ ಇವರಿಗೆ ಶ್ರೀ ರಂಭಾಪುರಿ ಜಗದ್ಗುರುಗಳು ಗುರುರಕ್ಷೆಯಿತ್ತು ಶುಭ ಹಾರೈಸಿದರು.

ಗ್ರಾ.ಪಂ.ಸದಸ್ಯ ಬಿ. ಜಗದೀಶ್ಚಂದ್ರ ಸ್ವಾಗತಿಸಿದರು. ಡಾ॥ ಗುರುಪಾದಯ್ಯ ಸಾಲಿಮಠ ನಿರೂಪಿಸಿದರು.

## ಅ.15ರಂದು ಉಗ್ರ ಹೋರಾಟ

(1ನೇ ಪುಟದಿಂದ) ಬಂದರೂ ಹೋರಾಟದಲ್ಲಿ ಪಾಲ್ಗೊಂಡಿದ್ದರು. ಧರಣಿಯಲ್ಲಿ ಪಾಲ್ಗೊಳ್ಳುವಂತೆ ವಿಜಯಾನಂದ ಕಾಶಪ್ಪನವರ ಮನವಿ ಮಾಡಿದ್ದರು. ಆದರೆ ಅವರು ತುರ್ತು ಕೆಲಸಗಳು ಇರುವುದಾಗಿ ಧರಣಿಯಿಂದ ಹಿಂದೆ ಸರಿದರು ಎಂದು ಪ್ರಶ್ನೆಯೊಂದಕ್ಕೆ ಶ್ರೀಗಳು ಉತ್ತರಿಸಿದರು.

ಮಾಜಿ ಶಾಸಕ ವಿಜಯಾನಂದ ಕಾಶಪ್ಪನವರ ಮಾತನಾಡಿ, ಸಚಿವ ಮುರುಗೇಶ ನಿರಾಣಿ ಅವರು 'ಎಲ್ಲಿ ಹೋಗಿದೆ ಮಾಡು ಇಲ್ಲವೇ ಮಡಿ ಹೋರಾಟ' ಎಂದು ನಮ್ಮ ಹೋರಾಟದ ಬಗ್ಗೆ ಅಪಹಾಸ್ಯ ಮಾಡಿದ್ದಾರೆ. ನಾವು ಮುಖ್ಯಮಂತ್ರಿಗಳ ಭರವಸೆ ಮೇಲೆ ಹೋರಾಟಕ್ಕೆ ವಿರಾಮ ನೀಡಿದ್ದೇವೆ ಎಂದರು.

ಹೋರಾಟದ ಬಗ್ಗೆ ಹಗುರವಾಗಿ ಮಾತನಾಡಬೇಡಿ. ಮತ್ತೆ ಮೀಸಲಾತಿ ಕಲ್ಪಿಸುವಲ್ಲಿ ವಿಳಂಬವಾದರೆ ಮಾಡು ಇಲ್ಲವೇ ಮಡಿ ಹೋರಾಟ ಆರಂಭಿಸುತ್ತೇವೆ ಎಂದು ನಿರಾಣಿ ವಿರುದ್ಧ ವಾಗ್ದಾಳಿ ನಡೆಸಿದರು.

ಜಿಲ್ಲಾ ಘಟಕದ ಅಧ್ಯಕ್ಷ ಅಶೋಕ್ ಗೋಪನಾಳ್, ಮಲ್ಲಿಕಾರ್ಜುನ ಅಕ್ಕಿ, ಪಾಲಿಕೆ ಸದಸ್ಯ ಸೋಗಿ ಶಾಂತಕುಮಾರ್ ಪತ್ರಿಕಾಗೋಷ್ಠಿಯಲ್ಲಿದ್ದರು.

## ಮಲೇಬೆನ್ನೂರಿನಲ್ಲಿ ಮನೆಯ ಮುಂದೆ ಹೋಳಿ ಆಚರಿಸಿದ ಚಿಣ್ಣರು



ಮಲೇಬೆನ್ನೂರು, ಮಾ.28- 2ನೇ ಹಂತದಲ್ಲಿ ಕೊರೊನಾ ಸೋಂಕು ಹರಡುತ್ತಿರುವ ಹಿನ್ನೆಲೆಯಲ್ಲಿ ಸರ್ಕಾರ ಹೋಳಿ, ಜಾತ್ರೆ, ಹಬ್ಬಗಳನ್ನು ರದ್ದು ಪಡಿಸಿರುವ ಹಿನ್ನೆಲೆಯಲ್ಲಿ ಮಲೇಬೆನ್ನೂರಿನಲ್ಲಿ ಭಾನುವಾರ ಮಕ್ಕಳು ತಮ್ಮ ಮನೆಗಳ ಮುಂದೆ ಪರಸ್ಪರ ಬಣ್ಣ ಎರಚಿ, ಹೋಳಿ ಹಬ್ಬ ಆಚರಿಸಿ, ಸಂಭ್ರಮಿಸಿದರು.

## ಹರಿಹರದಲ್ಲಿ ಸಂಭ್ರಮದ ಕಾಮದಹನ



ಹರಿಹರ, ಮಾ.28- ನಗರದಲ್ಲಿ ಕಾಮದಹನ ಹಬ್ಬವನ್ನು ಸಡಗರ ಸಂಭ್ರಮದಿಂದ ಆಚರಿಸಲಾಯಿತು.

ನಗರದ ನಡವಲಪೇಟೆ ಯುವಕ ಸಂಘದಿಂದ ರತಿ ಮನ್ಮಥ ಮೂರ್ತಿಯನ್ನು ಪ್ರತಿಷ್ಠಾಪಿಸಿ, ವಿಶೇಷ ಪೂಜೆ ಸಲ್ಲಿಸಿ ನಂತರದಲ್ಲಿ ಕಾಮದಹನ ಮಾಡಲಾಯಿತು.

ಹಾಗ' ನಗರದ ಹೊಸ ಭರಂಪುರ, ಹವಳದ ಬೀದಿ, ಹೈಸ್ಕೂಲ್ ಬಡಾವಣೆ, ಕೋಟೆ ಬಡಾವಣೆ, ದೇವಸ್ಥಾನ ರಸ್ತೆ, ವಿಜಯನಗರ ಬಡಾವಣೆ, ಹರ್ಲಾಪುರ ಬಡಾವಣೆ, ಹಳ್ಳದಕೇರಿ ಬಡಾವಣೆ, ಕೈಲಾಸನಗರ, ಕಾಳಿದಾಸ ನಗರ, ಟಿಪ್ಪುನಗರ, ಎ.ಕೆ. ಕಾಲೊನಿ, ವಾಗೀಶ್ ನಗರ, ದೊಡ್ಡಿಬೀದಿ, ವಿದ್ಯಾನಗರ, ಗಾಂಧಿನಗರ ಮುಂತಾದ ಬಡಾವಣೆಗಳಲ್ಲಿ ರತಿ ಮನ್ಮಥ ಮೂರ್ತಿ ಪ್ರತಿಷ್ಠಾಪಿಸಿ ಪೂಜೆ ಸಲ್ಲಿಸಿ, ದುರ್ಗುಣಗಳನ್ನು ಸುಡುವ ಸಂಕೇತವಾಗಿ ತಡರಾತ್ರಿ ಯುವಕರು ಬೊಬ್ಬೆ ಹಾಕಿ, ಶಿಳ್ಳೆ ಹೊಡೆದು, ಬಾಯಿ ಬಾಯಿ ಬಡಿದುಕೊಂಡು ಹಲಗೆ ಭಾರಿಸುವ ಮೂಲಕ ಮನೆ ಮನೆಗೆ ಹೋಗಿ ಶೇಖರಿಸಿದ ಕುಳ್ಳು, ಕಟ್ಟಿಗೆಗಳಿಂದ ಕಾಮದಹನ ನಡೆಸಿದರು.

ಬೆಳಿಗ್ಗೆ 7 ಗಂಟೆಗೆ ಯುವಕರು ಪರಸ್ಪರ ಬಣ್ಣವನ್ನು ಎರಚುವ ಮೂಲಕ ರಂಗುರಂಗಿನ ಹೋಳಿ ಹಬ್ಬವನ್ನು ಸಡಗರ ಸಂಭ್ರಮದಿಂದ ಆಚರಣೆ ಮಾಡಿದರು.

ಈ ಸಂದರ್ಭದಲ್ಲಿ ಮಾಜಿ ಶಾಸಕ ಬಿ.ಪಿ. ಹರೀಶ್, ನಗರಸಭೆ ಸದಸ್ಯರಾದ ಲಕ್ಷ್ಮಿ ದುರುಗೋಜಿ ಮೋಹನ್, ಸಿದ್ದೇಶ್, ಮುಖಂಡರಾದ ಮಹೇಂದ್ರಕರ್ ಜಗದೀಶ್, ರಾಕೇಶ್, ಚಂದನ್ ಮೂರ್ಕಲ್, ರಾಘವೇಂದ್ರ,

## ಕೊಮಾರನಹಳ್ಳಿಯಲ್ಲಿ ಕ್ರಿಕೆಟ್ ಟೂರ್ನಿಗೆ ಚಾಲನೆ




ಮಲೇಬೆನ್ನೂರು, ಮಾ.28 - ಕೊಮಾರನಹಳ್ಳಿ ಗ್ರಾಮದಲ್ಲಿ ಫ್ರೆಂಡ್ಸ್ ಕ್ರಿಕೆಟರ್ಸ್ ವತಿಯಿಂದ ಪ್ರಥಮ ಬಾರಿಗೆ ಹಮ್ಮಿಕೊಂಡಿದ್ದ 3 ದಿನಗಳ ಟೆನ್ನಿಸ್ ಬಾಲ್ ಕ್ರಿಕೆಟ್ ಟೂರ್ನಿಯನ್ನು ಶನಿವಾರ ಜಿ.ಪಂ. ಸದಸ್ಯ ಬಿ. ಎಂ. ವಾಗೀಶ್ ಸ್ವಾಮಿ ಉದ್ಘಾಟಿಸಿದರು.

ನಂತರ ಜಿಲ್ಲಾ ಬಿಜೆಪಿ ಅಧ್ಯಕ್ಷ ಹನಗವಾಡಿ ವೀರೇಶ್ ಬ್ಯಾಟಿಂಗ್ ಮಾಡುವ ಮೂಲಕ್ ಆಟಕ್ಕೆ ಚಾಲನೆ ನೀಡಿದರು.

ಹಾಲಿವಾಣ ಗ್ರಾ.ಪಂ. ಅಧ್ಯಕ್ಷ ಐ.ಪಿ. ರಂಗನಾಥ್, ಸಮಾಜ ಸೇವಕ ನಂದಿಗಾವಿ ಶ್ರೀನಿವಾಸ್, ದಿಶಾ ಕಮಿಟಿ ಸದಸ್ಯ ಐರಣಿ ಅಣ್ಣಪ್ಪ, ಗ್ರಾ.ಪಂ. ಸದಸ್ಯರಾದ ಶ್ರೀಮತಿ ನೇತ್ರಾವತಿ ಹನುಮಂತ, ಐರಣಿ ಮಹೇಶ್ವರಪ್ಪ, ಮಲೇಬೆನ್ನೂರು ಪುರಸಭೆಯ ನಾಮಿನಿ ಸದಸ್ಯ ಪಿ.ಆರ್. ರಾಜು, ಆರೋಗ್ಯ ರಕ್ಷಾ ಸಮಿತಿ ಸದಸ್ಯ ಬಿ. ಮಂಜುನಾಥ್, ಫ್ರೆಂಡ್ಸ್ ಕ್ರಿಕೆಟರ್ಸ್‌ನ ಸುನೀಲ್, ಹಾಲೇಶ್, ಚಿದು, ಚೇತನ್ ಮತ್ತಿತರರು ಈ ವೇಳೆ ಹಾಜರಿದ್ದರು.

ಸೋಮವಾರ ಸಂಜೆ ಸಮಾರೋಪ ಹಾಗೂ ವಿಜೇತ ತಂಡಗಳಿಗೆ ಬಹುಮಾನ ವಿತರಣೆ ಕಾರ್ಯಕ್ರಮ ನಡೆಯಲಿದೆ.

## ಪಾಲಿಕೆ ಸದಸ್ಯರಿಂದ 'ಶಿಕ್ಷಣ ಹಕ್ಕು ಅಭಿಯಾನ'



ದಾವಣಗೆರೆ, ಮಾ.28- ಧ್ವನಿ ಲೀಗಲ್ ಟ್ರಸ್ಟ್ ಕಾನೂನು ನೆರವು ಸಂಸ್ಥೆ ಬೆಂಗಳೂರು ಹಾಗೂ ದಾವಣಗೆರೆ ಮಹಾನಗರ ಪಾಲಿಕೆ ಸದಸ್ಯ ಗಡಿಗುಡಾಳ್ ಮಂಜುನಾಥ್ ಸಹಯೋಗದೊಂದಿಗೆ, ಶಿಕ್ಷಣ ಹಕ್ಕು ಅಭಿಯಾನ ನಡೆಯುತ್ತಿದ್ದು, ಆರ್‌ಟಿಇ ಮೂಲಕ ಖಾಸಗಿ ಅನುದಾನ ರಹಿತ ಶಾಲೆಗಳಲ್ಲಿ ಪ್ರವೇಶ ಪಡೆಯಲು ಸಾರ್ವಜನಿಕರಿಗೆ ಅನುಕೂಲವಾಗಲು ಈ ಅಭಿಯಾನವನ್ನು ಹಮ್ಮಿಕೊಳ್ಳಲಾಗಿದೆ. ನಾಗರಿಕರು ಇದರ ಸದುಪಯೋಗ ಪಡೆದು ಕೊಳ್ಳಬೇಕೆಂದು ಪಾಲಿಕೆ ಸದಸ್ಯ ಮಂಜುನಾಥ್ ವಿನಂತಿಸಿಕೊಂಡಿದ್ದಾರೆ.

## ಮುಖ್ಯಮಂತ್ರಿ ಬದಲಾವಣೆ : ಶಾಸಕ ಯತ್ನಾಳ್

(1ನೇ ಪುಟದಿಂದ) ಸಿಡಿಯಲ್ಲಿ ಕಾಂಗ್ರೆಸ್ ಮಹಾನಾಯಕನ ಹೆಸರು ಬಹಿರಂಗಗೊಂಡಂತೆ, ಬಿಜೆಪಿ ಯುವರಾಜನ ಹೆಸರೂ ಬಹಿರಂಗಗೊಳ್ಳಲಿದೆ. ಇವರ ಬಳಿ ಶಾಸಕರ, ಸಂಸದರ, ಅಧಿಕಾರಿಗಳ ಎಲ್ಲರ ಸಿಡಿಗಳಿವೆ.

ಅವರೆಲ್ಲರನ್ನೂ ಹೆದರಿಸುವುದು ಇವರ ಕೆಲಸ. ಎಲ್ಲಾ ಪಕ್ಷಗಳಲ್ಲೂ ಭ್ರಷ್ಟರ ಹಾಗೂ ಪ್ರಾಮಾಣಿಕರ ಎರಡು ಗುಂಪುಗಳ ಶಾಸಕರಿದ್ದಾರೆ ಎಂದು ಯತ್ನಾಳ್ ಹೇಳಿದರು. ಇದುವರೆಗೂ ಒಂದೇ ಒಂದು ಬಾರಿ ಬಿಜೆಪಿ ಶಾಸಕಾಂಗದ ಸಭೆ ಕರೆದಿಲ್ಲ. ನನ್ನ ವಿರುದ್ಧ ಒಬ್ಬ ಶಾಸಕರೂ ಸಹಿ ಮಾಡಿಲ್ಲ. ಎಲ್ಲ ಶಾಸಕರು ನನ್ನ ಪರವಾಗಿ ರುವುದಾಗಿ ಸಹಿ ಮಾಡಿಸಲು ಬಂದವರಿಗೆ ಹೇಳಿದ್ದಾರೆ. ಕರ್ನಾಟಕದಲ್ಲಿ ಯಡಿಯೂರಪ್ಪ ಕುಟುಂಬದ ಸರ್ಕಾರ ಇದೆ. ಮೋದಿ ಅವರು ಕುಟುಂಬ ರಾಜಕಾರಣದ ವಿರುದ್ಧವಿದ್ದಾರೆ. ಮೇ 2 ರ ನಂತರ ಗಟ್ಟಿ ನಿರ್ಧಾರ ಬರಲಿದೆ ಎಂದು ಯತ್ನಾಳ್ ವಿಶ್ವಾಸ ವ್ಯಕ್ತ ಪಡಿಸಿದರು.

## ಕಾಯಕ ಸಿದ್ಧಾಂತ ಪಾಲಿಸುವ ಪ್ಲಂಬರ್‌ಗಳು

(1ನೇ ಪುಟದಿಂದ) ರೈತರು ಹಾಗೂ ಕೊರೊನಾ ವಾರಿಯರ್‌ಗಳ ರೀತಿಯಲ್ಲಿ ಯೋಧರು ಎಂದು ಬಣ್ಣಿಸಿದರು.

ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಮೇಯರ್ ಎಸ್.ಟಿ. ವೀರೇಶ್, ಸಂಘಟನೆಯ ಮೂಲಕ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬಹುದು. ದಾವಣಗೆರೆ ಕಾರ್ಮಿಕ ಸಂಘಟನೆಗಾಗಿ ಹೆಸರಾಗಿದ್ದು, ಪ್ಲಂಬರ್‌ಗಳೂ ಸಂಘಟಿತರಾಗಿ ಸರ್ಕಾರದ ಸೌಲಭ್ಯಗಳನ್ನು ಪಡೆಯಬೇಕು ಎಂದು ತಿಳಿಸಿದರು.

ದೂಡಾ ಅಧ್ಯಕ್ಷ ರಾಜನಹಳ್ಳಿ ಶಿವಕುಮಾರ್ ಮಾತನಾಡಿ, ಕಾರ್ಮಿಕ ಇಲಾಖೆಯಲ್ಲಿ ನೋಂದಣಿಯಾದರೆ ಕಟ್ಟಡ ನಿರ್ಮಾಣ ಕಾರ್ಮಿಕರಾದ ಪ್ಲಂಬರ್‌ಗಳಿಗೆ ಸಾಕಷ್ಟು ಸೌಲಭ್ಯಗಳು ಸಿಗುತ್ತವೆ. ಆದರೆ, ಸಾಕಷ್ಟು ಕಾರ್ಮಿಕರು ಅವುಗಳನ್ನು ಬಳಸಿಕೊಳ್ಳುತ್ತಿಲ್ಲ. ಕಾರ್ಮಿಕರೆಲ್ಲರೂ ನೋಂದಣಿ ಮಾಡಿಸಿಕೊಳ್ಳ ಬೇಕು ಎಂದು ಕಿವಿಮಾತು ಹೇಳಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಕಾರ್ಮಿಕರ ಸಂಘದ ಪ್ರಧಾನ ಕಾರ್ಯದರ್ಶಿ ಶಿವಕುಮಾರ್ ಡಿ. ಶೆಟ್ಟರ್, ಸರ್ಕಾರದಿಂದ ಪ್ಲಂಬರ್‌ಗಳಿಗೆ 75ರಿಂದ 80ರಷ್ಟು ಸೌಲಭ್ಯಗಳು ಸಿಗುತ್ತವೆ. 18 ವರ್ಷ ಮೀರಿದ ಎಲ್ಲ ಪ್ಲಂಬರ್‌ಗಳು ನೋಂದಣಿ ಮಾಡಿಸಿಕೊಳ್ಳಬೇಕು ಎಂದು ಕರೆ ನೀಡಿದರು.

ಕಾರ್ಮಿಕರ ಸಂಘದ ಅಧ್ಯಕ್ಷ ಎನ್. ವೀರಣ್ಣ ಮಾತನಾಡಿ, ಪಾಲಿಕೆಯಿಂದ ಕಡಿಮೆ ಬಾಡಿಗೆಯಲ್ಲಿ ಸಂಘದ ಕಚೇರಿಗೆ ಮಳಿಗೆಯೊಂದನ್ನು ನೀಡಬೇಕು ಹಾಗೂ ದೂಡಾದಿಂದ ಕಚೇರಿ ಕಟ್ಟಡಕ್ಕಾಗಿ ನಿವೇಶನ ನೀಡಬೇಕು ಎಂದು ಮನವಿ ಮಾಡಿಕೊಂಡರು.

ವಿರಕ್ತಮಠದ ಶ್ರೀ ಬಸವಪ್ರಭು ಸ್ವಾಮೀಜಿ ಸಮಾರಂಭದ ಸಾನ್ನಿಧ್ಯ ವಹಿಸಿದ್ದರು.

ಈ ಸಂದರ್ಭದಲ್ಲಿ ಸಪ್ತಗಿರಿ ಏಜೆನ್ಸೀಸ್‌ನ ಎಸ್.ಎಸ್ ರಮೇಶ್, ಅಂದನೂರು ಸೆರಾಮಿಕ್ಸ್‌ನ ಅಂದನೂರು ಬಾಬಣ್ಣ, ಎಸ್.ಕೆ. ವೀರಭದ್ರಪ್ಪ ಅಂಡ್ ಕೋ ನ ಎಸ್.ಎಸ್. ಗಿರೀಶ್, ಘಾಟ್ಕೆ ಎಂಟರ್‌ಪ್ರೈಸಸ್‌ನ ಸಿದ್ದಿವಿನಾಯಕ, ಎಸ್.ವಿ. ಮಾರ್ಕೆಟಿಂಗ್‌ನ ಎಸ್.ವಿ. ವೇಣುಗೋಪಾಲ್, ಅಭಿಯಂತರರಾದ ಪ್ರಕಾಶ್ ಮೂಳೆ, ಎ.ಬಿ. ರವಿ, ಅಸ್ಟ್ರಲ್ ಕಂಪನಿಯ ಸತೀಶ್, ಸಂತೋಷ್ ಮಾಯಗಿರಿ ಆಶೀರ್ವಾದ್ ಕಂಪನಿಯ ಎ. ಆರ್. ಶರಣ್ ಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

ಜಯಶ್ರೀ ಶೆಟ್ಟರ್ ಪ್ರಾರ್ಥಿಸಿದರೆ, ಎಸ್. ಹೊಳೆಯಪ್ಪ ಸ್ವಾಗತಿಸಿದರು.

## ಏ.17 ರೊಳಗೆ ಸದಾಶಿವ ಆಯೋಗದ ವರದಿ ಜಾರಿಗೆ ಕೇಂದ್ರಕ್ಕೆ ಶಿಫಾರಸ್ಸು ಮಾಡಲಿ

ದಾವಣಗೆರೆ, ಮಾ.28- ಸದಾಶಿವ ಆಯೋಗ ವರದಿ ಜಾರಿ ಕುರಿತಂತೆ ಏಪ್ರಿಲ್ 17ರ ಒಳಗೆ ವಿಶೇಷ ಅಧಿವೇಶನ ಕರೆದು ನಿರ್ಣಯ ತೆಗೆದುಕೊಂಡು ಜಾರಿಗಾಗಿ ಕೇಂದ್ರಕ್ಕೆ ಶಿಫಾರಸ್ಸು ಮಾಡಬೇಕು ಎಂದು ಕರ್ನಾಟಕ ಮಾದಾರ ಚನ್ನಯ್ಯ ಸೇನೆಯ ರಾಜ್ಯಾಧ್ಯಕ್ಷ ಕೆ.ಎಂ. ಜಯಗೋಪಾಲ್ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರಿಗೆ ಒತ್ತಾಯಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿಂದು ಮಾತನಾಡಿದ ಅವರು, ಮಾದಿಗ ಸಮಾಜದ ಜನಸಂಖ್ಯೆ ರಾಜ್ಯದಲ್ಲಿ ಶೇ.8ರಷ್ಟಿದೆ.

ಸುಮಾರು 78 ಲಕ್ಷ ಸಂಖ್ಯೆಯುಳ್ಳ ದೊಡ್ಡ ಸಮಾಜವಾಗಿದೆ. ಈ ಸಮಾಜವನ್ನು ಆರ್ಥಿಕ, ಸಾಮಾಜಿಕ, ರಾಜಕೀಯವಾಗಿ ಮುಖ್ಯವಾಹಿನಿಗೆ ತರಲು ಸದಾಶಿವ ಆಯೋಗದ ವರದಿ ಜಾರಿಯ ತುರ್ತು ಅಗತ್ಯವಿದೆ ಎಂದು ಹೇಳಿದರು


ಯಾವುದೇ ಅಭಿವೃದ್ಧಿ ಮಂಡಳಿ ಹಾಗೂ ಸದನದ ಉಪ ಸಮಿತಿ ರಚನೆಗಳು ಕೇವಲ ಕಣ್ಣೊರೆಸುವ ತಂತ್ರಗಳಾಗಿವೆ ಎಂದ ಅವರು, ಮುಖ್ಯಮಂತ್ರಿಗಳು ಸಾಮಾಜಿಕ ನ್ಯಾಯದ ತಳಹದಿ ಮೇಲೆ ಆಯೋಗದ ವರದಿ ಬಗ್ಗೆ ಅವಲೋಕಿಸಬೇಕು. ಏ.17ರೊಳಗೆ ವರದಿ ಜಾರಿಗೆ ಕ್ರಮ ಕೈಗೊಳ್ಳದಿದ್ದರೆ ಮುಂದಿನ ಚುನಾವಣೆಗಳಲ್ಲಿ ನೋಟಾ ಮತದಾನ ಮಾಡುವುದಾಗಿ ಎಚ್ಚರಿಸಿದರು.

ಶಿಕಾರಿಪುರ ತಾಲ್ಲೂಕಿನ ಬಳ್ಳಿಗಾವಿಯಲ್ಲಿ ಮಾದಾರ ಚನ್ನಯ್ಯನ ಸಂತತಿ ಇದ್ದು, ಆ ಪ್ರದೇಶದಲ್ಲಿ ವಚನಗಾರರ ಅಧ್ಯಯನ ಕೇಂದ್ರವನ್ನು ಸ್ಥಾಪಿಸುವ ಮೂಲಕ ಅಭಿವೃದ್ಧಿ ಪಡಿಸಬೇಕು. ಅದಕ್ಕಾಗಿ ವಿಶೇಷ ಹಣಕಾಸು ನಿಧಿ ಬಿಡುಗಡೆ ಮಾಡಬೇಕು ಎಂದು ಇದೇ ಸಂದರ್ಭದಲ್ಲಿ ಒತ್ತಾಯಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಸೇನೆಯ ರಾಜ್ಯ ಗೌರವಾಧ್ಯಕ್ಷ ಎಲ್.ಎಂ. ಹನುಮಂತಪ್ಪ, ಮುಖಂಡರುಗಳಾದ ಮಹೇಂದ್ರ, ಮಲ್ಲೇಶ್ ಕುಕ್ಕುವಾಡ, ಬಸವರಾಜ್ ಹಾಗೂ ಇತರರು ಉಪಸ್ಥಿತರಿದ್ದರು.

## ಕೊರೊನಾ : ಮಹಾರಾಷ್ಟ್ರದಲ್ಲಿ ಅತಿ ಹೆಚ್ಚಿನ ಪಾಸಿಟಿವ್ ಸರಾಸರಿ

ನವದೆಹಲಿ, ಮಾ. 28 – ದೇಶದಲ್ಲಿ ಕೊರೊನಾ ಪಾಸಿಟಿವ್ ಸರಾಸರಿ ದರ ಶೇ.5.04 ಇದ್ದರೆ, ಮಹಾರಾಷ್ಟ್ರದಲ್ಲಿ ಅತಿ ಹೆಚ್ಚಿನ ಶೇ.22.78ರಷ್ಟಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ. ಅಂದರೆ, ಮಹಾರಾಷ್ಟ್ರದಲ್ಲಿ ಪರೀಕ್ಷೆಗೆ ಗುರಿಯಾದ ಪ್ರತಿ ಐವರಲ್ಲಿ ಒಬ್ಬರಿಗೆ ಕೊರೊನಾ



ಸೋಂಕಿರುವುದು ಕಂಡು ಬರುತ್ತಿದೆ.

ಚಂಡೀಘಡದಲ್ಲಿ ಈ ಪ್ರಮಾಣ ಶೇ.11.85, ಪಂಜಾಬ್‌ನಲ್ಲಿ ಶೇ.8.45, ಗೋವಾದಲ್ಲಿ ಶೇ.7.03, ಪುದುಚೇರಿಯಲ್ಲಿ ಶೇ.6.85, ಛತ್ತೀಸ್‌ಘಡದಲ್ಲಿ ಶೇ.6.79, ಮಧ್ಯ ಪ್ರದೇಶದಲ್ಲಿ ಶೇ.6.65 ಹಾಗೂ ಹರಿಯಾಣದಲ್ಲಿ ಶೇ.5.41ರಷ್ಟಿದೆ. ಮಧ್ಯಪ್ರದೇಶ, ರಾಜಸ್ಥಾನ, ಉತ್ತರ ಪ್ರದೇಶ, ಗುಜರಾತ್ ಹಾಗೂ ಮಹಾರಾಷ್ಟ್ರಗಳು ಪ್ರತಿ ದಶಲಕ್ಷಕ್ಕೆ ಹೋಲಿಸಿದರೆ ಅತಿ ಕಡಿಮೆ ಪರೀಕ್ಷೆ ನಡೆಸಿವೆ. ರಾಷ್ಟ್ರೀಯ ಸರಾಸರಿ ಪರೀಕ್ಷೆ ಪ್ರತಿ ದಶಲಕ್ಷ ಜನಸಂಖ್ಯೆಗೆ 1.74 ಲಕ್ಷವಾಗಿದೆ.

## ಮತ್ತೆ ಲಾಕ್‌ಡೌನ್‌ನತ್ತ ಮಹಾರಾಷ್ಟ್ರ

(1ನೇ ಪುಟದಿಂದ) ಸಹ ಶೇ.50ರಷ್ಟು ಉದ್ಯೋಗಿಗಳಿಗೆ ಮಾತ್ರ ಬರಲು ಹೇಳಬೇಕು ಎಂಬ ನಿಯಮ ಪಾಲಿಸುತ್ತಿಲ್ಲ. ರೋಗಿಗಳು ಮನೆಯಲ್ಲಿ ಪ್ರತ್ಯೇಕವಾಗಿರುವ ಬಗ್ಗೆಯೂ ಉಡಾಫೆ ಇದೆ ಎಂದು ಆರೋಗ್ಯ ಇಲಾಖೆ ತಿಳಿಸಿದೆ. ಕೊರೊನಾ ರೋಗಿಗಳಿಗೆ ಅಗತ್ಯ ಪ್ರಮಾಣದ ಆಕ್ಸಿಜನ್ ಪೂರೈಕೆ ಮಾಡಲು ಸೂಚನೆ ನೀಡಲಾಗಿದೆ. ಕೈಗಾರಿಕೆಗಳು ಶೇ.80ರಷ್ಟು ಆಕ್ಸಿಜನ್ ಅನ್ನು ಚಿಕಿತ್ಸೆಗೆ ರವಾನಿಸಬೇಕು ಹಾಗೂ ಉಳಿದದ್ದನ್ನು ಬೇರೆ ಉದ್ದೇಶಕ್ಕೆ ಬಳಸಬೇಕು ಎಂದು ಮುಖ್ಯಮಂತ್ರಿ ಸಭೆಯಲ್ಲಿ ತಿಳಿಸಿದ್ದಾರೆ.

ಕೊರೊನಾ ವೈರಸ್ ಹರಡುವುದನ್ನು ತಡೆಯುವ ಸಲುವಾಗಿ ಮಾರ್ಚ್ 28ರಿಂದ ರಾಜ್ಯದಲ್ಲಿ ರಾತ್ರಿ ವೇಳೆ 144 ಸೆಕ್ಷನ್ ವಿಧಿಸಲಾಗಿದೆ. ರಾಜಕೀಯ ಸೇರಿದಂತೆ ಎಲ್ಲಾ ರೀತಿಯ ಸಮಾರಂಭಗಳ ಮೇಲೆ ನಿಷೇಧ ಹೇರಲಾಗಿದೆ. ರೆಸ್ಟೋರೆಂಟ್ ಹಾಗೂ ಮಾಲ್‌ಗಳು ರಾತ್ರಿ 8ರಿಂದ ಬೆಳಿಗ್ಗೆ 7ರವರೆಗೆ ಬಂದ್ ಆಗಿರಬೇಕೆಂದು ತಿಳಿಸಲಾಗಿದೆ.

## ಕೃಷಿಯಲ್ಲೂ ಕ್ರಾಂತಿ

(1ನೇ ಪುಟದಿಂದ) ಕೃಷಿಯು ದೇಶದಲ್ಲಿ ಸಿಹಿ ಕ್ರಾಂತಿಯ ಅಡಿಪಾಯವಾಗುತ್ತಿದೆ. ಪಶ್ಚಿಮ ಬಂಗಾಳದ ಸುಂದರಬನದ ನೈಸರ್ಗಿಕ ಜೇನು ತುಪ್ಪಕ್ಕೆ ದೇಶದಲ್ಲಷ್ಟೇ ಅಲ್ಲದೇ ವಿಶ್ವದಾದ್ಯಂತ ಬೇಡಿಕೆ ಇದೆ ಎಂದವರು ಹೇಳಿದ್ದಾರೆ.

ಗುಜರಾತ್‌ನ ಬನಸ್ಕಾಂತ ಹಾಗೂ ಹರಿಯಾಣದ ಯಮುನಾ ನಗರಗಳಲ್ಲಿ ರೈತರು ಜೇನು ಕೃಷಿಯ ಮೂಲಕ ಆದಾಯ ಹೆಚ್ಚಿಸಿಕೊಂಡಿ ರುವುದು ಉತ್ತಮ ಉದಾ ಹರಣೆಯಾಗಿದೆ ಎಂದೂ ಅವರು ಹೇಳಿದ್ದಾರೆ. ಜೇನು ಸಾಕಣೆಯಿಂದ ಜೇನು ತುಪ್ಪ ವಷ್ಟೇ ಅಲ್ಲದೇ ಮೇಣದಿಂದಲೂ ದೊಡ್ಡ ಪ್ರಮಾ ಣದ ಆದಾಯ ಪಡೆಯಬಹುದು. ಔಷಧ, ಆಹಾರ, ಜವಳಿ ಹಾಗೂ ಪ್ರಸಾದನ ಸೇರಿ ದಂತೆ ಹಲವಾರು ವಲಯಗಳಲ್ಲಿ ಮೇಣಕ್ಕೆ ಬೇಡಿಕೆ ಇದೆ ಎಂದವರು ತಿಳಿಸಿದ್ದಾರೆ.

ಪ್ರಸಕ್ತ ಮೇಣವನ್ನು ಆಮದು ಮಾಡಿಕೊಳ್ಳಲಾಗುತ್ತಿದೆ. ರೈತರು ವೇಗವಾಗಿ ಬದಲಾವಣೆ ಕಂಡರೆ ನಾವು ಈ ವಿಷಯದಲ್ಲಿ ಆತ್ಮನಿರ್ಭರ್ ಆಗಬಹುದಾಗಿದೆ ಎಂದು ಮೋದಿ ತಿಳಿಸಿದ್ದಾರೆ.

### ಗಾಳಿಯೂ ದೀಪವೂ



ಬಯಲೊಳಗೆ
ದೀಪ
ಹಚ್ಚುವುದೂ
ಜನರ ಮನಸ
ಗೆಲುವುದೂ
ಎಷ್ಟು ಕಷ್ಟವೋ ಮಹಾರಾಯ.

ದೀಪ ಹಾರಿಸ ಬರುವ ಗಾಳಿಗೆ
ತುಸುಕರಣೆ ಒಂಚೂರು ಪ್ರೀತಿ
ವಿಶಾಲ ಹೃದಯವಂತಿಕೆ
ಇರಲಿ.

ದೀಪ ಆರದಂತಿರಲಿ ಹಾಗೇ
ಜನಮನವೂ ಒಳಿತ
ಮಾಡುವಾಗ
ಸ್ಪಂದನೆಯ
ಕಳೆದುಕೊಳ್ಳದಿರಲಿ....

- ಆರ್. ಶಿವಕುಮಾರಸ್ವಾಮಿ
ಕುರ್ಕಿ

## ಅಕ್ರಮ ಸ್ಫೋಟಕ ವಸ್ತುಗಳ ವಶ : ಇಬ್ಬರ ಬಂಧನ

ದಾವಣಗೆರೆ, ಮಾ.28- ಅಕ್ರಮವಾಗಿ ಸ್ಫೋಟಕ ವಸ್ತುಗಳ ಸಾಗಾಣಿಕೆ ಮತ್ತು ಮಾರಾಟ ಪ್ರಕರಣಕ್ಕೆ ಸಂಬಂಧಿಸಿದಂತೆ ಇಬ್ಬರು ಅಂತರ ರಾಜ್ಯಗಳ ಆರೋಪಿಗಳನ್ನು ದಾವಣಗೆರೆ ಗ್ರಾಮಾಂತರ ಉಪ ವಿಭಾಗದ ಡಿವೈಎಸ್ಪಿ ನರಸಿಂಹ ವಿ.ತಾಮ್ರಧ್ವಜ ನೇತೃತ್ವದ ತಂಡ ಬಂಧಿಸಿದೆ.

ಆಂಧ್ರ ಪ್ರದೇಶದ ಕರ್ನೂಲ್ ಜಿಲ್ಲೆ ಸಂತನಪುರಂನ ಹೊಸ ಪೋಸ್ಟಲ್ ಕಾಲನಿಯ, ಮೂಲತಃ ತೆಲಂಗಾಣ ರಾಜ್ಯದ ಮಹಬೂಬ್ ನಗರ ಜಿಲ್ಲೆ ಮೆಡಿಕೊಂಡ ಗ್ರಾಮದ ಬ್ಲಾಸ್ಟರ್ ಕೆಲಸಗಾರ ರಾಮರೆಡ್ಡಿ ಅಲಿಯಾಸ್ ಚೈತನ್ಯ ಅಲಿಯಾಸ್ ರಾಮಗೋಪಾಲ ರೆಡ್ಡಿ (44), ಆಂಧ್ರದ ಕರ್ನೂಲ್ ನಗರದ ವೆಂಕಟರಮಣ ಕಾಲೋನಿಯ ವಿಜಯ ಜನರಲ್ ಸ್ಟೋರ್‌ನ ಮಾಲೀಕ ಅನುಮುಲ್ ಶಿವಕುಮಾರ (36) ಬಂಧಿತರು.

ಬಂಧಿತರಿಂದ ಅಕ್ರಮವಾಗಿ ಸ್ಫೋಟಕ ಸಾಮಗ್ರಿಗಳನ್ನು ಪರವಾನಿಗೆ ಇಲ್ಲದೇ ಇರುವಂತಹ ವ್ಯಕ್ತಿಗಳಿಗೆ ಮಾರಾಟ ಮಾಡುತ್ತಿದ್ದರು. ಈ ಹಿನ್ನೆಲೆಯಲ್ಲಿ ರಾಮರೆಡ್ಡಿ ಹಾಗೂ ಅನುಮುಲ್ ಶಿವಕುಮಾರನನ್ನು ಮಾ.25ರಂದು ಆಂಧ್ರದ ಹೈದರಾಬಾದ್ ಮತ್ತು ಕರ್ನೂಲ್ ನಗರದಿಂದ ಬಂಧಿಸಿ, ದಾವಣಗೆರೆಗೆ ಕರೆ ತರಲಾಯಿತು. ಆರೋಪಿಗಳು ನ್ಯಾಯಾಂಗ ಬಂಧನದಲ್ಲಿದ್ದು, ಮುಂದಿನ ತನಿಖೆ ಕೈಗೊಳ್ಳಲಾಗಿದೆ.

ಎಸ್‌ಐಗಳಾದ ಲಿಂಗನಗೌಡ ನೆಗಳೂರು, ಪುಷ್ಪಲತಾ, ಸಿಬ್ಬಂದಿಯಾದ ದೇವೇಂದ್ರ ನಾಯ್ಕ, ಮಂಜನಗೌಡ, ಮಹೇಶರನ್ನು ಒಳಗೊಂಡ ತಂಡ ಕಾರ್ಯಾಚರಣೆ ನಡೆಸಿತ್ತು.

## ಬೈಕ್ ಸವಾರ ಬದುಕುಳಿಸಲು ನೆರವಾದ ಶಾಸಕ ಮಾಡಾಳ್



ದಾವಣಗೆರೆ, ಮಾ.28- ರಸ್ತೆ ಅಪಘಾತವಾಗಿ ನರಳಾಡುತ್ತಿದ್ದ ಬೈಕ್ ಸವಾರನಿಗೆ ಚಿಕಿತ್ಸೆ ಕೊಡಿಸಿ ಬದುಕುಳಿಸಲು ನೆರವಾಗುವ ಮುಖೇನ ಶಾಸಕ ಮಾಡಾಳ್ ವಿರುಪಾಕ್ಷಪ್ಪ ಮಾನವೀಯತೆ ಮೆರೆದಿದ್ದಾರೆ.

ತಾಲ್ಲೂಕಿನ ದೇವರಹಳ್ಳಿ ಗ್ರಾಮದ ಬಳಿ ಹರಪನಹಳ್ಳಿ ಮೂಲದ ಬೈಕ್ ಸವಾರನಿಗೆ ಅಪಘಾತವಾಗಿ ರಸ್ತೆ ಬದಿ ನರಳಾಡುತ್ತಿದ್ದ. ಅದೇ ಮಾರ್ಗ ದಲ್ಲಿ ಸಾಗುತ್ತಿದ್ದ ಶಾಸಕ ಮಾಡಾಳ್ ವಿರುಪಾಕ್ಷಪ್ಪ ಇದನ್ನು ಗಮನಿಸಿ ಕಾರಿನಿಂದ ಇಳಿದು ಗಾಯಾಳುವಿಗೆ ಪ್ರಾಥಮಿಕ ಚಿಕಿತ್ಸೆ ಕೊಡಿಸಿ ನಂತರ ದಾವಣಗೆರೆ ಜಿಲ್ಲಾಸ್ಪತ್ರೆಗೆ 108 ಅಂಬ್ಯುಲೆನ್ಸ್ ಮುಖಾಂತರ ಕಳುಹಿಸಿದರು.

## ರೇಣುಕಾಚಾರ್ಯ ಐಟಿಐ-ಚೈತನ್ಯ ಧಾಮ ಕಟ್ಟಡ ಲೋಕಾರ್ಪಣೆ



ಬಾಳೆಹೊನ್ನೂರು, ಮಾ.28- ಶ್ರೀ ಜಗದ್ಗುರು ರಂಭಾಪುರಿ ಪೀಠದಿಂದ ನಿರ್ಮಿಸಿರುವ ಶ್ರೀ ಜಗದ್ಗುರು ರೇಣುಕಾಚಾರ್ಯ ಕೈಗಾರಿಕಾ ತರಬೇತಿ ಕೇಂದ್ರ ಮತ್ತು ಶಿವಾಚಾರ್ಯ ಚೈತನ್ಯ ಧಾಮ ನೂತನ ಕಟ್ಟಡ ಉದ್ಘಾಟನೆಯನ್ನು ಶ್ರೀ ರಂಭಾಪುರಿ ಮತ್ತು ಶ್ರೀ ಕೇದಾರ ಜಗದ್ಗುರುಗಳು ಇತ್ತೀಚೆಗೆ ನೆರವೇರಿಸಿದರು.

ಶ್ರೀ ರಂಭಾಪುರಿ ಡಾ. ವೀರಸೋಮೇಶ್ವರ ಜಗದ್ಗುರುಗಳು ತಮ್ಮ ಆಶೀರ್ವಚನದಲ್ಲಿ, ಕೈಗಾರಿಕಾ ತರಬೇತಿ ಕೇಂದ್ರವನ್ನು ಲಿಂ. ಶ್ರೀ ರಂಭಾಪುರಿ ವೀರ ರುದ್ರಮುನಿ ಜಗದ್ಗುರುಗಳವರು ಸಂಸ್ಥಾಪಿಸಿ, ಗ್ರಾಮೀಣ ಭಾಗದ ಬಡ ವಿದ್ಯಾರ್ಥಿಗಳ ಬೆಳವಣಿಗೆಗೆ ಶ್ರಮಿಸಿದ್ದರು. ಹಳೆ ಕಟ್ಟಡವನ್ನು ತೆಗೆದು 2 ಕೋಟಿ ರೂ. ವೆಚ್ಚದಲ್ಲಿ ಸುಸಜ್ಜಿತ ಕಟ್ಟಡವನ್ನು ನಿರ್ಮಿಸಲಾಗಿದೆ ಎಂದರು.

ಮಠಾಧೀಶರಿಗೆ ತಂಗಲು ವಿಶೇಷ ಗಮನ ಹರಿಸಿ, ಸುಮಾರು ಒಂದೂವರೆ ಕೋಟಿ ರೂ. ವೆಚ್ಚದಲ್ಲಿ ಶಿವಾಚಾರ್ಯ ಚೈತನ್ಯ ಧಾಮ ನೂತನ ಕಟ್ಟಡವನ್ನು ನಿರ್ಮಿಸಿ ಲೋಕಾರ್ಪಣೆ ಮಾಡಲಾಗಿದೆ ಎಂದರು. ಶ್ರೀ ಕೇದಾರ ಭೀಮಾಶಂಕರ ಜಗದ್ಗುರುಗಳು ಪಾಲ್ಗೊಂಡು ಸಂದೇಶ ಅನುಗ್ರಹಿಸಿದರು.

ಚಿಕ್ಕಮಗಳೂರು ಜಿಲ್ಲಾ ಪಂಚಾಯ್ತಿ ಮಾಜಿ ಉಪಾಧ್ಯಕ್ಷ ಎಂ.ಎಸ್. ಚನ್ನಕೇಶವ, ಕಟ್ಟಡ ಗುತ್ತಿಗೆದಾರ ವೀರೇಶ್ ಪಾಟೀಲ, ಪ್ರಾಂಶುಪಾಲ ಹೆಚ್. ಆರ್. ಆನಂದ್ ಹಾಗೂ ಶಿಕ್ಷಕ ವೃಂದದವರು ಹಾಜರಿದ್ದರು.

## ಸಿಗಂಧೂರು-ಕೊಲ್ಲೂರು ನಡುವೆ ದೇಶದ ಎರಡನೇ ಅತಿ ದೊಡ್ಡ ಕೇಬಲ್ ಬ್ರಿಡ್ಜ್ ಕಾಮಗಾರಿ

ಜಿಗಳಿ ಪ್ರಕಾಶ್

ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನ ಶರಾವತಿ ನದಿ ಹಿನ್ನೀರಿಗೆ (ಲಿಂಗನಮಕ್ಕಿ ಜಲಾಶಯದ ಹಿನ್ನೀರು) ಕೇಬಲ್ ಆಧಾರಿತ ಸೇತುವೆಯನ್ನು ನಿರ್ಮಿಸಲಾಗುತ್ತಿದ್ದು, ಉತ್ತರ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳನ್ನು ಅತಿ ಸಮೀಪದಲ್ಲಿ ಸಂಪರ್ಕಿಸುವ ಸಂಪರ್ಕ ಸೇತುವೆ ಇದಾಗಲಿದೆ.


2.14 ಕಿ.ಮೀ. ಉದ್ದದ ಈ ಸೇತುವೆ 16 ಮೀಟರ್ ಅಗಲವಿದ್ದು, 423 ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣಗೊಳ್ಳುತ್ತಿರುವ ಕೇಬಲ್ ಆಧಾರಿತ ಸೇತುವೆ ಟೆಂಡರ್ ನಿಯಮದ ಪ್ರಕಾರ 2023ರ ಜೂನ್ ವೇಳೆಗೆ ಸಂಚಾರಕ್ಕೆ ಸಿದ್ದಗೊಳ್ಳಲಿದೆ.

ಬಿ.ಎಸ್. ಯಡಿಯೂರಪ್ಪನವರು ಮೊದಲ ಬಾರಿಗೆ ಮುಖ್ಯಮಂತ್ರಿಗಳಾದ ಸಂದರ್ಭದಲ್ಲಿ ಈ ಸಂಪರ್ಕ ಸೇತುವೆಗೆ ಬಜೆಟ್‌ನಲ್ಲಿ ಹಣ ಮೀಸಲಿಡಲಾಗಿದ್ದು, ಕಾರಣಾಂತರಗಳಿಂದ ಕಾರ್ಯರೂಪಕ್ಕೆ ಬರದೆ, 2018ರಲ್ಲಿ ಕೇಂದ್ರ ಸಚಿವ ನಿತಿನ್ ಗಡ್ಕರಿ ಅವರಿಂದ ಕಾಮಗಾರಿ ಚಾಲನೆಗೊಂಡಿದ್ದು, ಸಂಸದ ಬಿ.ವೈ. ರಾಘವೇಂದ್ರ, ಶಾಸಕ ಹರತಾಳು ಹಾಲಪ್ಪ ಇವರ ನಿರಂತರ ಪ್ರಯತ್ನದ ಫಲವಾಗಿ ಈ ಸಂಪರ್ಕ ಸೇತುವೆ ಕಾಮಗಾರಿ ಪ್ರಾರಂಭವಾಗಿದೆ ಎಂಬುದು ಸ್ಥಳೀಯರ ಅಭಿಪ್ರಾಯ.

ಶ್ರೀಕ್ಷೇತ್ರ ಸಿಗಂಧೂರು, ಕೊಲ್ಲೂರು ಸೇರಿದಂತೆ ಮತ್ತಿತರೆ ಪ್ರಮುಖ ದೇವಸ್ಥಾನಗಳಿಗೆ ನಿತ್ಯ ತೆರಳುವ ಭಕ್ತರಿಗೆ ಈ ಸಂಪರ್ಕ ಸೇತುವೆ ತುಂಬಾ ಅನುಕೂಲವಾಗಿದೆ. ರಸ್ತೆ ಮೂಲಕ ಹೋಗುವುದಾದರೆ 80 ಕಿ.ಮೀ. ಕ್ರಮಿಸಿ ಹೋಗಬೇಕಾಗಿದ್ದು, ಲಾಂಚ್ ಇರುವುದರಿಂದ ಪ್ರಯಾಣಿಕರಿಗೆ ಅನುಕೂಲವಾಗಿದೆ. ಸೇತುವೆ ನಿರ್ಮಾಣದಿಂದ ವಾರ್ಷಿಕ ಸುಮಾರು 32 ಕೋಟಿ ರೂ. ಇಂಧನ ಉಳಿತಾಯವಾಗಲಿದೆ. ರಸ್ತೆ ಸಂಪರ್ಕ ಇಲ್ಲದೆ ಅಭಿವೃದ್ಧಿಯಿಂದ ವಂಚಿತವಾಗಿದ್ದ ಶರಾವತಿ, ಹೊಳಬಾಗಿಲು, ಸಿಗಂಧೂರು, ತುಮರಿ, ಕಳಸವಲ್ಲಿ, ಕರೂರು ಸೇರಿದಂತೆ ಇನ್ನೂ ಅನೇಕ ಗ್ರಾಮಗಳಿಗೆ ಈಗ ಜೀವಕಳೆ ಬಂದಂತಾಗಿದೆ.

1963 ರಿಂದಲೂ ಈ ಸಂಪರ್ಕ ಸೇತುವೆ ನಿರ್ಮಾಣಕ್ಕಾಗಿ ನಿರಂತರ ಹೋರಾಟ ಮಾಡುತ್ತಿದ್ದ ಈ ಭಾಗದ ಜನರ ಕನಸು ನನಸಾಗಿದೆ. ಕೇಂದ್ರ ಸರ್ಕಾರದ ಭಾರತ್ ಮಾಲಾ ಯೋಜನೆಯಡಿ ನಿರ್ಮಾಣಗೊಳ್ಳುತ್ತಿರುವ ಈ ಸಂಪರ್ಕ ಸೇತುವೆ 18 ಗೋಪುರಗಳನ್ನು ಒಳಗೊಂಡಿದೆ. ಭಾರತದ 2ನೇ ಅತಿ ದೊಡ್ಡ ಕೇಬಲ್ ಆಧಾರಿತ ಸೇತುವೆ ಎಂಬ ಹೆಗ್ಗಳಿಕೆಗೂ ಪಾತ್ರವಾಗಲಿರುವ ಸಿಗಂಧೂರು ಸಂಪರ್ಕ ಸೇತುವೆ ಮಲೆನಾಡಿನ ಪ್ರಕೃತಿಯ ಸೊಬಗನ್ನು ಮತ್ತಷ್ಟು ಹೆಚ್ಚಿಸಲಿದೆ.





ಮಲೆನಾಡಿನ ಪ್ರಕೃತಿಯ ಸೊಬಗನ್ನು ಮತ್ತಷ್ಟು ಹೆಚ್ಚಿಸಲಿದೆ...

ಸಾಂದರ್ಭಿಕ ಚಿತ್ರ



18 ಗೋಪುರಗಳನ್ನು ಒಳಗೊಂಡಿರುವ ಕೇಬಲ್ ಆಧಾರಿತ ಸೇತುವೆ...

## ಆರೋಗ್ಯದ ನಿರ್ಲಕ್ಷ್ಯ ಸಲ್ಲದು



**ಜಗಳೂರಿನಲ್ಲಿ ಡಾ.ಚೆನ್ನಾರೆಡ್ಡಿ**

ಜಗಳೂರು, ಮಾ. 28- ದಿನನಿತ್ಯ ಒತ್ತಡದ ಜೀವನದಲ್ಲಿ ಕಾಯಿಲೆಗಳ ಬಗ್ಗೆ ನಿರ್ಲಕ್ಷ್ಯವಹಿಸುವುದರಿಂದ ಹಲವಾರು ಸಮಸ್ಯೆಗಳನ್ನು ಎದುರಿಸುವಂತೆ ಆಗಿದೆ ಎಂದು ಚಿತ್ರದುರ್ಗ ಬಸವೇಶ್ವರ ಆಸ್ಪತ್ರೆ ವೈದ್ಯ ಡಾ. ಚೆನ್ನಾರೆಡ್ಡಿ ಹೇಳಿದರು.

ತಾಲ್ಲೂಕಿನ ಹುಚ್ಚವ್ವನಹಳ್ಳಿ ಗ್ರಾಮದಲ್ಲಿ ಶ್ರೀ ಸೌಖ್ಯ ಯುಮೇನಿಟೇನ್ ಫೌಂಡೇಶನ್ ಹಾಗೂ ಹುಚ್ಚವ್ವನಹಳ್ಳಿ ಗ್ರಾಮಾಭಿವೃದ್ಧಿ ಸಂಘದ ಸಂಯುಕ್ತಾಶ್ರಯದಲ್ಲಿ ಏರ್ಪಡಿಸಿದ್ದ ಉಚಿತ ಆರೋಗ್ಯ ತಪಾಸಣಾ ಶಿಬಿರದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಇಂದಿಗೂ ಸಹ ಗ್ರಾಮೀಣ ಭಾಗದ ಜನರಿಗೆ ವಿವಿಧ ಕಾಯಿಲೆಗಳ ಮಾಹಿತಿ ಇರುವುದಿಲ್ಲ. ದುಬಾರಿ ಚಿಕಿತ್ಸಾ ವೆಚ್ಚ ಹಾಗು ಔಷಧಗಳನ್ನು ಕೊಂಡುಕೊಳ್ಳುವ ಶಕ್ತಿ ಇರುವುದಿಲ್ಲ. ಅಂತಹ ಕುಟುಂಬಗಳಿಗೆ ಉಚಿತ ಆರೋಗ್ಯ ಶಿಬಿರದ ಮೂಲಕ ಸಮಾಜಕ್ಕಾಗಿ ಪುಟ್ಟ ಅಳಿಲು ಸೇವೆ ಮಾಡುವ ಇಚ್ಛೆ ಹೊಂದಲಾಗಿದೆ ಎಂದರು.

ಇದೇ ಹಳ್ಳಿಯಲ್ಲಿ ಹುಟ್ಟಿ ಬೆಳೆದ ನಾವುಗಳು ವೈದ್ಯರಾಗಿ ಬಂದು ನಮ್ಮ ಹಳ್ಳಿಯ ಜನರಿಗಾಗಿ ಸೇವೆ ಮಾಡುವ ಮೂಲಕ ಹುಟ್ಟಿದ ಊರಿನ ಋಣ ತೀರಿಸಬೇಕಿದೆ. ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೆ ನಮ್ಮ ಗ್ರಾಮದ ಸಹೋದ್ಯೋಗಿಗಳೊಂದಿಗೆ ಸೇರಿ ಸತತ ಎರಡನೇ ಆರೋಗ್ಯ ಶಿಬಿರವನ್ನು ನಡೆಸುತ್ತಿದ್ದೇವೆ ಎಂದರು.

ಮತ್ತೋರ್ವ ವೈದ್ಯ ಡಾ. ಆರ್.ಜೆ. ಹರೀಶ್ ಮಾತನಾಡಿ, ಗ್ರಾಮಸ್ಥರು ಹಾಗು ಸ್ಥಳೀಯ ಜನಪ್ರತಿನಿಧಿಗಳ ಸಹಕಾರದಿಂದ ನಮ್ಮ ಸಂಸ್ಥೆಯಿಂದ ಸತತ ಎರಡನೇ ಬಾರಿ ನಡೆಸಿದ ಉಚಿತ ಆರೋಗ್ಯ ತಪಾಸಣಾ ಶಿಬಿರದಲ್ಲಿ ಸಾಕಷ್ಟು ಮಹಿಳೆಯರು, ಮಕ್ಕಳು, ವಯೋವೃದ್ಧರು, ಜನಸಾಮಾನ್ಯರು ಚಿಕಿತ್ಸೆ ಪಡೆದುಕೊಂಡಿದ್ದಾರೆ. ಹಳ್ಳಿಯ ಜನಕ್ಕೆ ಇಂತಹ ಮಹತ್ವದ ಕಾರ್ಯ ಮಾಡಿದ ತೃಪ್ತಿ ನಮಗೆ ಇದೆ. ಇದೇ ಸಹಕಾರ ಮುಂದುವರೆದರೆ ಪ್ರತಿ ತಿಂಗಳ ಕೊನೆ ಭಾನುವಾರ ಆಯೋಜಿಸಿರುವ ಶಿಬಿರಕ್ಕೆ ವಿವಿಧ ಭಾಗಗಳಿಂದ ನುರಿತ ವೈದ್ಯರನ್ನು ಕರೆಸಿ ಹೆಚ್ಚಿನ ತಪಾಸಣೆ ನಡೆಸಲಾಗುವುದು ಎಂದರು.

ಗ್ರಾ.ಪಂ. ಉಪಾಧ್ಯಕ್ಷ ಎಲ್. ಆರ್. ಅನೂಪ್ ಮಾತನಾಡಿ, ಇಂದು ಹಳ್ಳಿಯಲ್ಲಿ ಹುಟ್ಟಿ ಬೆಳೆದಂತಹವರು ಮತ್ತೆ ಹಳ್ಳಿಗಳ ಕಡೆ ಮುಖ ಮಾಡುವುದು ತೀರಾ ವಿರಳ. ಅಂತಹದರಲ್ಲಿ ವಿವಿಧ ಜಿಲ್ಲೆಗಳ ಪ್ರತಿಷ್ಠಿತ ಆಸ್ಪತ್ರೆಗಳಲ್ಲಿ ಸೇವೆ ಮಾಡಿದ ವೈದ್ಯರು ಇಂದು ನಮ್ಮ ಹಳ್ಳಿಗೆ ಉಚಿತ ಸೇವೆ ಮಾಡಲು ಬಂದಿರುವುದು ಸಂತಸ ತಂದಿದೆ. ನಮ್ಮ ಗ್ರಾಮ ಪಂಚಾಯ್ತಿ ವತಿಯಿಂದ ಅಗತ್ಯ ಸಹಕಾರ ನೀಡುತ್ತೇವೆ ಎಂದರು. ಟ್ರಸ್ಟ್ ಸದಸ್ಯರಾದ ಅಶ್ವಿನಿ ಅಭಿಷೇಕ್, ಆರೋಗ್ಯ ಸೇವಾ ಸಿಬ್ಬಂದಿಗಳು, ಗ್ರಾಮಸ್ಥರಿದ್ದರು.

## 'ಬಾಪೂ' ವಿಶಿಷ್ಟ ರಂಗ ಪ್ರಯೋಗದ ನಟ-ನಟಿಯರ ಆಯ್ಕೆ ಪ್ರಕ್ರಿಯೆ

ದಾವಣಗೆರೆ, ಮಾ.28- ಉಲ್ಟಾ ಪಲ್ಟಾ ನಿರ್ದೇಶಕ ಎನ್.ಎಸ್. ಶಂಕರ್ ಅವರು ಗಾಂಧೀಜಿ ಆಶಯಗಳನ್ನು ಬಿಂಬಿಸುವ 'ಬಾಪೂ' ವಿಶಿಷ್ಟ ರಂಗ ಪ್ರಯೋಗವನ್ನು ಕೈಗೆತ್ತಿಕೊಂಡಿದ್ದು, ಗಾಂಧೀಜಿ ಪಾತ್ರ ಹಾಗು ಇತರೆ ಪಾತ್ರಗಳಿಗೆ ನಟ-ನಟಿಯರ ಆಯ್ಕೆ ಪ್ರಕ್ರಿಯೆ ನಾಡಿದ್ದು ದಿನಾಂಕ 30 ರ ಮಂಗಳವಾರ ಮಧ್ಯಾಹ್ನ 12 ಗಂಟೆಗೆ ಬೆಂಗಳೂರಿನ ಕುಮಾರ ಕೃಪ ರಸ್ತೆಯ ಚಿತ್ರಕಲಾ ಪರಿಷತ್ತಿನ ಗಾಂಧಿ ಭವನದಲ್ಲಿ ನಡೆಯಲಿದೆ.

ಈ ರಂಗ ಪ್ರಯೋಗದಲ್ಲಿ ಮೂರು ತಿಂಗಳು ಇಡಿಯಾಗಿ ತೊಡಗಿಸಿಕೊಳ್ಳಬಲ್ಲ ಆಯ್ಕೆಯಾದ ನಟ-ನಟಿಯರಿಗೆ ಸಂಭಾವನೆ ಇರುತ್ತದೆ. ಆಸಕ್ತರು 98442 68176ಗೆ ಕರೆ ಮಾಡಿ ಹೆಸರು ನೋಂದಾಯಿಸಿಕೊಳ್ಳುವಂತೆ ಬಾಪೂ ನಾಟಕದ ಸಂಚಾಲಕ ಎಸ್.ಎಸ್. ಸಿದ್ದರಾಜು ಕೋರಿದ್ದಾರೆ.

## ಹಡಗಲಿಯಲ್ಲಿ ಸಾಧಕರಿಗೆ ಸನ್ಮಾನ



ಹೂವಿನಹಡಗಲಿ, ಮಾ.28- ಸ್ಥಳೀಯವಾಗಿ ಜರುಗಿದ ರೇಣುಕಾಚಾರ್ಯ ಜಯಂತಿ ಕಾರ್ಯಕ್ರಮದಲ್ಲಿ ಖ್ಯಾತ ಶಿಲ್ಪಿ ಹಂಸಾನಂದಾಚಾರ್ಯರು, ಜಾನಪದ ಕಲಾವಿದ ಎ.ಎಂ. ಹಾಲಯ್ಯ ಶಾಸ್ತ್ರಿ ಹಾಗೂ ಉಪನ್ಯಾಸಕರಾದ ಚಂದ್ರಶೇಖರ್ ಶಾಸ್ತ್ರಿ ಅವರನ್ನು ಸನ್ಮಾನಿಸಿ, ಗೌರವಿಸಲಾಯಿತು.

## ರಂಗಭೂಮಿ ಕಲಾವಿದರ ಸಹಾಯಕ್ಕೆ ರಂಗಾಸಕ್ತರು ಮುಂದಾಗಬೇಕಿದೆ



**ಆರ್. ಶಿವಕುಮಾರಸ್ವಾಮಿ ಕುರ್ಕಿ**

ದಾವಣಗೆರೆ, ಮಾ. 28- ನಾಟಕಗಳಲ್ಲಿ ಅದ್ಭುತವಾಗಿ ಅಭಿನಯಿಸುವ ನಟರು ತುಂಬಾ ಕಷ್ಟದ ಬದುಕು ನಡೆಸುತ್ತಿದ್ದಾರೆ. ಪ್ರೇಕ್ಷಕರನ್ನು ಮನರಂಜಿಸುವ ಕಲಾವಿದರಿಗೆ ಆರ್ಥಿಕ ಸಹಾಯ ಒದಗಿಸುವ ಸಲುವಾಗಿ ಸಂಘ-ಸಂಸ್ಥೆಗಳು ಅಲ್ಲಲ್ಲಿ ನಾಟಕ ಪ್ರದರ್ಶನಗಳನ್ನು ಏರ್ಪಡಿಸಲು ರಂಗಾಸಕ್ತರು ಮುಂದಾಗಬೇಕಿದೆ ಎಂದು ರಂಗಪರಿಚಾರಕ ಆರ್. ಶಿವಕುಮಾರಸ್ವಾಮಿ ಕುರ್ಕಿ ಅವರು ಆಶಯ ವ್ಯಕ್ತಪಡಿಸಿದರು.

ಅವರು, ನಗರದ ಗ್ರಂಥಸರಸ್ವತಿ ಪ್ರತಿಭಾ ರಂಗವು ವಿದ್ಯಾನಗರ ಉದ್ಯಾನವನದ ಕಾವ್ಯ ಮಂಟಪದಲ್ಲಿ ಹಮ್ಮಿಕೊಂಡಿದ್ದ ಮಹಾಭಾರತ ಪದ್ಮವ್ಯೂಹ ಎಂಬ ನಾಟಕ ಪ್ರದರ್ಶನದಲ್ಲಿ ಮಾತನಾಡಿದರು.

ನಾವೂ ನೀವೂ ರಂಗ ತಂಡದ ರಂಗಕರ್ಮಿ ಸಿದ್ಧರಾಜು ಮಾತನಾಡಿ, ನಗರಕ್ಕೆ ಒಂದು ರಂಗಮಂದಿರದ ಅವಶ್ಯಕತೆಯಿದ್ದು, ಈ ಒಂದು ಕೊರತೆ ಬಹುದಿನಗಳಿಂದಲೂ ಇದೆ. ಇದರ ಪರಿಹಾರ, ಸ್ಮಾರ್ಟ್ ಸಿಟಿಯಾಗುತ್ತಿರುವ ಹಿನ್ನೆಲೆಯಲ್ಲಿ ಮಹಾನಗರ ಪಾಲಿಕೆಯು ಸೂಕ್ತ ಸ್ಥಳದಲ್ಲಿ ಜಾಗ ಒದಗಿಸಲಿ. ಅಲ್ಲಿ ದಾನಿಗಳ ಸಹಾಯದಿಂದ ರಂಗಾಸಕ್ತರು ಒಂದಾಗಿ ರಂಗಮಂದಿರ ನಿರ್ಮಿಸಲು ಪ್ರಯತ್ನಿಸುತ್ತೇವೆ ಎಂದರು.

ಸಾಲಿಯಾನ ಉಮೇಶ್ ನಾರಾಯಣ ಹಾಗೂ ರಾಘು ಪುರಪ್ಪೆಮನೆ ನಿರ್ದೇಶಿಸಿದ್ದ ದಕ್ಷಿಣ ಕನ್ನಡದ ಪುರಪ್ಪೆಮನೆಯ ಥಿಯೇಟರ್ ಸಮುರಾಯ್ ರಂಗ ತಿರುಗಾಟ ತಂಡ ಅಭಿನಯಿಸಿದ ವಾಮನ ಮಾಸ್ತರರ ವೀರ ಅಭಿಮನ್ಯು ನಾಟಕವನ್ನು ಮನೋಜ್ಞವಾಗಿ ಅಭಿನಯಿಸಿದರು.

ಕೊನೆಯಲ್ಲಿ ಲೇಖಕಿ ಬಿ.ಟಿ. ಜಾಹ್ನವಿ, ನಿರಂಜನ, ಡಾ. ಎಂ.ಜಿ. ಈಶ್ವರಪ್ಪ, ರಾಮನಗೊಂಡನಹಳ್ಳಿ ದಯಾನಂದ, ಕೊರಟಿಕೆರೆ ಶಿವಕುಮಾರ್, ಎನ್.ಟಿ. ಮಂಜುನಾಥ್, ಶಿವಶರಣಪ್ಪ, ಚನ್ನಬಸಪ್ಪ ಪಾಟೀಲ್ ಹಾಗೂ ರಂಗಪ್ರೇಕ್ಷಕರು ಕಲಾ ಕಾಣಿಕೆಯಾಗಿ ಆರ್ಥಿಕ ಸಹಾಯ ಮಾಡಿದರು.

## ಮುಖ್ಯಮಂತ್ರಿ ಚಂದ್ರುಗೆ 'ಸಿದ್ಧಗಂಗಾ ಸಿರಿ' ಪ್ರಶಸ್ತಿ



ದಾವಣಗೆರೆ, ಮಾ.28- ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷರೂ, ವಿಧಾನ ಪರಿಷತ್ ಮಾಜಿ ಸದಸ್ಯರಾದ ಡಾ. ಮುಖ್ಯಮಂತ್ರಿ ಚಂದ್ರು ಅವರು 'ಸಿದ್ಧಗಂಗಾ ಸಿರಿ' ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.

ಬೆಂಗಳೂರಿನ ಅನ್ನಪೂರ್ಣೇಶ್ವರಿ ನಗರದ ಪೂರ್ಣಚಂದ್ರ ರಂಗಮಂದಿರದಲ್ಲಿ ಬೆಂಗಳೂರು ನಗರ ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಹಾಗೂ ಇತರೆ ಸಂಘ, ಸಂಸ್ಥೆಗಳು ಆಯೋಜಿಸಿರುವ ಡಾ. ಶಿವಕುಮಾರ ಮಹಾಸ್ವಾಮಿಗಳವರ ಜಯಂತಿ ಕಾರ್ಯಕ್ರಮದಲ್ಲಿ ಚಂದ್ರು ಅವರಿಗೆ 'ಶ್ರೀ ಸಿದ್ಧಗಂಗಾ ಸಿರಿ' ಪ್ರಶಸ್ತಿ ಪ್ರದಾನ ಮಾಡಲಾಗುವುದು.

## ಭಾರತದ ಕುಟುಂಬ ವ್ಯವಸ್ಥೆಯನ್ನು ಗಟ್ಟಿಗೊಳಿಸಬೇಕಿದೆ

**ಎಬಿಎಪಿ ಸಂಯೋಜಕ ಸುಬ್ರಹ್ಮಣ್ಯ ಭಟ್**

ದಾವಣಗೆರೆ, ಮಾ. 28 - ಭಾರತೀಯ ಕೌಟುಂಬಿಕ ವ್ಯವಸ್ಥೆ ಇತ್ತೀಚಿನ ದಿನಗಳಲ್ಲಿ ತುಸು ಸಡಿಲವಾಗಿದ್ದರೂ ಸಹ, ನಶಿಸುತ್ತಿಲ್ಲ. ಹಿಂದಿನ ಕಾಲದ ಕೌಟುಂಬಿಕ ಆದರ್ಶಗಳ ಮರು ಸ್ಮರಣೆ ಮೂಲಕ ಕುಟುಂಬಗಳನ್ನು ಗಟ್ಟಿಗೊಳಿಸಬೇಕಿದೆ ಎಂದು ಅಖಿಲ ಭಾರತ ಅಧಿವಕ್ತ ಪರಿಷತ್‌ನ ಸಂಯೋಜಕ ಹಾಗೂ ಶಿಕ್ಷಣ ತಜ್ಞ ಕಜ್ಜಂಪಾಡಿ ಸುಬ್ರಹ್ಮಣ್ಯ ಭಟ್ ತಿಳಿಸಿದ್ದಾರೆ.

ನಗರದ ರಾಷ್ಟ್ರೋತ್ಥಾನ ವಿದ್ಯಾ ಕೇಂದ್ರದಲ್ಲಿ ಅಖಿಲ ಭಾರತ ಅಧಿವಕ್ತ ಪರಿಷತ್ ಹಾಗೂ ಕುಟುಂಬ ಪ್ರಬೋಧನ್ ವತಿಯಿಂದ ಆಯೋಜಿಸಲಾಗಿದ್ದ ಕುಟುಂಬ ಮಿಲನ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಅವರು ಮಾತನಾಡುತ್ತಿದ್ದರು.

ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಜನತಾ ಕರ್ಫ್ಯೂಗೆ ಕರೆ ನೀಡಿದಾಗ ಹಾಗೂ ಕೊರೊನಾ ವಾರಿಯರ್‌ಗಳಿಗೆ ದೀಪ ಬೆಳಗುವ ಮೂಲಕ ಗೌರವಿಸುವಂತೆ ಕರೆ ನೀಡಿದಾಗ ದೇಶದ ಜನರೆಲ್ಲ ಅಭೂತಪೂರ್ವವಾಗಿ ಸ್ಪಂದಿಸಿದ್ದರು. ಇದು ನಮ್ಮಲ್ಲಿನ ಕೌಟುಂಬಿಕ ವ್ಯವಸ್ಥೆಯ ಸಂಕೇತ ಎಂದರು.

ಕೊರೊನಾ ಸಮಯದಲ್ಲಿ ವಿದೇಶಗಳಲ್ಲಿ ಏನೇ ಕಳವಳವಾದರೂ, ಭಾರತದಲ್ಲಿ ಸಶಕ್ತವಾಗಿ ಎದುರಿಸಿದೆವು. ಇದಕ್ಕೆ ಕೌಟುಂಬಿಕ ವ್ಯವಸ್ಥೆಯೇ ಕಾರಣ ಎಂದು ಅವರು ಹೇಳಿದರು.

ಕೌಟುಂಬಿಕ ವ್ಯವಸ್ಥೆಯನ್ನು ಬಲಗೊಳಿಸಲು ನಾವು ಮುಂದಾಗಬೇಕಿದೆ. ವಾರಕ್ಕೆ ಒಂದು ಬಾರಿಯಾದರೂ ಜೊತೆಗೆ ಕುಳಿತು ಭಜನೆ ಹಾಗೂ ಭೋಜನಗಳಲ್ಲಿ ತೊಡಗುವುದರಿಂದ, ನಮ್ಮ ಮಾತೃಭಾಷೆಯಲ್ಲಿ ಸತ್ವವನ್ನು ಅರಿತು ಅದನ್ನು ಮಕ್ಕಳಿಗೆ ಕಲಿಸುವುದರಿಂದ ಕುಟುಂಬಗಳನ್ನು ಗಟ್ಟಿಗೊಳಿಸಲು ಸಾಧ್ಯವಾಗುತ್ತದೆ ಎಂದು ಅವರು ಪ್ರತಿಪಾದಿಸಿದರು.

ಅಧಿವಕ್ತ ಪರಿಷತ್‌ನ ರಾಜ್ಯ ಉಪಾಧ್ಯಕ್ಷ ವೈ. ಮಂಜಪ್ಪ ಕಾಕನೂರು ಪ್ರಾಸ್ತಾವಿಕವಾಗಿ ಮಾತನಾಡಿದರು.

ಅಧಿವಕ್ತ ಪರಿಷತ್‌ನ ಜಿಲ್ಲಾ ಅಧ್ಯಕ್ಷ ಧನಂಜಯ ಅವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.

ವೈಭವಿ ಜೋಷಿ ಪ್ರಾರ್ಥಿಸಿದರು. ವಸಂತ ಕುಮಾರ್ ಸ್ವಾಗತಿಸಿದರು.

## ಉತ್ತಮ ಕೆಲಸಕ್ಕೆ ಅಧಿಕಾರದ ಅಗತ್ಯವಿಲ್ಲ




**ಹರಪನಹಳ್ಳಿಯಲ್ಲಿ ಎಂ.ಪಿ.ವೀಣಾ**

ಹರಪನಹಳ್ಳಿ, ಮಾ.28- ತಾಲ್ಲೂಕಿನ ರಾಗಿಮಸಲವಾಡದ ಸಾರ್ವಜನಿಕ ಆಸ್ಪತ್ರೆಯ ಆವರಣದಲ್ಲಿ ಶ್ರೀ ಎಂ.ಪಿ. ಪ್ರಕಾಶ್ ಸಮಾಜ ಮುಖಿ ಟ್ರಸ್ಟ್ ತಥಾಗತ್ ಹೃದ್ರೋಗ ಆಸ್ಪತ್ರೆ, ಭಾರತೀಯ ಹೃದ್ರೋಗ ಸಂಸ್ಥೆ, ಇಂಡಿಯನ್ ಮೆಡಿಕಲ್ ಅಸೋಸಿಯೇಷನ್ ಇವರುಗಳ ಸಹಯೊಗದೊಂದಿಗೆ ಬೆಂಗಳೂರು ಹಾಗೂ ದಾವಣಗೆರೆಯ ಪ್ರಖ್ಯಾತ ತಜ್ಞ ವೈದ್ಯರ ಮಾರ್ಗದರ್ಶನದಲ್ಲಿ ಬೃಹತ್ ಉಚಿತ ಆರೋಗ್ಯ ಮೇಳ ನಡೆಯಿತು.

ನಂತರ ಮಾತನಾಡಿದ ಟ್ರಸ್ಟ್‌ನ ಅಧ್ಯಕ್ಷೆ ಎಂ.ಪಿ. ವೀಣಾ ಮಹಾಂತೇಶ್ ಚರಂತಿಮಠ್, ಉತ್ತಮ ಕೆಲಸ ಮಾಡಲು ಅಧಿಕಾರ ಬೇಕಾಗಿಲ್ಲ. ಸಮಾಜಮುಖಿ ಕೆಲಸ ಮಾಡಲು ಸದಾ ಸಿದ್ದರಿದ್ದೇವೆ. ನಗರ ಪ್ರದೇಶಗಳಲ್ಲಿ ಉಚಿತ ಆರೋಗ್ಯ ಮೇಳ ಮಾಡಿದರೆ ನಮಗೆ ಸೌಕರ್ಯಗಳು ಸಿಗುತ್ತವೆ. ಆದರೆ, ಗ್ರಾಮೀಣ ಪ್ರದೇಶಗಳಲ್ಲಿ ಆರೋಗ್ಯ ಮೇಳಗಳನ್ನು ಮಾಡಿದರೆ ಗ್ರಾಮೀಣ ಪ್ರದೇಶದ ಜನತೆಗೆ ಅನುಕೂಲವಾಗುತ್ತದೆ ಎಂಬ ದೃಷ್ಟಿಯಿಂದ ಇಂತಹ ಕಡೆ ಕಾರ್ಯಕ್ರಮಗಳನ್ನು ಮಾಡಲಾಗುತ್ತಿದೆ ಎಂದರು.

ವೈದ್ಯಕೀಯ ಘಟಕದ ಅಧ್ಯಕ್ಷ ಡಾ. ಮಧುಸೂದನ್ ಕಾರ್ಯಕ್ರಮ ಉದ್ಘಾಟಿಸಿದರು.ಉಪಾಧ್ಯಕ್ಷ ಡಾ. ಮಹಂತೇಶ ಚರಂತಿಮಠ್ ಮಾತನಾಡಿದರು.

ಉಪಾಧ್ಯಕ್ಷ ಡಾ. ಶ್ರೀನಿವಾಸ, ಕಾರ್ಯದರ್ಶಿಗಳಾದ ಭಗವತ್ ರಾಂ, ಡಾ. ರೂಪೇಶ್, ಎಸ್.ಎಸ್ ಆಸ್ಪತ್ರೆಯ ವೈದ್ಯ ಡಾ. ವಿಕ್ರಂ, ರಾಗಿಮಸಲವಾಡದ ವೈದ್ಯ ಪ್ರಭುದೇವ್, ಡಾ. ಸುನೀಲ್, ಚಿಗಟೇರಿ ಯುವ ಕಾಂಗ್ರೆಸ್ ಅಧ್ಯಕ್ಷ ಶಿವರಾಜ್, ಪುರಸಭೆ ಮಾಜಿ ಅಧ್ಯಕ್ಷೆ ಕವಿತಾ ವಾಗೀಶ್, ರಾಗಿಮಸಲವಾಡದ ಗ್ರಾಮ ಪಂಚಾಯ್ತಿ ಅಧ್ಯಕ್ಷ ಜಿ.ಶೇಖರಗೌಡ, ಉಪಾಧ್ಯಕ್ಷ ಠಾಕ್ರಾನಾಯ್ಕ, ಸದಸ್ಯರಾದ ಕರಿಬಸಪ್ಪ, ಹನುಮಂತಪ್ಪ, ವೆಂಕಟೇಶ, ಮಂಜಪ್ಪ, ಶಂಕ್ರನಾಯ್ಕ, ಸೋಮಪ್ಪ, ಮಹಂತೇಶ, ಎಸ್.ಟಿ. ಮಂಜಪ್ಪ, ಉಷಾಬಾಯಿ, ಮುಖಂಡರಾದ ಗಾಯಿತ್ರಮ್ಮ, ದಾದಾಪೀರ್, ಮನೋಜ್‌ಕುಮಾರ್, ಕೊಟ್ರೇಶ್ ಇನ್ನಿತರರಿದ್ದರು.

## ಹುಬ್ಬಳ್ಳಿ-ದಾವಣಗೆರೆ ರೈಲು ಸಂಚಾರ ವಿಸ್ತರಿಸಿ

ದಾವಣಗೆರೆ, ಮಾ.28- ಹುಬ್ಬಳ್ಳಿ-ದಾವಣಗೆರೆ ಪ್ಯಾಸೆಂಜರ್ ರೈಲು ಸಂಚಾರವನ್ನು ಕಡೂರು ಅಥವಾ ಅರಸೀಕೆರೆವರೆಗೆ ವಿಸ್ತರಿಸುವಂತೆ ನೈರುತ್ಯ ರೈಲ್ವೆ ವಲಯ ಪ್ರಯಾಣಿಕರ ಕುಂದು-ಕೊರತೆ ನಿವಾರಣೆ, ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಎಂ.ಎಸ್.ಕೆ. ಶಾಸ್ತ್ರಿ ಒತ್ತಾಯಿಸಿದ್ದಾರೆ.

## ಅರ್ಜಿ ಅಹ್ವಾನ

ಹರಿಹರ, ಮಾ.28- ಸಾಲಕಟ್ಟೆ ಗ್ರಾಮೀಣ ಪುನರ್ವಸತಿ ಕಾರ್ಯಕರ್ತರ (ವಿಆರ್‌ಡಬ್ಲ್ಯು) ಕೆಲಸಕ್ಕೆ ಮಾಸಿಕ 6 ಸಾವಿರ ರೂ. ಗೌರವ ಧನದ ಆಧಾರದಲ್ಲಿ ನೇಮಕ ಮಾಡಿಕೊಳ್ಳಲು ಅರ್ಹ ವಿಕಲಚೇತನ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಮಾಹಿತಿಗೆ ಜಿಲ್ಲಾ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಅಧಿಕಾರಿಗಳ ಕಛೇರಿ, ದಾವಣಗೆರೆ 08192-263939 ಇವರನ್ನು ಸಂಪರ್ಕಿಸಿ.

## ಕಾಂಗ್ರೆಸ್‌ನಲ್ಲಿ ಬಣಗಳಿಲ್ಲ ನಾವೆಲ್ಲರೂ ಒಂದೇ ಬಣ

### ಹರಪನಹಳ್ಳಿಯಲ್ಲಿ ಯುವ ಕಾಂಗ್ರೆಸ್ ಅಧ್ಯಕ್ಷ ರಕ್ಷಾರಾಮಯ್ಯ


ಹರಪನಹಳ್ಳಿ, ಮಾ.28- ಕಾಂಗ್ರೆಸ್ ಪಕ್ಷದಲ್ಲಿ ಯಾವುದೇ ಬಣಗಳಿಲ್ಲ. ನಾವೆಲ್ಲರೂ ಒಂದೇ ಬಣ. ಅದು ಕಾಂಗ್ರೆಸ್ ಬಣ ಎಂದು ರಾಜ್ಯ ಯುವ ಕಾಂಗ್ರೆಸ್ ಅಧ್ಯಕ್ಷ ರಕ್ಷಾರಾಮಯ್ಯ ಹೇಳಿದರು.

ಪಕ್ಷ ಸಂಘಟನೆಯ ಸಲುವಾಗಿ ವಿಜಯನಗರ ಜಿಲ್ಲೆಗೆ ತೆರಳುತ್ತಿರುವ ಹಿನ್ನೆಲೆಯಲ್ಲಿ ಮಾರ್ಗ ಮಧ್ಯದಲ್ಲಿ ಹಡಗಲಿ ಶಾಸಕ ಪಿ.ಟಿ. ಪರಮೇಶ್ವರನಾಯ್ಕ ಅವರ ನಿವಾಸಕ್ಕೆ ಆಗಮಿಸಿ, ನಂತರ ಸುದ್ದಿಗಾರರೊಂದಿಗೆ ಮಾತನಾಡಿದರು.

ರಾಜ್ಯ ಕಾಂಗ್ರೆಸ್‌ನಲ್ಲಿ ಸಿದ್ದರಾಮಯ್ಯನವರ ಬಣ, ಡಿ.ಕೆ. ಶಿವಕುಮಾರ ಬಣ, ಹೆಚ್.ಕೆ. ಪಾಟೀಲ್ ಬಣ ಎಂದು ಹೇಳಲಾಗುತ್ತದೆ ಎಂಬ ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದ ಅವರು, ನಮ್ಮ ಕಾಂಗ್ರೆಸ್‌ನಲ್ಲಿ ಇರುವುದೊಂದೇ ಬಣ. ಅದು ಕಾಂಗ್ರೆಸ್ ಬಣ ಎಂದು ಸ್ಪಷ್ಟನೆ ನೀಡಿದರು.

ಬೂತ್ ಮಟ್ಟದಲ್ಲಿ ಪಕ್ಷ ಸಂಘಟಿಸುವುದು ಮತ್ತು ಬಿಜೆಪಿ ಸರ್ಕಾರದ ಭ್ರಷ್ಟಾಚಾರವನ್ನು ತೆರೆದಿಡುವುದು ಹಾಗೂ ವೈಫಲ್ಯ ತಿಳಿಸುವುದೇ ನಮ್ಮ ಗುರಿ. ಶೀಘ್ರದಲ್ಲೇ 'ನಮ್ಮೂರ ಮಹಿಳಾ ಸಾಧಕರು' ಎನ್ನುವ ಶೀರ್ಷಿಕೆಯಡಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದವರನ್ನು ಗುರುತಿಸಿ ಸನ್ಮಾನಿಸಲಾಗುವುದು ಎಂದರು.

ರಾಜ್ಯ ಯುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪಿ.ಟಿ. ಭರತ್ ಮಾತನಾಡಿ, 150ಕ್ಕೂ ಹೆಚ್ಚು ಸೀಟುಗಳನ್ನು ಪಡೆದು, ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರಲಿದೆ ಎಂದರು.



ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬೇಲೂರು ಅಂಜಪ್ಪ, ನೀಲಗುಂದ ಜಿಲ್ಲಾ ಪಂಚಾಯ್ತಿ ಸದಸ್ಯ ಹೆಚ್.ಬಿ. ಪರಶುರಾಮಪ್ಪ, ರಾಜ್ಯ ಮಹಿಳಾ ಯುವ ಕಾಂಗ್ರೆಸ್ ಉಪಾಧ್ಯಕ್ಷೆ ಭವ್ಯ, ಜಿಲ್ಲಾ ಟಾಸ್ಕ್ ಫೋರ್ಸ್ ಸಮಿತಿ ಸದಸ್ಯ ಶಶಿಧರ್ ಪೂಜಾರ್, ಪುರಸಭಾ ಮಾಜಿ ಅಧ್ಯಕ್ಷ ಎಚ್.ಕೆ. ಹಾಲೇಶ, ಟಿ.ಎ.ಪಿ.ಸಿ.ಎಂ.ಎಸ್ ಅಧ್ಯಕ್ಷ ಪಿ. ಪ್ರೇಮ್ ಕುಮಾರ್, ಪಿ.ಎಲ್.ಡಿ.ಬ್ಯಾಂಕ್ ಅಧ್ಯಕ್ಷ ಮುತ್ತಿಗಿ ಸಾಬಳ್ಳಿ ಜಂಬಣ್ಣ, ಪುರಸಭೆ ಸದಸ್ಯರುಗಳಾದ ಜಾಕೀರ್ ಸರ್ಖಾವಾಸ್, ಜೋಗಿನ ಭರತೇಶ, ಮುಖಂಡರಾದ ಆಲದಳ್ಳಿ ಷಣ್ಮುಖಪ್ಪ, ಮತ್ತಿಹಳ್ಳಿ ಅಜ್ಜಣ್ಣ, ತಿಮ್ಮಾನಾಯ್ಕ, ಪಿ.ಎಲ್. ಪೋಮ್ಯಾನಾಯ್ಕ, ಅರುಣ ಪೂಜಾರ್, ವೇದುನಾಯ್ಕ, ಡಿ. ನೇಮಾನಾಯ್ಕ, ಹುಲಿಕಟ್ಟೆ ಬಾಷ, ಎಲ್.ಬಿ. ಹಾಲೇಶನಾಯ್ಕ, ಆರ್. ಮಹಾಂತೇಶನಾಯ್ಕ, ಟಿ. ಪ್ರವೀಣ್‌ಕುಮಾರ್, ತಿಮ್ಮಣ್ಣ, ಅಡವಿಹಳ್ಳಿ ಪೂಜಾರ್ ರಾಜು, ಮಂಜು, ಎಂ.ಕೆ. ರಾಯಲ್ ಸಿದ್ದೀಕ್, ಚಿಗಟೇರಿ ಜಂಬಣ್ಣ, ಶ್ರೀಕಾಂತ್ ಯಾದವ್, ಬಸವರಾಜ್ ಹುಲಿಯಪ್ಪನವರ್, ರಿಯಾಜ್ ಅಹಮದ್, ಲಾಟಿ ನವರಂಗ್, ಅಲಮರಸಿಕೇರಿ ಪರುಶುರಾಮ, ಓ. ಮಹಾಂತೇಶ, ಶಂಕರ್ ಇನ್ನಿತರರಿದ್ದರು.

# ಕೈವಾರ ತಾತಯ್ಯನವರ ಕಂಚಿನ ಪುತ್ಥಳಿ ನಿರ್ಮಾಣಕ್ಕೆ ಆಗ್ರಹ

ದಾವಣಗೆರೆ, ಮಾ.28- ಪವಾಡ ಪುರುಷ ಕೈವಾರ ಯೋಗಿ ನಾರೇಯಣ ತಾತಯ್ಯನವರ ಕಂಚಿನ ಪುತ್ಥಳಿಯನ್ನು ಬೆಂಗಳೂರಿನಲ್ಲಿ ಸರ್ಕಾರದಿಂದ ನಿರ್ಮಿಸಬೇಕು ಹಾಗೂ ಅವರ ಜಯಂತ್ಯೋತ್ಸವವನ್ನು ಆಚರಿಸಬೇಕು ಎಂದು ಸಂಖ್ಯಾಶಾಸ್ತ್ರಜ್ಞ ಶ್ರೀ ಜಯ ಶ್ರೀನಿವಾಸನ್ ಗುರೂಜಿ ರಾಜ್ಯ ಸರ್ಕಾರವನ್ನು ಆಗ್ರಹಿಸಿದರು.

17-18ನೇ ಶತಮಾನದಲ್ಲಿ ಕೈವಾರ ತಾತಯ್ಯ ಅವರು ಅಧ್ಯಾತ್ಮ ಕ್ಷೇತ್ರಕ್ಕೆ ಕೊಡುಗೆ ನೀಡಿದ್ದಾರೆ. ಮುಂದಿನ ಘಟನೆಗಳ ಬಗ್ಗೆ ಕಾಲಜ್ಞಾನ ರಚಿಸಿದ್ದಾರೆ. ಮಾ.28ರಂದು 295ನೇ ಜಯಂತ್ಯೋತ್ಸವ ನಡೆಯುತ್ತಿರುವ



ಈ ಸಂದರ್ಭದಲ್ಲಿ ತಾತಯ್ಯನವರ ಪ್ರತಿಮೆ ನಿರ್ಮಿಸಲು ಸರ್ಕಾರ ಗಮನ ಹರಿಸಬೇಕೆಂದು ಸುದ್ದಿಗೋಷ್ಠಿಯಲ್ಲಿ ಒತ್ತಾಯಿಸಿದರು.

ರಾಜ್ಯದಲ್ಲಿ 40 ಲಕ್ಷ ಜನಸಂಖ್ಯೆ ಹೊಂದಿರುವ ಬಲಿಜ ಸಮಾಜಕ್ಕೆ ಪ್ರತ್ಯೇಕ ಅಭಿವೃದ್ಧಿ ನಿಗಮ, ಪ್ರಾಧಿಕಾರ ರಚನೆಯಾಗಿಲ್ಲ. ಗುರು ಪೀಠವಾಗಲೀ, ಶ್ರೀಗಳಾಗಲೀ ಇಲ್ಲ. ಸರ್ಕಾರ ದಾವಣಗೆರೆ-ಹರಿಹರ ಭಾಗದಲ್ಲಿ ಗುರುಪೀಠ ರಚನೆ ಹಿನ್ನೆಲೆಯಲ್ಲಿ ಸಮಾಜಕ್ಕೆ 5 ಎಕರೆ ಜಾಗ ನೀಡಬೇಕು ಎಂದು ಅವರು ಆಗ್ರಹಿಸಿದರು.

ಬಲಿಜ ಸಮುದಾಯ ಕರ್ನಾಟಕದಲ್ಲಿ ಹಿಂದುಳಿದ ಜಾತಿಗಳಲ್ಲಿ ಒಂದು. ಹಾವನೂರು ವರದಿಯನ್ವಯ ಈ ಸಮಾಜಕ್ಕೆ 1991ರಲ್ಲಿ 2ಎ ಮೀಸಲಾತಿ ಸೌಲಭ್ಯವನ್ನು ಒದಗಿಸ ಲಾಗಿತ್ತು. ಆದರೆ ವೀರಪ್ಪ ಮೊಯ್ಲಿ ಅವರ ಅಧಿಕಾರ ವಧಿಯಲ್ಲಿ (1994) ಸಕಾರಣವಿ ಲ್ಲದೇ 2ಎ ಮೀಸಲಾತಿ ತೆಗೆದು ಹಾಕಲಾಗಿದೆ ಎಂದರು.

ಇತ್ತೀಚೆಗೆ ನಡೆದ ವಿಧಾನಮಂಡಲ ಅಧಿವೇಶನದಲ್ಲಿ ಗೃಹ ಸಚಿವ ಬಸವರಾಜ ಬೊಮ್ಮಾಯಿ ಅವರು ಬಲಿಜ ಸಮಾಜ 2ಎ ಮೀಸಲಿಗೆ ಅರ್ಹವಾಗಿದೆ ಎಂದು ಹೇಳಿದ್ದಾರೆ. ಸದ್ಯಕ್ಕೆ ವಿದ್ಯಾಭ್ಯಾಸಕ್ಕೆ ಸೀಮಿತವಾಗಿ 2ಎ ಮೀಸಲಿದ್ದರೂ ಸಮಾಜಕ್ಕೆ ತೃಪ್ತಿ ಇಲ್ಲ. ರಾಜಕೀಯ ಹಾಗೂ ಔದ್ಯೋಗಿಕ ಕ್ಷೇತ್ರದಲ್ಲಿ ಈಗಲೂ ಸಮಾಜ 3ಎ ಅಡಿಯಲ್ಲಿ ಸ್ಪರ್ಧೆ ಮಾಡಬೇಕಿದೆ. ಹೀಗಾಗಿ ಎಲ್ಲಾ ರಂಗಗಳಲ್ಲೂ ಸಮಗ್ರವಾಗಿ 2ಎ ಮೀಸಲು ಕಲ್ಪಿಸಬೇಕು ಎಂದು ಮನವಿ ಮಾಡಿದರು.

## ಡಿ.ಕೆ.ಶಿವಕುಮಾರ್ ರಾಜೀನಾಮೆಗೆ ಒತ್ತಾಯ

ದಾವಣಗೆರೆ,ಮಾ.28- ಶಾಸಕ ರಮೇಶ್ ಜಾರಕಿಹೊಳಿ ಸಿಲುಕಿದರೆನ್ನಲಾಗಿರುವ ಸಿಡಿ ಪ್ರಕರಣಕ್ಕೆ ಸಂಬಂಧಿಸಿದಂತೆ ಸಂತ್ರಸ್ತ ಯುವತಿಯ ಪೋಷಕರು ಮಾಡಿರುವ ಆರೋಪದ ಹಿನ್ನೆಲೆಯಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡುವಂತೆ ಜಿಲ್ಲಾ ಜೆಡಿಎಸ್ ಮುಖಂಡ ಎಂ.ಎನ್. ನಾಗರಾಜ್ ಒತ್ತಾಯಿಸಿದ್ದಾರೆ.

## ಶ್ಯಾಬನೂರು ಆಂಜನೇಯ ಸ್ವಾಮಿಗೆ ಸಂಸದ ಜಿ.ಎಂ. ಸಿದ್ದೇಶ್ವರರಿಂದ ಪೂಜೆ



ದಾವಣಗೆರೆ, ಮಾ.28- ಶ್ಯಾಬನೂರಿನ ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನಕ್ಕೆ ಲೋಕಸಭಾ ಸದಸ್ಯ ಜಿ.ಎಂ.ಸಿದ್ದೇಶ್ವರ ಅವರು ಭೇಟಿ ನೀಡಿ ಪೂಜೆ ಸಲ್ಲಿಸಿದರು. ಈ ಸಂದರ್ಭದಲ್ಲಿ ನಗರ ಪಾಲಿಕೆ ಮಾಜಿ ಸದಸ್ಯ ಸಂಕೋಳ್ ಚಂದ್ರಶೇಖರ್ ಮತ್ತಿತರರು ಉಪಸ್ಥಿತರಿದ್ದರು.

## ಜಿಗಳಿಯಲ್ಲಿ ಭೂತಸೇವೆ, ದೇವರ ಉತ್ಸವ





ಮಲೇಬೆನ್ನೂರು, ಮಾ.28 - ಜಿಗಳಿ ಗ್ರಾಮದಲ್ಲಿ ಶ್ರೀ ರಂಗನಾಥ ಸ್ವಾಮಿ ರಥೋತ್ಸವದ ಅಂಗವಾಗಿ ಭಾನುವಾರ ಸಂಜೆ ದೇವರುಗಳ ಸಮ್ಮುಖದಲ್ಲಿ ಭೂತ ಸೇವೆ ನಡೆಯಿತು.

ಮುದ್ರೆ ಹಾಕಿಸಿಕೊಂಡಿರುವ ದಾಸಪ್ಪರು ಭೂತ ಸೇವೆಯಲ್ಲಿ ಭಾಗವಹಿಸಿ, ಸಾಮೂಹಿಕವಾಗಿ ಎಡೆ ಮಾಡುವ ಬಾಳೆಹಣ್ಣು, ಬೆಲ್ಲ, ಈರುಳ್ಳಿ ಪ್ರಸಾದವನ್ನು ನೆಲದ ಮೇಲೆ ಬಿದ್ದು ಸೇವನೆ ಮಾಡಿದರು. ನಂತರ ಗ್ರಾಮದ ರಾಜ ಬೀದಿಗಳಲ್ಲಿ ಶ್ರೀ ರಂಗನಾಥ ಸ್ವಾಮಿ, ಶ್ರೀ ಬೀರಲಿಂಗೇಶ್ವರ ಮತ್ತು ಬೇವಿನಹಳ್ಳಿ ಆಂಜನೇಯ ಸ್ವಾಮಿ ದೇವರ ಉತ್ಸವ ವಿಜೃಂಭಣೆಯಿಂದ ಜರುಗಿತು.

ಈ ಸಂದರ್ಭದಲ್ಲಿ ಹರಕೆ ಹೊತ್ತ ಭಕ್ತರು ಶ್ರೀ ರಂಗನಾಥ ಸ್ವಾಮಿಗೆ ನೋಟಿನ ಹಾರ ಹಾಕಿ ಭಕ್ತಿ ಸಮರ್ಪಿಸಿದರು.

## ಏ.2 ರಂದು ಕುರುಬರ ವಿದ್ಯಾವರ್ಧಕ ಸಂಘದ ವಾಣಿಜ್ಯ ಸಂಕೀರ್ಣ ಉದ್ಘಾಟನೆ

ದಾವಣಗೆರೆ, ಮಾ.28- ಜಿಲ್ಲಾ ಕುರುಬರ ವಿದ್ಯಾವರ್ಧಕ ಸಂಘದ ವಾಣಿಜ್ಯ ಸಂಕೀರ್ಣದ ಉದ್ಘಾಟನಾ ಕಾರ್ಯಕ್ರಮವು ಏಪ್ರಿಲ್ 2 ರಂದು ಮಧ್ಯಾಹ್ನ 12.30ಕ್ಕೆ ನಗರದ ತ್ರಿಶೂಲ್ ಕಲಾ ಭವನದಲ್ಲಿ ನಡೆಯಲಿದೆ ಎಂದು ಸಂಘದ ಅಧ್ಯಕ್ಷ ವೈ.ವಿರೂಪಾಕ್ಷಪ್ಪ ಕುಂಬಳೂರು ತಿಳಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿಂದು ಮಾತನಾಡಿದ ಅವರು, ಕಾರ್ಯಕ್ರಮದ ಸಾನ್ನಿಧ್ಯವನ್ನು ಕಾಗಿನೆಲೆ ಕನಕ ಗುರುಪೀಠದದ ಜಗದ್ಗುರು ಶ್ರೀ ನಿರಂಜನಾನಂದಪುರಿ ಮಹಾಸ್ವಾಮೀಜಿ, ತಿಂಥಿಣಿ ಕನಕ ಗುರುಪೀಠ ಶಾಖಾಮಠದ ಶ್ರೀ ಸಿದ್ಧರಾಮನಂದಪುರಿ ಮಹಾಸ್ವಾಮೀಜಿ, ಡಾ.ಉದಯ ಶಂಕರ್ ಒಡೆಯರ್ ವಹಿಸಿಕೊಳ್ಳಲಿದ್ದಾರೆ ಎಂದರು.

ಮಾಜಿ ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರು ವಾಣಿಜ್ಯ ಸಂಕೀರ್ಣಗಳನ್ನು ಉದ್ಘಾಟಿಸಲಿದ್ದು, ಮುಖ್ಯ ಅತಿಥಿಗಳಾಗಿ ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ್, ಶಾಸಕ ಶಾಮನೂರು ಶಿವಶಂಕರಪ್ಪ, ಮಾಜಿ ಸಚಿವರುಗಳಾದ ಹೆಚ್.ಎಂ. ರೇವಣ್ಣ, ಎಸ್.ಎಸ್. ಮಲ್ಲಿಕಾರ್ಜುನ್, ಶಾಸಕರುಗಳಾದ ಎಸ್.ಎ. ರವೀಂದ್ರನಾಥ್, ಎಸ್.ರಾಮಪ್ಪ, ಭೈರತಿ ಸುರೇಶ್, ವಿಧಾನ ಪರಿಷತ್ ಮಾಜಿ ಸದಸ್ಯ ಅಬ್ದುಲ್ ಜಬ್ಬಾರ್, ಬಯಲು ಸೀಮೆ ಪ್ರದೇಶಾಭಿವೃದ್ಧಿ ಮಂಡಳಿಯ ಮಾಜಿ ಅಧ್ಯಕ್ಷ ಕೆಂಗೋ ಹನುಮಂತಪ್ಪ ಆಗಮಿಸಲಿದ್ದಾರೆ ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ಡಾಕ್ಟರೇಟ್ ಪದವಿ ಪಡೆದ ಡಾ.ಹೆಚ್. ಯಲ್ಲಪ್ಪ ಹಾಗೂ ಜಿಲ್ಲೆಯಲ್ಲಿ ನೂತನವಾಗಿ ಆಯ್ಕೆಯಾಗಿರುವ ಕುರುಬ ಸಮಾಜದ ಗ್ರಾ.ಪಂ. ಸದಸ್ಯರುಗಳಿಗೆ ಸನ್ಮಾನ ಸಮಾರಂಭ ಏರ್ಪಡಿಸಲಾಗಿದೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಹಾಲೇಕಲ್ಲು ಎಸ್.ಟಿ. ಅರವಿಂದ, ಎಸ್.ಹೆಚ್. ಪ್ರಕಾಶ್, ಸಿದ್ದಪ್ಪ ಕೆ.ಉದ್ದಗಟ್ಟೆ, ಬಿ.ದಿಳ್ಳೆಪ್ಪ, ಶಶಿಧರ್, ಹೆಚ್.ವೈ. ಗಿಂಡೇರ್, ಮಹಾಂತೇಶ್ ಕುಮಾರ್, ಸಿದ್ದಪ್ಪ ಅಡಾಣಿ ಇತರರು ಉಪಸ್ಥಿತರಿದ್ದರು.

# ಏ.10 ರಿಂದ ರಾಜ್ಯ ಮಟ್ಟದ ಬೆಂಚ್ ಪ್ರೆಸ್ ಸ್ಪರ್ಧೆಗಳು

### ಎಸ್ಪಿ ಹನುಮಂತರಾಯ

ದಾವಣಗೆರೆ, ಮಾ.28- ಗ್ರೂಪ್ ಆಫ್ ಐರನ್ ಗೇಮ್ಸ್ ಸಂಸ್ಥೆ ವತಿಯಿಂದ ಏ.10 ಹಾಗೂ 11 ರಂದು ರಾಜ್ಯಮಟ್ಟದ ಬೆಂಚ್ ಪ್ರೆಸ್ ಸ್ಪರ್ಧೆಗಳನ್ನು ನಡೆಸಲಾಗುತ್ತಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹನುಮಂತರಾಯ ತಿಳಿಸಿದರು.

ಜಿಲ್ಲಾ ವರದಿಗಾರರ ಕೂಟದಲ್ಲಿಂದು ಸ್ಪರ್ಧೆಯ ಪೋಸ್ಟರ್ ಬಿಡುಗಡೆ ಮಾಡಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ನಗರದ ಕುವೆಂಪು ಕನ್ನಡ ಭವನದಲ್ಲಿ ಸ್ಪರ್ಧೆಗಳು ನಡೆಯಲಿದ್ದು ಬಾಲಕರ, ಕಿರಿಯರ, ಹಿರಿಯರ, ಪುರುಷರ ಹಾಗೂ ಮಹಿಳೆಯರ ವಿಭಾಗದಲ್ಲಿ ಸ್ಪರ್ಧೆಗಳು ನಡೆಯಲಿವೆ ಎಂದರು.

ಸ್ಪರ್ಧೆಯಲ್ಲಿ ಉತ್ತಮ ಸಾಧನೆ ತೋರಿದವರನ್ನು ಅರ್ಹತೆ ಆಧಾರದ ಮೇಲೆ ಜೂನ್ 27 ರಿಂದ 30ರವರೆಗೆ ಗೋವಾ ರಾಜ್ಯದಲ್ಲಿ ನಡೆಯಲಿರುವ ರಾಷ್ಟ್ರಮಟ್ಟದ ಸ್ಪರ್ಧೆಗೆ ಆಯ್ಕೆ ಮಾಡಲಾಗುವುದು ಎಂದರು.

**ಪೊಲೀಸ್ ಧ್ವಜ ದಿನಾಚರಣೆ:** ಏ.2 ರಂದು ಪೊಲೀಸ್ ಧ್ವಜ ದಿನಾಚರಣೆ ಜಿಲ್ಲಾ ಪೊಲೀಸ್ ಕವಾಯತು ಮೈದಾನದಲ್ಲಿ ಬೆಳಿಗ್ಗೆ 8 ಗಂಟೆಗೆ ನಡೆಯಲಿದೆ ಎಂದು ಎಸ್ಪಿ ಹನುಮಂತರಾಯ ತಿಳಿಸಿದರು.

ಪೂರ್ವ ವಲಯದ ಪೊಲೀಸ್ ಮಹಾನಿರೀಕ್ಷಕ ಎಸ್.ರವಿ ಅವರು ಅಧ್ಯಕ್ಷತೆ ವಹಿಸಲಿದ್ದು, ನಿವೃತ್ತ ಪೊಲೀಸ್ ಉಪ ನಿರೀಕ್ಷಕ ಜಿ.ನಾಗರಾಜ್ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ ಎಂದು ಹೇಳಿದರು.

**ಕಾನೂನು ಪಾಲಿಸಿ, ಇಲಾಖೆಯೊಂದಿಗೆ ಸಹಕರಿಸಿ:** ಸೋಮವಾರ ಗ್ರಾ.ಪಂ.ಗಳ ಚುನಾವಣೆ, ಮಹಾನಗರ ಪಾಲಿಕೆ ಉಪ ಚುನಾವಣೆ ಹಾಗೂ ಹೋಳಿ ಹಬ್ಬದ ಆಚರಣೆಗಳು ನಡೆಯಲಿವೆ. ಸಾರ್ವಜನಿಕ ಹೋಳಿ ನಿಷೇಧಿಸಲಾಗಿದ್ದು, ಚುನಾವಣೆಗೆ ಬಿಗಿ ಬಂದೋಬಸ್ತ್ ಏರ್ಪಾಡು ಮಾಡಲಾಗಿದೆ ಎಂದು ಇದೇ ಸಂದರ್ಭದಲ್ಲಿ ಎಸ್ಪಿ ಹೇಳಿದರು.

ಜನತೆ ಕೊರೊನಾ ಮಾರ್ಗಸೂಚಿ ಅನುಸರಿಸಬೇಕು. ಕಾನೂನು ಪಾಲಿಸಬೇಕು. ಸಾರ್ವಜನಿಕವಾಗಿ ಹಬ್ಬಗಳನ್ನು ಆಚರಿಸದೆ, ಇಲಾಖೆಯೊಂದಿಗೆ ಸಹಕರಿಸಬೇಕು ಎಂದು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಡಿಎಆರ್ ಡಿವೈಎಸ್ಪಿ ಪಿ.ಬಿ. ಪ್ರಕಾಶ್, ಪಿಎಸ್‌ಐಗಳಾದ ಶೈಲಜಾ, ದಾದಾಪೀರ್, ಗ್ರೂಪ್ ಆಫ್ ಐರನ್ ಗೇಮ್ಸ್ ಕಾರ್ಯದರ್ಶಿ ರಜ್ವಿಖಾನ್, ಕ್ರೀಡಾಪಟು ಮಹೇಶ್ವಪ್ಪ ಮತ್ತು ಇತರರು ಉಪಸ್ಥಿತರಿದ್ದರು.

# ವಜ್ರೇಶ್ವರಿ ಸಂಸ್ಥೆಯಿಂದ ಮಹಿಳಾ ದಿನಾಚರಣೆ



ದಾವಣಗೆರೆ, ಮಾ.28 - ವಜ್ರೇಶ್ವರಿ ಮಹಿಳಾ ಸಂಸ್ಥೆಯಿಂದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಆಚರಿಸಲಾಯಿತು. ಮಹಿಳಾ ದಿನಾಚರಣೆಯ ಅಂಗವಾಗಿ ಜನಪದ ವೇಷಭೂಷಣ ಸ್ಪರ್ಧೆ ಹಾಗೂ ಜನಪದ ಹಾಡು ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು.

ಮುಖ್ಯ ಅತಿಥಿಗಳಾಗಿ ಕುರ್ಕಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್‌ನ ಡಾ. ಹೆಚ್.ಎಸ್. ಮಂಜುನಾಥ್ ಕುರ್ಕಿ ಆಗಮಿಸಿದ್ದರು, ಬಾಪೂಜಿ ನರ್ಸಿಂಗ್ ಕಾಲೇಜಿನ ರಿಟೈರ್ಡ್ ಸೂಪರಿಂಟೆಂಡೆಂಟ್ ಸರ್ವಮಂಗಳ ಕಾರ್ಯಕ್ರಮದ ಉದ್ಘಾಟನೆ ನೆರವೇರಿಸಿದರು, ವಿಜಯ ಸಿ. ಅಕ್ಕಿ ಎಲ್ಲಾ ಕಾರ್ಯಕ್ರಮಗಳ ಅಧ್ಯಕ್ಷತೆ ವಹಿಸಿದ್ದರು.

ತೀರ್ಪುಗಾರರಾಗಿ ಶೈಲಜ ತಿಮ್ಮೇಶ್, ರೇಖಾ ಓಂಕಾರಪ್ಪ, ಮಂಜುನಾಥ್ ಆಗಮಿಸಿದ್ದರು. ವೇಷಭೂಷಣ ಸ್ಪರ್ಧೆಯಲ್ಲಿ ಕೊರವಂಜಿ ಪಾತ್ರದ ಗಾಯತ್ರಿ ರವಿ ಮೊದಲನೇ ಬಹುಮಾನವನ್ನು ಪಡೆದರು, ಎರಡನೇ ಬಹುಮಾನ ತನುಜಾ ಪಡೆದು ಕೊಂಡರು, ಮೂರನೇ ಬಹುಮಾನ ಸುಜಾತ ಅವರ ತಂಡ ಪಡೆದುಕೊಂಡಿತು ಹಾಗೂ ಸಮಾಧಾನಕರ ಬಹುಮಾನವನ್ನು ಭಾಗವಹಿಸಿದ ಎಲ್ಲರಿಗೂ ಕೊಡಲಾಯಿತು.

ಜನಪದ ಹಾಡಿಗೆ ಮೊದಲನೆ ಬಹುಮಾನ ಪ್ರೀತಿ ತಂಡಕ್ಕೆ ಲಭಿಸಿತು. ಎರಡನೇ ಬಹುಮಾನ ಸುಜಾತ ತಂಡಕ್ಕೆ ಲಭಿಸಿತು ಮೂರನೇ ಬಹುಮಾನ ಸುನಂದಾ ತಂಡಕ್ಕೆ ಲಭಿಸಿತು.

ಚಂದ್ರಿಕ ಜಗನ್ನಾಥ್ ನಿರೂಪಿಸಿದರು, ಮಂಗಳ ಮಲ್ಲಿಕಾರ್ಜುನ್ ಪ್ರಾರ್ಥಿಸಿದರು, ಸುಜಾತ ನಾಗೇಶ್ ಸ್ವಾಗತಿಸಿದರು, ಮಂಗಳ ಮಲ್ಲಿಕಾರ್ಜುನ್ ವಂದಿಸಿದರು, ಅತಿಥಿ ಪರಿಚಯ ವೇಣುಗೋಪಾಲ್ ಹಾಗೂ ಜ್ಯೋತಿ ಹೆಚ್.ಎಸ್. ಐಶು ಕಮಿಟಿಯ ಎಲ್ಲಾ ನಿರ್ದೇಶಕರುಗಳು ಹಾಗೂ ಸದಸ್ಯರು ಭಾಗವಹಿಸಿದ್ದರು.

# ಭಾರತ್ ಸ್ಕೌಟ್, ಗೈಡ್ಸ್ ಪರೀಕ್ಷಾ ಶಿಬಿರ



ದಾವಣಗೆರೆ, ಮಾ.28 - ಭಾರತ್ ಸ್ಕೌಟ್ ಮತ್ತು ಗೈಡ್ಸ್ ಕೊಂಡಜ್ಜಿ ಬಸಪ್ಪ ಸ್ಥಳೀಯ ಸಂಘವು ಇತ್ತೀಚೆಗೆ ಶ್ರೀ ತರಳಬಾಳು ವಸತಿ ಶಾಲೆಯ ಆವರಣದಲ್ಲಿ ತೃತೀಯ ಸೋಪಾನ ಪರೀಕ್ಷಾ ಶಿಬಿರವನ್ನು ನಡೆಸಲಾಯಿತು.

ಈ ಸಂದರ್ಭದಲ್ಲಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕೊಂಡಜ್ಜಿ ಬಸಪ್ಪ ಸ್ಥಳೀಯ ಸಂಸ್ಥೆಯ ಅಧ್ಯಕ್ಷ ದಿನೇಶ್ ಶೆಟ್ಟಿ, ಜಿಲ್ಲಾ ಕಾರ್ಯದರ್ಶಿ ಶ್ರೀಮತಿ ರತ್ನ.ಎಂ ಪರೀಕ್ಷಾ ಶಿಬಿರಕ್ಕೆ ಭೇಟಿ ನೀಡಿ ವಿದ್ಯಾರ್ಥಿಗಳಿಗೆ ಶುಭ ಹಾರೈಸಿದ್ದಾರೆ. ಪರೀಕ್ಷಾ ಶಿಬಿರದಲ್ಲಿ 70 ಸ್ಕೌಟ್ಸ್ ಮತ್ತು 53 ಗೈಡ್ಸ್ ಭಾಗವಹಿಸಿದ್ದರು.

ಡಿ. ಹಾಲಪ್ಪ ಮತ್ತು ಶ್ರೀಮತಿ ಕಲ್ಲಮ್ಮ ಶಿಬಿರದ ನಾಯಕರಾಗಿ ಕೆಲಸ ಮಾಡಿದರು. ಸಿದ್ಧೇಶ್, ವಿಜಯ್, ಶರತ್, ಶ್ರೀಮತಿ ನಯನ, ಯೇಸುಪ್ರಿಯಾ, ಶ್ರೀಮತಿ ರಜಿನಿ, ಶ್ರೀಮತಿ ಸುಜಾತ ಸಹಾಯಕ ನಾಯಕರಾಗಿ ಕೆಲಸ ಮಾಡಿದರು. ರವೀಂದ್ರಸ್ವಾಮಿ. ಟಿ.ಎಂ ಕಾರ್ಯದರ್ಶಿ ಸ್ಥಳೀಯ ಸಂಘವು ಶಿಬಿರವನ್ನು ಯಶಸ್ವಿಯಾಗಿ ನಡೆಸಲಾಯಿತು.

## ಬಿಎಫ್‌ಟಿ ಹುದ್ದೆಗೆ ಅರ್ಜಿ

ದಾವಣಗೆರೆ, ಮಾ.28- ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಜಿಲ್ಲೆಯ ಗ್ರಾಮ ಪಂಚಾಯ್ತಿಗಳ ವ್ಯಾಪ್ತಿಯಲ್ಲಿ (ಚನ್ನಗಿರಿ ತಾ. ಹೊರತು ಪಡಿಸಿ) ಬಿಎಫ್‌ಟಿ (ಬೇರ್ ಫೂಟ್ ಟೆಕ್ನೀಷಿಯನ್) ಗಳನ್ನು ಸ್ಕ್ರೀನಿಂಗ್ ಟೆಸ್ಟ್ ಮೂಲಕ ಮಾಸಿಕ ಗೌರವ ಧನ ಪಾವತಿಸುವ ನಿಬಂಧನೆ ಮೇಲೆ ನೇಮಕಾತಿಗೆ ಅರ್ಜಿ ಆಹ್ವಾನಿಸಲಾಗಿದೆ.

ಆಸಕ್ತರು ಆಯಾ ತಾಲ್ಲೂಕಿನ ತಾಲ್ಲೂಕು ಪಂಚಾಯ್ತಿಗಳಲ್ಲಿ ಕಚೇರಿ ಅವಧಿಯಲ್ಲಿ ಅರ್ಜಿ ಪಡೆದು, ನಿಗದಿಪಡಿಸಿದ ದಾಖಲೆಗಳೊಂದಿಗೆ ಏಪ್ರಿಲ್ 7 ರೊಳಗೆ ಸೀಲ್ ಮಾಡಿದ ಲಕೋಟೆಯಲ್ಲಿ ಮುದ್ದಾಂ ಅರ್ಜಿ ಪಡೆದ ತಾಲ್ಲೂಕು ಪಂಚಾಯ್ತಿ ಕಚೇರಿಯ ನರೇಗಾ ಶಾಖೆಗೆ ಸಲ್ಲಿಸಬೇಕು.

ಮಾಹಿತಿಗೆ ಜಿ.ಪಂ.ನ ಉಚಿತ ಸಹಾಯವಾಣಿ 1 8 0 0 4 2 5 2 2 0 3 ಸಂಪರ್ಕಿಸಲು ಜಿ.ಪಂ. ಸಿಇಒ ಡಾ. ವಿಜಯ ಮಹಾಂತೇಶ ದಾನಮ್ಮನವರ್ ತಿಳಿಸಿದ್ದಾರೆ.

## ವ್ಯರ್ಥ ಮೊರೆ

ಬೋಳು ತಲೆಯವರ
ಗೋಳು, ಮೊರೆ, ದುಃಖ ದುಮ್ಮಾನ
ಅರ್ಥವಾಗುತ್ತಿಲ್ಲವೇನೋ ದೇವರಿಗೆ
ಒಂದೊಮ್ಮೆ ಇದ್ದಿದ್ದರೆ ಗೊತ್ತಾಗುತ್ತಿತ್ತು
ಬೋಳು ತಲೆ ಅವನಿಗೆ.!

- ಬಸವನಗೌಡ ಹೆಬ್ಬಳಗೆರೆ.

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಗೆ 18 ರಿಂದ 25 ವರ್ಷದೊಳಗಿನ ಸೇಲ್ಸ್ ಬಾಯ್ಸ್ ಮತ್ತು ಸೇಲ್ಸ್ ಗರ್ಲ್ಸ್ ಬೇಕಾಗಿದ್ದಾರೆ.
ಗ್ರಾಮಾಂತರ ಪ್ರದೇಶದ ಅಭ್ಯರ್ಥಿಗಳಿಗೆ ಊಟ, ವಸತಿ ಸೌಲಭ್ಯ ಇರುತ್ತದೆ. ಸಂಪರ್ಕಿಸಿ
ಮಹೇಂದ್ರಕರ್ ಟೆಕ್ಸ್‌ಟೈಲ್ಸ್
ನರಸರಾಜ ರಸ್ತೆ, (ಮಂಡಿಪೇಟೆ) ದಾವಣಗೆರೆ.
90367 34919

## ರಾಜ್ಯ - ರಾಷ್ಟ್ರೀಯ ವಾರ್ತೆ

### ಸಿ.ಡಿ. ಪ್ರಕರಣ ಮುಚ್ಚುವ ಯತ್ನ : ಡಿ.ಕೆ. ಶಿವಕುಮಾರ್

ಬೆಂಗಳೂರು, ಮಾ. 28 - ಸಿ.ಡಿ. ಪ್ರಕರಣವನ್ನು ಮುಚ್ಚಿ ಹಾಕಲು ಎಲ್ಲಾ ಪ್ರಯತ್ನಗಳನ್ನು ನಡೆಸಲಾಗುತ್ತಿದೆ ಎಂದು ಆರೋಪಿಸಿರುವ ಕಾಂಗ್ರೆಸ್ ರಾಜ್ಯಾಧ್ಯಕ್ಷ ಡಿ.ಕೆ. ಶಿವಕುಮಾರ್, ಕಾನೂನು ರೀತಿ ಕ್ರಮ ತೆಗೆದುಕೊಳ್ಳಬೇಕಿದೆ ಎಂದಿದ್ದಾರೆ.

ಪ್ರಕರಣ ಮುಚ್ಚಿ ಹಾಕಲು ಎಲ್ಲಾ ರೀತಿಯ ಪ್ರಯತ್ನಗಳು ನಡೆಯುತ್ತಿವೆ. ಜನರನ್ನು ಕರೆದುಕೊಂಡು ಬಂದು ಹೇಳಿಕೆ ಕೊಡಿಸಲಾಗುತ್ತಿದೆ. ಸರ್ಕಾರ ಏನು ಬೇಕಾದರೂ ಮಾಡಲಿ, ಪೊಲೀಸರು ತಮ್ಮ ಗೌರವ ಉಳಿಸಿಕೊಳ್ಳಬೇಕು. ನಿಷ್ಪಕ್ಷಪಾತ ತನಿಖೆ ನಡೆಸಬೇಕು ಎಂದವರು ಆಗ್ರಹಿಸಿದ್ದಾರೆ.

ಪತ್ರಕರ್ತರೊಂದಿಗೆ ಮಾತನಾಡುತ್ತಿದ್ದ ಶಿವಕುಮಾರ್, ಸಿ.ಡಿ. ಯುವತಿಯ ತಂದೆ - ತಾಯಿಗಳು ನನ್ನ ವಿರುದ್ಧ ಹೇಳಿಕೆ ನೀಡಿದ್ದಾರೆ. ಆನಂತರ ಯುವತಿ ಸಹ ಮಾಧ್ಯಮಗಳಿಗೆ ಹೇಳಿಕೆ ಬಿಡುಗಡೆ ಮಾಡಿದ್ದಾರೆ. ಈ ಬಗ್ಗೆ ತನಿಖೆ ನಡೆಯಲಿ ಎಂದಿದ್ದಾರೆ.

ಮಹಿಳೆ ಹೊರ ಬಂದು ವಿಶೇಷ ತನಿಖಾ ತಂಡದ ಎದುರು ಹೇಳಿಕೆ ನೀಡಬೇಕೆಂದು ಬಯಸುತ್ತೀರ? ಎಂಬ ಪ್ರಶ್ನೆಗೆ ಉತ್ತರಿಸಿರುವ ಅವರು, ಈ ಬಗ್ಗೆ ನಾನು ಮಾತನಾಡಲು ಬಯಸುವುದಿಲ್ಲ. ಉಪ ಚುನಾವಣೆಗಳ ಕಡೆ ಗಮನ ಹರಿಸಲು ಬಯಸುತ್ತೇನೆ ಎಂದಿದ್ದಾರೆ.

ಸಿ.ಡಿ. ಪ್ರಕರಣದ ಬಿರುಗಾಳಿಗೆ ಸಿಲುಕಿರುವ ಶಾಸಕ ರಮೇಶ್ ಜಾರಕಿಹೊಳಿ ಅವರ ತವರು ಜಿಲ್ಲೆಯಾದ ಬೆಳಗಾವಿಗೆ ಭಾನುವಾರ ಶಿವಕುಮಾರ್ ಬಂದಿಳಿದಿದ್ದಾರೆ. ಬೆಳಗಾವಿ ಲೋಕಸಭಾ ಕ್ಷೇತ್ರದ ಉಪ ಚುನಾವಣೆಗಾಗಿ ಬಂದಿದ್ದ ಶಿವಕುಮಾರ್‌ಗೆ ಭವ್ಯ ಸ್ವಾಗತ ನೀಡಲಾಯಿತು.

ಈ ನಡುವೆ, ಜಾರಕಿಹೊಳಿ ಬೆಂಬಲಿಗರು ಶಿವಕುಮಾರ್ ಅವರಿಗೆ ಕಪ್ಪು ಬಾವುಟ ಪ್ರದರ್ಶಿಸಿ ಪ್ರತಿಭಟಿಸಿದರು. ಕೆಲವರು ಅವರ ಬೆಂಗಾವಲು ವಾಹನಗಳನ್ನು ತಡೆಯುವ ಪ್ರಯತ್ನ ನಡೆಸಿದರಾದರೂ, ಪೊಲೀಸರು ವಿಫಲಗೊಳಿಸಿದರು.

ರಮೇಶ್ ಜಾರಕಿಹೊಳಿ ಅವರ ಸಹೋದರ ಸತೀಶ್ ಜಾರಕಿಹೊಳಿ ಅವರು ಏಪ್ರಿಲ್ 17ರಂದು ನಡೆಯಲಿರುವ ಉಪ ಚುನಾವಣೆಗೆ ಕಾಂಗ್ರೆಸ್ ಅಭ್ಯರ್ಥಿಯಾಗಿದ್ದಾರೆ.

ಈ ನಡುವೆ, ಯುವತಿಯ ಪರ ವಕೀಲ ಜಗದೀಶ್ ಹೇಳಿಕೆ ನೀಡಿದ್ದು, ಯುವತಿ ಸೋಮವಾರ ನ್ಯಾಯಾಲಯದ ಎದುರು ಹಾಜರಾಗಿ ಹೇಳಿಕೆ ನೀಡಬಹುದು ಎಂದಿದ್ದಾರೆ.

### ನಾಲ್ಕು ತಿಂಗಳ ನಂತರ ರಾಜ್ಯದಲ್ಲಿ 3 ಸಾವಿರ ಕೊರೊನಾ ಸೋಂಕು

ಬೆಂಗಳೂರು, ಮಾ. 28 - ನಾಲ್ಕು ತಿಂಗಳ ನಂತರ ರಾಜ್ಯದಲ್ಲಿ ಒಂದೇ ದಿನ 3 ಸಾವಿರಕ್ಕೂ ಹೆಚ್ಚು ಕೊರೊನಾ ಪ್ರಕರಣಗಳು ಕಂಡು ಬಂದಿವೆ. ಇದೇ ದಿನ 12 ಜನರು ಸೋಂಕಿನಿಂದ ಸಾವನ್ನಪ್ಪಿದ್ದಾರೆ.

ಈ ಹಿಂದೆ ರಾಜ್ಯದಲ್ಲಿ 2020ರ ನವೆಂಬರ್ 5ರಂದು 3,156 ಸೋಂಕುಗಳು ಕಂಡು ಬಂದಿದ್ದವು.

ಭಾನುವಾರ 3,082 ಸೋಂಕುಗಳು ಕಂಡು ಬಂದಿದ್ದು, ಇದರಲ್ಲಿ 2,004 ಸೋಂಕುಗಳು ಬೆಂಗಳೂರು ನಗರದವಾಗಿವೆ. ಇದೇ ದಿನ 1,285 ಸೋಂಕಿತರು ಗುಣಮುಖವಾಗಿ ಬಿಡುಗಡೆಯಾಗಿದ್ದಾರೆ.

ರಾಜ್ಯದಲ್ಲೀಗ 23,037 ಸಕ್ರಿಯ ಪ್ರಕರಣಗಳಿವೆ. ಇವರಲ್ಲಿ 204 ರೋಗಿಗಳು ಐ.ಸಿ.ಯು. ನಲ್ಲಿದ್ದಾರೆ.

### ಕೇಂದ್ರೀಯ ಸಂಸ್ಥೆಗಳ ವಿರುದ್ಧ ತನಿಖೆ ದುರಾದೃಷ್ಟಕರ : ರಾಜನಾಥ್

ತಿರುವನಂತಪುರಂ, ಮಾ. 28 – ಜಾರಿ ನಿರ್ದೇಶನಾಲಯ ಸೇರಿದಂತೆ, ಕೇಂದ್ರೀಯ ಸಂಸ್ಥೆಗಳ ವಿರುದ್ಧ ನ್ಯಾಯಿಕ ತನಿಖೆ ನಡೆಸಲು ಕೇರಳ ಸರ್ಕಾರ ನಿರ್ಧರಿಸಿರುವುದು ದುರಾದೃಷ್ಟಕರ. ಇದು ಸಂವಿಧಾನಾತ್ಮಕ ಒಕ್ಕೂಟ ವ್ಯವಸ್ಥೆಯನ್ನು ಪ್ರಶ್ನಿಸಿದಂತೆ ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ತಿಳಿಸಿದ್ದಾರೆ.

ಬಂಗಾರ ಹಾಗೂ ಡಾಲರ್ ಕಳ್ಳಸಾಗಣೆ ಪ್ರಕರಣದ ವಿಚಾರಣೆ ನಡೆಸುತ್ತಿರುವ ಕೇಂದ್ರೀಯ ಸಂಸ್ಥೆಗಳ ವಿರುದ್ಧ ನ್ಯಾಯಿಕ ಆಯೋಗ ರಚಿಸಲು ಕೇರಳ ಸರ್ಕಾರ ಇತ್ತೀಚೆಗೆ ನಿರ್ಧರಿಸಿತ್ತು. ಕೇರಳದ ವಿಧಾನಸಭಾ ಚುನಾವಣಾ ಪ್ರಚಾರದಲ್ಲಿ ಪಾಲ್ಗೊಂಡು ಮಾತನಾಡುತ್ತಿದ್ದ ಅವರು, ಸಂಬಂಧಿಸಿದ ಎಲ್ಲ ಸಮುದಾಯಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡ ನಂತರ ಏಕರೂಪದ ನಾಗರಿಕ ಸಂಹಿತೆ ಜಾರಿ ಕುರಿತು ನಿರ್ಧರಿಸಲಾಗುವುದು ಎಂದಿದ್ದಾರೆ.

### ಕೃಷಿ ಕಾಯ್ದೆ ಜಾರಿಯಾಗದೇ ರೈತರ ಆದಾಯ ದ್ವಿಗುಣವಾಗದು

ನವದೆಹಲಿ, ಮಾ. 28 – ಕೇಂದ್ರ ಸರ್ಕಾರ ಜಾರಿಗೆ ತಂದಿರುವ ಮೂರು ಕೃಷಿ ಕಾಯ್ದೆಗಳನ್ನು ತಕ್ಷಣವೇ ಜಾರಿಗೆ ತರದೇ ಹೋದರೆ ರೈತರ ಆದಾಯವನ್ನು 2022ರ ವೇಳೆಗೆ ದ್ವಿಗುಣಗೊಳಿಸುವ ಗುರಿ ತಲುಪಲು ಸಾಧ್ಯವಾಗುವುದಿಲ್ಲ ಎಂದು ನೀತಿ ಆಯೋಗದ ಸದಸ್ಯ ರಮೇಶ್ ಚಂದ್ ಹೇಳಿದ್ದಾರೆ.

ಪ್ರತಿಭಟನಾ ನಿರತ ರೈತ ಸಂಘಟನೆಗಳು ಕಾಯ್ದೆಗಳ ಕುರಿತು ವಿವರವಾಗಿ ಚರ್ಚಿಸಲು ಮುಂದಾಗಬೇಕು ಎಂದು ಕರೆ ನೀಡಿರುವ ಅವರು, ಕುಲಾಂತರಿ ತಳಿಗಳ ಮೇಲೆ ಸಾರಾ ಸಗಟು ನಿಷೇಧ ಹೇರುವುದು ಸರಿಯಾದ ಕ್ರಮವಲ್ಲ ಎಂದಿದ್ದಾರೆ.

ಖಾಸಗಿ ಸುದ್ದಿಸಂಸ್ಥೆಯೊಂದಕ್ಕೆ ಸಂದರ್ಶನ ನೀಡಿದ್ದ ಅವರು, ಸರ್ಕಾರ ಹಾಗೂ ರೈತ ಸಂಘಟನೆಗಳು ನಡೆಸುತ್ತಿದ್ದ ಮಾತುಕತೆ ಈಗ ಸ್ಥಗಿತಗೊಂಡಿದೆ. ಈ ಹಿಂದೆ ಜನವರಿ 22ರಂದು ಕೊನೆಯ ಸುತ್ತಿನ ಮಾತುಕತೆ ನಡೆದಿತ್ತು.

ಕೊಡು - ಕೊಳ್ಳುವ ಮೂಲಕ ಮಾತ್ರ ಸಮಸ್ಯೆ ಬಗೆಹರಿಸಲು ಸಾಧ್ಯ. ನಮ್ಮ ಬೇಡಿಕೆಗೇ ಅಂಟಿಕೊಳ್ಳುತ್ತೇವೆ ಎಂದರೆ ನಿರೀಕ್ಷಿತ ರೀತಿಯಲ್ಲಿ ಮುಂದುವರೆಯಲು ಸಾಧ್ಯವಾಗುವುದಿಲ್ಲ ಎಂದು ಚಂದ್ ತಿಳಿಸಿದ್ದಾರೆ.

ಕೃಷಿ ಕಾಯ್ದೆಗಳನ್ನು ಒಂದೂವರೆ ವರ್ಷಗಳ ಕಾಲ ತಡೆ ಹಿಡಿಯುವುದಾಗಿ ಕೇಂದ್ರ ಸರ್ಕಾರ ಪ್ರಸ್ತಾಪಿಸಿದ್ದು ದಿಟ್ಟ ನಿರ್ಧಾರ ಎಂದಿರುವ ಅವರು, ಕೃಷಿ ಕಾಯ್ದೆಗಳನ್ನು ವಿವರವಾಗಿ ಚರ್ಚಿಸಲು ಸರ್ಕಾರ ಸಿದ್ಧವಿದೆ. ಈ ಪ್ರಸ್ತಾಪವನ್ನು ರೈತ ಮುಖಂಡರು ಪರಿಗಣಿಸಬೇಕು ಎಂದಿದ್ದಾರೆ.

ಸಮಾಧಾನವಾಗಿ ಯೋಚಿಸಲು ಸಾಕಷ್ಟು ಸಮಯ ಇದೆ. ಈ ವಿಷಯದಲ್ಲಿ ಸಮತೋಲನದಿಂದ ಮುಂದುವರೆಯಬೇಕು. ಆರಂಭದಲ್ಲಿ ಭಾವೋದ್ವೇಗವಿದ್ದರೂ, ನಂತರದಲ್ಲಿ ಪ್ರತಿಯೊಬ್ಬರೂ ಸಮಾಧಾನವಾಗಿ ಚರ್ಚಿಸಬೇಕು. ರೈತ ಮುಖಂಡರು ತಮ್ಮ ಪ್ರತಿಕ್ರಿಯೆ ಸಲ್ಲಿಸಬೇಕು. ಇದು ಅವರ ಹಿತದಲ್ಲಿದೆ ಎಂದು ಚಂದ್ ತಿಳಿಸಿದ್ದಾರೆ.

### 300ರ ಗಡಿ ದಾಟಿದ ಕೊರೊನಾ ಸಾವು

ನವದೆಹಲಿ, ಮಾ. 28 – ದೇಶದಲ್ಲಿ ಭಾನುವಾರ ಒಂದೇ ದಿನ 62,714 ಕೊರೊನಾ ಸೋಂಕುಗಳು ಕಂಡುಬಂದಿವೆ. ಇದು ಈ ವರ್ಷದಲ್ಲಿ ಕಂಡು ಬಂದ ಅತಿ ಹೆಚ್ಚಿನ ಪ್ರಕರಣಗಳಾಗಿವೆ. ಇದೇ ದಿನ 2021ರಲ್ಲಿ ಮೊದಲ ಬಾರಿಗೆ ಕೊರೊನಾ ಸಾವುಗಳ ಸಂಖ್ಯೆ 300ರ ಗಡಿ ದಾಟಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯದ ಅಂಕಿ-ಅಂಶಗಳು ತಿಳಿಸಿವೆ.

ಕಳೆದ 18 ದಿನಗಳಿಂದ ಸತತವಾಗಿ ಕೊರೊನಾ ಸೋಂಕು ಹೆಚ್ಚಾಗುತ್ತಿದೆ. ಇದರಿಂದಾಗಿ ಸಕ್ರಿಯ ಪ್ರಕರಣಗಳ ಸಂಖ್ಯೆ 4.86 ಲಕ್ಷಕ್ಕೆ ತಲುಪಿದೆ. ಅಕ್ಟೋಬರ್ 16, 2020ರ ನಂತರ ಇದೇ ಮೊದಲ ಬಾರಿಗೆ ಅತಿ ಹೆಚ್ಚಿನ ಪ್ರಕರಣಗಳು ಕಾಣಿಸಿಕೊಂಡಿವೆ. ಒಂದೇ ದಿನದಲ್ಲಿ 312 ಜನರು ಸಾವನ್ನಪ್ಪಿದ್ದಾರೆ. ಇದು ಮೂರು ತಿಂಗಳಲ್ಲೇ ಅತಿ ಹೆಚ್ಚಾಗಿದೆ. ಈ ಹಿಂದೆ ಡಿಸೆಂಬರ್ 25, 2020ರಲ್ಲಿ ಒಂದೇ ದಿನ 336 ಸಾವುಗಳು ಸಂಭವಿಸಿದ್ದವು.

**ಬಿಲ್ಡಿಂಗ್ ಬಾಡಿಗೆಗಿದೆ**
ಚಾಮರಾಜಪೇಟೆ ಸರ್ಕಲ್ ಹತ್ತಿರ, ಕಲ್ಲೇಶ್ವರ ಕಿರಾಣಿ ಅಂಗಡಿ ಮೇಲ್ಭಾಗದಲ್ಲಿ 3 ಮಹಡಿ ಇರುವ 10,000 ಚದುರ ಅಡಿ ವಿಶಾಲವಾದ ಜಾಗ ಇರುವ ಬಿಲ್ಡಿಂಗ್ ಬಾಡಿಗೆಗಿದೆ. ಸಂಪರ್ಕಿಸಿ :
ಮೊ. : 98453 17181

**ಸೈಟು /ಮನೆಗಳು ಮಾರಾಟಕ್ಕಿವೆ**
ಸೈಟ್:40x60 ಉತ್ತರ, ಡಾಲರ್ಸ್ ಕಾಲೋನಿ, 30x40 ಮನೆ ಆಂಜನೇಯ ಬಡಾವಣೆ, ಜೆ.ಹೆಚ್ ಪಟೇಲ್ 40x60 ಪೂರ್ವ, ಎಂ.ಸಿ.ಸಿ. 'ಬಿ' ಬ್ಲಾಕ್ 40x60 ಮನೆ
ಬೂಸ್ನೂರ್ ಕಿರಣ್ (ಏಜೆಂಟ್)
97315-63409
(ಸೈಟ್, ಮನೆ ಕೊಳ್ಳುವುದಕ್ಕೆ ಮಾರುವುದಕ್ಕೆ ವಿಚಾರಿಸಿ)

**ಆನೆಕೊಂಡದಲ್ಲಿ ಮನೆ ಮಾರಾಟಕ್ಕಿದೆ**
ಆನೆಕೊಂಡದಲ್ಲಿ 10x30 ಉತ್ತರ (ಮೇಲೆ ಕೆಳಗೆ ಮನೆ). ಎಸ್.ಎಸ್. ಹೈಟೆಕ್ ಬಡಾವಣೆ 30x50 ಪಶ್ಚಿಮ, ಶಿವ ಪಾರ್ವತಿ ಬಡಾವಣೆ ಉತ್ತರ 30x50 ಎರಡು ಮಳಿಗೆ ಕೆಳಗೆ 2 ಮನೆ ಮೇಲೆ 1 ಮನೆ.
ಮನೆಗಳು ಕೊಡುವುದಕ್ಕೆ, ತೆಗೆದುಕೊಳ್ಳುವುದಕ್ಕೆ ಸಂಪರ್ಕಿಸಿ
99457 02495 ಐಗೂರು ವಿಜಯ್‌ಕುಮಾರ್
95911 60520 ಸುರೇಶ್

**ಸೈಟುಗಳು ಮಾರಾಟಕ್ಕಿವೆ**
ಬಸವೇಶ್ವರ ಲೇಔಟ್ 30x40 ಪೂರ್ವ, 30x70 ದಕ್ಷಿಣ, 40x60 ದಕ್ಷಿಣ, ಶಿವ ಪಾರ್ವತಿ ಬಡಾವಣೆ 30x50, 40x60 ಪೂರ್ವ $38^{1/2}$x40 ಪಶ್ಚಿಮ
ಸೈಟ್‌ಗಳು ಕೊಡುವುದಕ್ಕೆ, ತೆಗೆದುಕೊಳ್ಳುವುದಕ್ಕೆ ಸಂಪರ್ಕಿಸಿ
99457 02495 ಐಗೂರು ವಿಜಯ್‌ಕುಮಾರ್
95911 60520 ಸುರೇಶ್

**ಗಾರ್ಡನ್‌ನಲ್ಲಿ ಕೆಲಸ ಮಾಡಲು ಬೇಕಾಗಿದ್ದಾರೆ**
ಸಂಪರ್ಕಿಸಿ : ನೂತನ ಕಾಲೇಜ್,
6000/- ಸಂಬಳ
ಬೆಳಿಗ್ಗೆ 8 ರಿಂದ ಸಂಜೆ 6 ರವರೆಗೆ
ಮೊ.: 97417 23358

**ಮನೆ ಬಾಡಿಗೆಗೆ ಇದೆ**
ತರಳಬಾಳು ಬಡಾವಣೆ, 4ನೇ ಮೇನ್, 3ನೇ ಕ್ರಾಸ್, ಐಟಿಐ ಕಾಲೇಜು ಎದುರು ರೋಡ್, ಮೊದಲನೇ ಮಹಡಿಯಲ್ಲಿ 2 BHK ಮನೆ ಬಾಡಿಗೆಗೆ ಇದೆ.
ಮೊ. : 94814 52642

**ಮನೆ ಬಾಡಿಗೆಗೆ ಇದೆ**
ಸಕಲ ಸೌಕರ್ಯವುಳ್ಳ ಉತ್ತರಕ್ಕೆ ಬಾಗಿಲಿರುವ ಮೊದಲನೇ ಮಹಡಿಯಲ್ಲಿ ಎರಡು ಬೆಡ್ ರೂಮ್ ಮನೆ ಬಾಡಿಗೆಗೆ ಇದೆ. #1859/34, 'ಭಾವ ಸಂಗಮ' LIC ಕಾಲೋನಿ, 4ನೇ ಮುಖ್ಯರಸ್ತೆ (ನೂತನ ಕಾಲೇಜ್ ಹಿಂಭಾಗ), ದಾವಣಗೆರೆ-4.
94487 46875

**ಜಮೀನು ಮಾರಾಟಕ್ಕಿದೆ**
ಮಿಟ್ಲಕಟ್ಟೆ ಗ್ರಾಮದ ರಿ.ಸ.ನಂ.7/16 ರಲ್ಲಿ 17 ಗುಂಟೆ ಜಮೀನು ಮೇನ್ ರೋಡ್ ಪಕ್ಕ, ಮಿಟ್ಲಕಟ್ಟೆ ಶಾಮನೂರು ರಸ್ತೆ, ಶಾಮನೂರಿಂದ 3 ಕಿ.ಮೀ ಇದೆ. ಮಧ್ಯವರ್ತಿಗಳಿಗೆ ಅವಕಾಶವಿಲ್ಲ
87220 14318, 95352 69849

**ಸಿಮೆಂಟ್/ಬ್ರಿಕ್ ಮೋಲ್ಡಿಂಗ್ ಮಿಷಿನ್ ಮಾರಾಟಕ್ಕಿದೆ.**
1060 ಮಾಡೆಲ್
93807 13883

**ಸಾಲಗಳಿಗೆ ಸಂಪರ್ಕಿಸಿ**
(ಬಡ್ಡಿ ದರ ವಾರ್ಷಿಕ 7% ರಿಂದ ಪ್ರಾರಂಭ) ಮನೆ ಕಟ್ಟಲು, ಮನೆ ಖರೀದಿ, ಸೈಟ್ ಖರೀದಿ, ಕಟ್ಟಿರುವ ಮನೆಗೆ ಸಾಲ, ಬೇರೆ ಬ್ಯಾಂಕ್‌ನಲ್ಲಿ ತೆಗೆದುಕೊಂಡಿರುವ ಸಾಲ ವರ್ಗಾವಣೆ ಮತ್ತು ಅಧಿಕ ಸಾಲಕ್ಕಾಗಿ ಸಂಪರ್ಕಿಸಿ. (ಸಂಬಳ ಮತ್ತು ವ್ಯವಹಾರದಾರರಿಗೆ ಮಾತ್ರ)
73385 80345

**ಬೇಕಾಗಿದ್ದಾರೆ**
ಪಾರ್ಟ್ ಟೈಂ or ಫುಲ್ ಟೈಂ ಕಂಪ್ಯೂಟರ್ ಹುದ್ದೆಗೆ ಲೇಡಿಸ್ ಬೇಕಾಗಿದ್ದಾರೆ.
94838 62779

**ಆಂಧ್ರ ಮಾವಿನಕಾಯಿ ಉಪ್ಪಿನಕಾಯಿ ದೊರೆಯುತ್ತದೆ.**
+91-63611 50414

**ಮನೆ ಮಾರಾಟಕ್ಕಿದೆ**
ಸರಸ್ವತಿ ಬಡಾವಣೆಯಲ್ಲಿ ತುಳಸಿ ಆಯುರ್ವೇದಾಲಯದ ಹತ್ತಿರ 20x30 ಅಳತೆಯುಳ್ಳ ಸುಸಜ್ಜಿತ ಮನೆ ಮಾರಾಟಕ್ಕಿದೆ. ಸಂಪರ್ಕಿಸಿ
90198 88512
97405 93969

**Smart city Cabs Davanagere**
Etios 4+1 A/c, Minimum 4 Km Rs 100/-, above per kms. Rs 10/- Waiting Charages - 1 Hour Rs. 100/-, 4,8,12 Hour Packages
Call 08192 255555, 99868 18205

**ಬೇಕಾಗಿದ್ದಾರೆ**
ರೆಡಿಮೇಡ್ ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗ/ಹುಡುಗಿಯರು ಬೇಕಾಗಿದ್ದಾರೆ.
ಸಂಪರ್ಕಿಸಿ :
ಅಶೋಕ ರೋಡ್, ದಾವಣಗೆರೆ.
99806 12203
82173 35653

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ಜ್ಯೋತಿಷ್ಯ ಫಲ**
ನುಡಿದಂತೆ ನಡೆಯುವುದು
ಪಂಡಿತ್ ವಿಜಯ್‌ಕುಮಾರ್ ಗುರೂಜಿ
ವ್ಯಾಪಾರದಲ್ಲಿ ಲಾಭ-ನಷ್ಟ, ಗಂಡ-ಹೆಂಡತಿ ಕಲಹ, ಸಂತಾನ ಫಲ, ಗುಪ್ತ ಸಮಸ್ಯೆಗಳಿಗೆ ಅತೀ ಶೀಘ್ರದಲ್ಲಿ 101% ಗ್ಯಾರಂಟಿ ಪರಿಹಾರ. ಫೋನಿನ ಮೂಲಕ ನಿಮ್ಮ ಸ್ವರ ಭವಿಷ್ಯದಿಂದ ಪರಿಹಾರ ತಿಳಿಸುತ್ತಾರೆ.
99021 73302

**ಸೈಟು/ಮನೆಗಳು ಮಾರಾಟಕ್ಕಿವೆ**
ಶಿವಕುಮಾರ ಸ್ವಾಮಿ ಬಡಾವಣೆ ಪೂರ್ವ-ದಕ್ಷಿಣ ಕಾರ್ನರ್ 50x50 ಸೈಟ್, ಕೆ.ಬಿ. ಬಡಾವಣೆ 30x50 (ಪಶ್ಚಿಮ) ಸೈಟ್, ಸರಸ್ವತಿ ನಗರ 20x40 ಡಬಲ್ ಫ್ಲೋರ್ (ಪಶ್ಚಿಮ) ಮನೆ, ಮೌನೇಶ್ವರ ಬಡಾವಣೆ 20x30 ಡಬಲ್ ಫ್ಲೋರ್ (ಪೂರ್ವ-ಉತ್ತರ ಕಾರ್ನರ್) ಮನೆ, ಜಯನಗರ 30x40 (ಪೂರ್ವ) ಮನೆ.
98804 40602

**ಜಮೀನು ಮಾರಾಟಕ್ಕಿದೆ**
ಪುಣಭಘಟ್ಟ ಗ್ರಾಮ, ಅರಸಿಕೇರಿ ಹೋಬಳಿ, ಸರ್ವೆ ನಂ.335/A 4-08 ಸೆಂಟ್ಸ್, ಸರ್ವೆ ನಂ.335/B 2-43 ಸೆಂಟ್ಸ್, ಸರ್ವೆ ನಂ.335/1 1-62 ಸೆಂಟ್ಸ್, ಒಟ್ಟು 8.13 ಸೆಂಟ್ಸ್, 2 ಪಂಪ್‌ಸೆಟ್ ಹೊಂದಿರುವ ಜಮೀನು ಮಾರಾಟಕ್ಕಿದೆ.
99726 02950

**ಹಾಲ್ ಬಾಡಿಗೆಗೆ ಇದೆ**
ಬ್ಯೂಟಿ ಪಾರ್ಲರ್/ಟ್ಯೂಷನ್ಸ್/ಆಫೀಸ್‌ಗಾಗಿ Ist Floorನಲ್ಲಿ ಬಾಡಿಗೆಗೆ ಇದೆ. ಮಾಮಾಸ್ ಜಾಯಿಂಟ್ ರೋಡ್, ಕಾರ್ನರ್ ಬಿಲ್ಡಿಂಗ್, ಎಂಸಿಸಿ ಬಿ ಬ್ಲಾಕ್, ದಾವಣಗೆರೆ.
82177 72482


# ಕೊರೊನಾ ಹಿನ್ನೆಲೆ : ಕುಂಬಳೂರಿನಲ್ಲಿ ಜಾತ್ರೆ ರದ್ದು, ಗ್ರಾಮಸ್ಥರಿಗೆ ನಿರಾಸೆ

ಮಲೇಬೆನ್ನೂರು, ಮಾ.28- ಕುಂಬಳೂರು ಗ್ರಾಮದಲ್ಲಿ ಸೋಮವಾರ ಜರುಗಬೇಕಾಗಿದ್ದ ಶ್ರೀ ಹನುಮಂತ ದೇವರ ರಥೋತ್ಸವವನ್ನು ಕೊರೊನಾ ಸೋಂಕು ಮತ್ತೆ ಹರಡುತ್ತಿರುವ ಹಿನ್ನೆಲೆಯಲ್ಲಿ ಸರ್ಕಾರದ ಆದೇಶದಂತೆ ರದ್ದು ಮಾಡಲಾಗಿದೆ ಎಂದು ಕಂದಾಯ ಇಲಾಖೆಯ ಅಧಿಕಾರಿಗಳು ಭಾನುವಾರ ಗ್ರಾಮದಲ್ಲಿ ಡಂಗುರ ಸಾರುವ ಮೂಲಕ ಪ್ರಚಾರ ಪಡಿಸಿದರು.

ಕುಂಬಳೂರು ರಥೋತ್ಸವ ಅಷ್ಟೇ ಅಲ್ಲ, ಹೆಚ್ಚು ಜನ ಸೇರುವ ಎಲ್ಲಾ ಜಾತ್ರೆ, ಹಬ್ಬ ಆಚರಣೆಗಳಿಗೆ ಸರ್ಕಾರ ನಿರ್ಬಂಧ ಹೇರಿದೆ ಎಂದು ಉಪ ತಹಶೀಲ್ದಾರ್ ಆರ್.ರವಿ, ಗ್ರಾಮ ಲೆಕ್ಕಾಧಿಕಾರಿ ಶ್ರೀಧರಮೂರ್ತಿ 'ಜನತಾವಾಣಿ'ಗೆ ತಿಳಿಸಿದರು.

**ಹಬ್ಬಕ್ಕೆ ಸಜ್ಜಾಗಿರುವ ಗ್ರಾಮ** : ಸೋಮವಾರ ಮತ್ತು ಮಂಗಳವಾರ ನಡೆಯಬೇಕಾಗಿದ್ದ ಶ್ರೀ ಹನುಮಂತ ದೇವರ ರಥೋತ್ಸವ ಮತ್ತು ಮುಳ್ಳೋತ್ಸವಕ್ಕೆ ಕುಂಬಳೂರು ಗ್ರಾಮ ಸಜ್ಜಾಗಿತ್ತು.

ಗ್ರಾಮದ ಜನರು ಜಾತ್ರೆಯ ಎಲ್ಲಾ ಸಿದ್ದತೆಗಳನ್ನು ಮಾಡಿಕೊಂಡು ಬೀಗರು, ಬಿಜ್ಜರನ್ನು ಆಹ್ವಾನಿಸಿದ್ದರು.



ಇದೀಗ ದಿಢೀರ್ ಜಾತ್ರೆ ರದ್ದು ಮಾಡಿರುವ ಆದೇಶ ಗ್ರಾಮಸ್ಥರಿಗೆ ತೀವ್ರ ನಿರಾಸೆ ಉಂಟು ಮಾಡಿದೆ.

ಈಗಾಗಲೇ ದೇವರಿಗೆ ಕಂಕಣಾಧಾರಣೆ, ಮಹಾರಥಕ್ಕೆ ಕಳಸಧಾರಣೆ ಆಗಿರುವುದರಿಂದ ಹೆಚ್ಚು ಜನರನ್ನು ಸೇರಿಸದೇ ಹಬ್ಬದ ಆಚರಣೆಗಳನ್ನು ಅತ್ಯಂತ ಸರಳವಾಗಿ ಸಂಪ್ರದಾಯದಂತೆ ಆಚರಿಸಲಾಗುವುದೆಂದು ಮೂಲಗಳು ತಿಳಿಸಿವೆ.

ಈ ಹಿಂದಿನ ತೀರ್ಮಾನದಂತೆ ಸೋಮವಾರ ಬೆಳಿಗ್ಗೆ 9 ಕ್ಕೆ ಗಜ ಉತ್ಸವ, ಮಧ್ಯಾಹ್ನ 12ಕ್ಕೆ ಹರಿಸೇವೆ, ಮಧ್ಯಾಹ್ನ 3ಕ್ಕೆ ಹನುಮಂತ ದೇವರ ರಥೋತ್ಸವ, ನಂತರ ಭಕ್ತಾದಿಗಳಿಂದ ಹರಕೆ, ಬಾಯಿ ಬೀಗ, ಕಿವಿ ಚುಚ್ಚುವುದು, ಜವಳ, ದಿಂಡು ಉರುಳು ಸೇವೆ ನಡೆಯಬೇಕಿತ್ತು. ಇದೇ ದಿನ ತಡರಾತ್ರಿ (ಮಂಗಳವಾರ ಬೆಳಗಿನ ಜಾವ) ಮಹಾರಥೋತ್ಸವ ಮತ್ತು ಮಂಗಳವಾರ ಸಂಜೆ ಮುಳ್ಳೋತ್ಸವವು ಜರುಗಬೇಕಿತ್ತು.

## ಇಂದು ಭಗತ್‌ಸಿಂಗ್ ಯುವ ಮಾರ್ಗದರ್ಶನ ಕೇಂದ್ರ ಉದ್ಘಾಟನೆ

ಸರ್ಕಾರಿ ಉದ್ಯೋಗಾಕಾಂಕ್ಷಿಗಳಿಗೆ ಸರ್ವತೋಮುಖ ಮಾರ್ಗದರ್ಶನ ನೀಡುವ ಭಗತ್‌ಸಿಂಗ್ ಯುವ ಮಾರ್ಗದರ್ಶನ ಕೇಂದ್ರದ ಉದ್ಘಾಟನಾ ಸಮಾರಂಭವು ಇಂದು ಸಂಜೆ 7 ಗಂಟೆಗೆ ನಗರದ ಎಂ.ಸಿ.ಸಿ. 'ಬಿ' ಬ್ಲಾಕ್ ಸಬ್‌ಜಿ ಸರಗಮ್‌ನ 2ನೇ ಮಹಡಿಯಲ್ಲಿರುವ ಈವೆಂಟ್ ಹಾಲ್‌ನಲ್ಲಿ ನಡೆಯಲಿದೆ.

# ಮಹಿಳೆಯರಿಂದ ಭಾರತೀಯ ಸಂಸ್ಕೃತಿ ಜೀವಂತ

ರಂಭಾಪುರಿ ಪೀಠ (ಬಾಳೆಹೊನ್ನೂರು), ಮಾ.28- ಭಾರತೀಯ ಉತ್ಕೃಷ್ಟ ಸಂಸ್ಕೃತಿಗೆ ಮಹಿಳೆಯರ ಕೊಡುಗೆ ಅಪಾರ. ಧರ್ಮ, ಸಂಸ್ಕೃತಿ, ಪರಂಪರೆ, ಆಚರಣೆಗಳು ಮಹಿಳೆಯರಿಂದಲೇ ಉಳಿದು, ಬೆಳೆದುಕೊಂಡು ಬಂದಿವೆ. ಸಂಸ್ಕೃತಿ ಜೀವಂತಿಕೆಗೆ ಅವರ ಕೊಡುಗೆ ಹಿರಿದಾದುದೆಂದು ಶ್ರೀ ರಂಭಾಪುರಿ ಡಾ. ವೀರಸೋಮೇಶ್ವರ ಜಗದ್ಗುರುಗಳು ಅಭಿಪ್ರಾಯಪಟ್ಟರು.

ಅವರು ಶ್ರೀ ರಂಭಾಪುರಿ ಪೀಠದಲ್ಲಿ ಶ್ರೀ ಜಗದ್ಗುರು ರೇಣುಕಾಚಾರ್ಯ ಜಯಂತಿ ಯುಗಮಾನೋತ್ಸವ ಹಾಗೂ ಕ್ಷೇತ್ರನಾಥ ಶ್ರೀ ವೀರಭದ್ರಸ್ವಾಮಿ ಮಹಾರಥೋತ್ಸವದ ಅಂಗವಾಗಿ ಜರುಗಿದ 'ಧರ್ಮ ಮತ್ತು ಮಹಿಳೆ' ಚಿಂತನ ಸಮಾರಂಭದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡುತ್ತಿದ್ದರು.

ತಾಯಿ ಎಂಬ ಎರಡಕ್ಷರದಲ್ಲಿ ಏನೆಲ್ಲವೂ ಅಡಗಿದೆ. ಮಾತೃ ದೇವೋ ಭವ ಎಂದು ಗೌರವಿಸಿದೆ. ಭಾರತೀಯ ಸಂಸ್ಕೃತಿಯಲ್ಲಿ ಉತ್ಕೃಷ್ಟ ಸ್ಥಾನ ಮಹಿಳೆಯರಿಗೆ ಕೊಟ್ಟಿದ್ದಾರೆ. ವೀರಶೈವ ಧರ್ಮದಲ್ಲಿ ಮಹಿಳೆಯರಿಗೆ ಸಮಾನ ಸ್ಥಾನಮಾನಗಳನ್ನು ಶ್ರೀ ಜಗದ್ಗುರು ರೇಣುಕಾಚಾರ್ಯರು ಕಲ್ಪಿಸಿಕೊಟ್ಟಿದ್ದಾರೆ. ಹೆತ್ತ ತಾಯಿ, ಹೊತ್ತ ಭೂಮಿ ಇವೆರಡನ್ನೂ ಎಂದಿಗೂ ಮರೆಯಲಾಗದು ಎಂದರು.



'ಕಾಯಕ ಯೋಗಿ ವೀರ ಗಂಗಾಧರ ಜಗದ್ಗುರುಗಳು' ಎಂಬ ಕೃತಿಯನ್ನು ಅಖಿಲ ಭಾರತ ವೀರಶೈವ ಮಹಾಸಭಾ ಮಹಿಳಾ ಘಟಕದ ಅಧ್ಯಕ್ಷೆ ಬಿ.ವೈ ಅರುಣಾದೇವಿ ಬಿಡುಗಡೆ ಮಾಡಿ, ಲಿಂ. ಶ್ರೀ ರಂಭಾಪುರಿ ವೀರಗಂಗಾಧರ ಜಗದ್ಗುರುಗಳು ನಮ್ಮೆಲ್ಲರ ದೈವವಾಗಿ ಪೂಜೆಗೊಳ್ಳುತ್ತಿದ್ದಾರೆ. ಅವರ ತಪಶ್ಶಕ್ತಿ, ದೂರದೃಷ್ಟಿ. ಬೋಧಿಸಿದ ವಿಚಾರ ಧಾರೆಗಳು ನಮ್ಮೆಲ್ಲರ ಬಾಳಿಗೆ ನಂದಾದೀಪ ಎಂದು ಹೇಳಿದರು.

ಡಾ. ಪಂಡಿತಾರಾಧ್ಯ ವಿರಚಿತ 'ಶಿವಾರಾಧನಾ ಪ್ರದೀಪಿಕಾ' ಕೃತಿಯನ್ನು ಭಾಷಾ ವಿಜ್ಞಾನಿ ಡಾ. ಸಂಗಮೇಶ ಸವದತ್ತಿಮಠ ಬಿಡುಗಡೆ ಮಾಡಿದರು.

ಗ್ರಾಮ ಪಂಚಾಯತಿ ಅಧ್ಯಕ್ಷೆ ಅಂಬುಜಾ,

### ರಂಭಾಪುರಿ ಶ್ರೀ

ಗ್ರಾ.ಪಂ. ಸದಸ್ಯ ಮಹೇಶ ಆಚಾರ್, ಬೆಂಗಳೂರಿನ ನಾಗರತ್ನ, ಮಂಜುಳಾ, ನೇತ್ರಾದೇವಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದರು.

ದೇವಾಪುರ-ಬಬಲಾದ್ (ಎಸ್) ಹಿರೇಮಠದ ಶ್ರೀ ಶಿವಮೂರ್ತಿ ಶಿವಾಚಾರ್ಯರು, ಸುಳ್ಳದ ಶಿವಸಿದ್ಧರಾಮೇಶ್ವರ ಶಿವಾಚಾರ್ಯರು ನೇತೃತ್ವ ವಹಿಸಿದ್ದರು.

ಲಕ್ಷ್ಮೇಶ್ವರದ ಡಾ.ಜಯಶ್ರೀ ಮಲ್ಲಿಕಾರ್ಜುನ ಹೊಸಮನಿ 'ಮಹಿಳೆಯರಿಂದ ಧರ್ಮ ಸಂಸ್ಕೃತಿ ಬೆಳವಣಿಗೆ' ವಿಷಯವಾಗಿ ಉಪನ್ಯಾಸ ನೀಡಿದರು.ಹೊನ್ನಕಿರಣಗಿ ಚಂದ್ರಗುಂಡ ಶ್ರೀ, ಪಡಸಾವಳಿ-ಉದಗೀರದ ಡಾ॥ ಶಂಭುಲಿಂಗ ಶ್ರೀ, ಜವಳಿ ಗಂಗಾಧರ ಶ್ರೀ, ಹರಿಹರದ ಕೊಟ್ರಮ್ಮ ತೋಟಪ್ಪ ಕೊಂಡಜ್ಜಿ ಇವರಿಗೆ ಶ್ರೀ ರಂಭಾಪುರಿ ಜಗದ್ಗುರುಗಳು ಗುರು ರಕ್ಷೆಯಿತ್ತು ಶುಭ ಹಾರೈಸಿದರು. ಗುರುಲಿಂಗಯ್ಯ ಹಿತ್ತಲಶಿರೂರ, ಶಿವಮೊಗ್ಗದ ಶಾಂತಾ ಆನಂದ ಭಕ್ತಿಗೀತೆ ಹಾಡಿದರು. ಹುಬ್ಬಳ್ಳಿಯ ಪ್ರಕಾಶ್ ಬೆಂಡಿಗೇರಿ ಸ್ವಾಗತಿಸಿದರು. ಮೈಸೂರಿನ ಟಿ.ಹೆಚ್. ರೇಣುಕಾ ಪ್ರಸಾದ್ ನಿರೂಪಿಸಿದರು.

ಬೆಳಿಗ್ಗೆ ವಸಂತೋತ್ಸವ ಜರುಗಿತು.

## ಹಡಗಲಿ: ಶ್ರೀ ರೇಣುಕಾಚಾರ್ಯ ಜಯಂತಿ



ಹೂವಿನಹಡಗಲಿ, ಮಾ.28 - ಇಲ್ಲಿನ ಜಂಗಮ ಕ್ಷೇಮಾಭಿವೃದ್ಧಿ ಸಂಘ ಪ್ರಥಮ ಬಾರಿಗೆ ಜಗದ್ಗುರು ಶ್ರೀ ರೇಣುಕಾಚಾರ್ಯರ ಜಯಂತಿ ಕಾರ್ಯಕ್ರಮ ಹಮ್ಮಿಕೊಂಡಿತ್ತು.

ಸಾನ್ನಿಧ್ಯ ವಹಿಸಿದ್ದ ಮಾನಿಹಳ್ಳಿ ಶ್ರೀ ಮಳೆಯೋಗೀಶ್ವರ ಸ್ವಾಮೀಜಿ ಮಾತನಾಡಿ, ರೇಣುಕಾಚಾರ್ಯರು ಸಾರಿದ ಸಂದೇಶಗಳು ಪ್ರತಿಯೊಬ್ಬರ ಮನೆ-ಮನದಲ್ಲಿ ನೆಲೆಯೂರಬೇಕು ಎಂದರು.

ವಚನ ಸಾಹಿತ್ಯಕ್ಕೆ ಸಿಕ್ಕ ಮನ್ನಣೆ ವೀರಶೈವ ಧರ್ಮ ಗ್ರಂಥ ಸಿದ್ದಾಂತ ಶಿಖಾಮಣಿಗೆ ಸಿಗದಿರುವುದು ವಿಷಾದದ ಸಂಗತಿ ಎಂದು ಹೇಳಿದರು ಲಿಂಗನಾಯಕನಹಳ್ಳಿಯ ಮಠದ ಶ್ರೀ ಚನ್ನವೀರ ಶಿವಾಚಾರ್ಯ ಸ್ವಾಮೀಜಿ, ಶಿವಶಾಂತವೀರ ಕುಲಕರ್ಣಿ ಮಾತನಾಡಿದರು. ಉತ್ತಂಗಿಯ ಶ್ರೀ ಸೋಮಶೇಖರ ಸ್ವಾಮೀಜಿ, ಅಭಿನವ ಆಲೂರು ಶ್ರೀ ಸಣ್ಣ ಹಾಲವೀರಪ್ಪಜ್ಜ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು.

ಶಿಲ್ಪಿ ಜಿ.ಬಿ. ಹಂಸಾನಂದಾಚಾರ್ಯ, ಕಲಾವಿದ ಎ.ಎ. ಹಾಲಯ್ಯ ಹಾಗೂ ಜಾನಪದ ವಿದ್ವಾಂಸರಾದ ಚಂದ್ರಶೇಖರಶಾಸ್ತ್ರಿ ಅವರನ್ನು ಗೌರವಿಸಲಾಯಿತು.

## ಬಿಸಿಲ ಬೇಗೆಗೆ ಬೆಂದಿದ್ದ ನಗರಕ್ಕೆ ತಂಪೆರೆದ ವರುಣ



ದಾವಣಗೆರೆ, ಮಾ. 28- ಬಿಸಿಲ ಬೇಗೆಗೆ ಬೆಂದಿದ್ದ ನಗರಕ್ಕೆ ಇಂದು ಸಂಜೆ ವರುಣ ತಂಪೆರೆದನು.

ಮಿಂಚು, ಸಿಡಿಲು, ಗುಡುಗಿನ ಆರ್ಭಟದೊಂದಿಗೆ ಅರ್ಧ ಗಂಟೆಗಳ ಕಾಲ ಜೋರಾಗಿ ಸುರಿದ ಮಳೆಯಿಂದಾಗಿ ಬಿಸಿಲಿನ ಜಳಕ್ಕೆ ಕೆಂಡಂತಾಗಿದ್ದ ವಾತಾವರಣ ತಂಪಾಯಿತು. ನಂತರ ಮಳೆ ಸಾಮಾನ್ಯವಾಗಿ ಬಂತು.

ಕಳೆದ ಕೆಲ ದಿನಗಳಿಂದಲೂ ನಗರದಲ್ಲಿ 37 ಡಿಗ್ರಿ ಸೆಲ್ಷಿಯಸ್ ತಾಪಮಾನವಿತ್ತು. ಮೊದಲಿಗೆ ಕಪ್ಪು ದಟ್ಟ ಮೋಡಗಳು ಆವರಿಸಿದ್ದರೂ ಜೋರು ಗಾಳಿ ಮಧ್ಯೆಯೇ ಮಳೆಯಾಯಿತು. ಏಕಾಏಕಿ ದಟ್ಟ ಮೋಡಗಳು ಆವರಿಸಿದ್ದವು. ತಂಪು ಗಾಳಿಗೆ, ಮಳೆಯ ಹನಿಗಳ ಸಿಂಚನದಿಂದ ಉರಿ ಬಿಸಿಲ ಬೇಗೆಯಿಂದ ತತ್ತರಿಸಿದ್ದ ಜನರು ನಿಟ್ಟಿಸಿರು ಬಿಟ್ಟರು.

**ಬಾಳೆ ಬೆಳೆ ಹಾನಿ:** ತಾಲ್ಲೂಕಿನ ಎಲೆಬೇತೂರು ಗ್ರಾಮದಲ್ಲಿ ಸಂಜೆ ಬಂದ ಭಾರೀ ಮಳೆ, ಗಾಳಿಯಿಂದಾಗಿ ಬಾಳೆ ತೋಟದಲ್ಲಿ ಬಾಳೆ ಗಿಡಗಳು ಮುರಿದು ಬಿದ್ದು ಅಪಾರ ಪ್ರಮಾಣದಲ್ಲಿ ಬೆಳೆ ನಷ್ಟ ಉಂಟಾಗಿದೆ. ಕೈಗೆ ಬಂದ ತುತ್ತು ಬಾಯಿಗೆ ಬರದಂತಾಗಿದೆ ಎಂದು ರೈತ ಮಾಳಗೇರ ಬಸವಂತಪ್ಪ ಅಳಲಿಟ್ಟಿದ್ದಾರೆ.

# ಹೋಳಿ ಹಬ್ಬ : ಬಣ್ಣಗಳ ಬಗ್ಗೆ ಇರಲಿ ಎಚ್ಚರ

ಮಂಜು ಮಯೂರ

ಚಳಿಗಾಲ ಮುಗಿದು ವಸಂತ ಕಾಲ ಕಾಲಿಡುವ ಸಮಯದಲ್ಲಿ ಬರುವ ಬಣ್ಣಗಳ ಹಬ್ಬ ಹೋಳಿ. ಗಂಡು, ಹೆಣ್ಣು, ಮಕ್ಕಳು, ಮುದುಕರು, ಬಡವ ಬಲ್ಲಿದ, ಹಿಂದೂ, ಮುಸ್ಲಿಂ, ಕ್ರೈಸ್ತ ಎಂಬ ಭೇದಭಾವವಿಲ್ಲದೆ ಪರಸ್ಪರ ಬಣ್ಣದ ಓಕಳಿಯನ್ನು ಎರಚಿಕೊಂಡು ಮನರಂಜನೆಯ ಉತ್ತುಂಗಕ್ಕೇರಿ ದ್ವೇಷ, ಕ್ರೋಧ, ಮದ, ಮತ್ಸರಗಳಿಗೆ ಇತಿಶ್ರೀ ಹಾಡಿ ಪ್ರೀತಿ, ಪ್ರೇಮ, ಮಮತೆ, ಗೌರವದಿಂದ ಎಲ್ಲವನ್ನೂ ಮರೆತು ಸ್ನೇಹ ಹಸ್ತ ಚಾಚುವ ಒಂದು ವಿಶಿಷ್ಟ ಹಬ್ಬವೇ ಹೋಳಿ.

ಹೆಚ್ಚಾಗಿ ಉತ್ತರ ಭಾರತದಲ್ಲಿ ಸಂಭ್ರಮಿಸುವ ಈ ಬಣ್ಣಗಳ ಹಬ್ಬ ಇತ್ತೀಚೆಗೆ ದಕ್ಷಿಣ ಭಾರತಕ್ಕೂ ಹಬ್ಬುತ್ತಿದೆ. ಈ ಹಬ್ಬದಲ್ಲಿ ಹಿಂದಿನ ಕಾಲದಲ್ಲಿ ನೈಸರ್ಗಿಕವಾದ ಬಣ್ಣಗಳನ್ನು ಬಳಸುತ್ತಿದ್ದರು. ಬಹಳ ಹಿಂದೆ ಅರಶಿನ ಪುಡಿ



ಮತ್ತು ಅಕ್ಕಿಹಿಟ್ಟು ಬೆರೆಸಿದ 'ಗುಲಾಲು' ಬಳಸುತ್ತಿದ್ದರು. ನಂತರದ ದಿನಗಳಲ್ಲಿ ಒಣಗಿದ ಹೂವುಗಳು ಮತ್ತು ನೈಸರ್ಗಿಕವಾದ ಔಷಧಿ ಎಲೆಗಳು ಮತ್ತು ಔಷಧಿ ಸಸ್ಯಗಳಿಂದ ತಯಾರಿಸಿದ ಬಣ್ಣವನ್ನು ಉಪಯೋಗಿಸುತ್ತಿದ್ದರು.

ಇದರಿಂದ ದೇಹಕ್ಕೆ ಮತ್ತು ಚರ್ಮಕ್ಕೆ ಯಾವುದೇ ತೊಂದರೆ ಉಂಟಾಗುತ್ತಿರಲಿಲ್ಲ. ಆದರೆ ಇತ್ತೀಚಿನ ದಿನಗಳಲ್ಲಿ ಹೆಚ್ಚು ಹೆಚ್ಚಾಗಿ ಕೃತಕವಾದ ರಾಸಾಯನಿಕಯುಕ್ತ ಗಾಢವಾದ ಬಣ್ಣಗಳನ್ನು ಬಳಸುವುದರಿಂದಾಗಿ ಚರ್ಮದಲ್ಲಿ ಗುಳ್ಳೆಗಳು, ತುರಿಕೆಗಳು, ಕಣ್ಣಿನಲ್ಲಿ ಅಲರ್ಜಿ ಮತ್ತು ಕೂದಲಿನ ಬಣ್ಣ ಬದಲಾಗುವುದು, ಉಸಿರಾಟದ ತೊಂದರೆ ಮುಂತಾದ ಸಮಸ್ಯೆಗಳು ಕಾಣಿಸುತ್ತವೆ. ಈ ನಿಟ್ಟಿನಲ್ಲಿ ಹೆಚ್ಚು ನಿಗಾವಹಿಸಿ ಹೆಚ್ಚು ನೈಸರ್ಗಿಕವಾದ ಬಣ್ಣಗಳನ್ನು ಬಳಸಿ ಕೃತಕ ಬಣ್ಣಗಳಿಗೆ ತಿಲಾಂಜಲಿ ಇಟ್ಟು, ಬಣ್ಣಗಳ ಹಬ್ಬ ಹೋಳಿಯನ್ನು ನಿಜವಾಗಿಯೂ ಸ್ಮರಣೀಯವಾಗಿ ಮಾಡಿಕೊಳ್ಳುವ ಅನಿವಾರ್ಯತೆ ಇದೆ ಎಂದರೂ ತಪ್ಪಿಲ್ಲ.

ಬಣ್ಣವಿಲ್ಲದೆ ಬದುಕಿಲ್ಲ ಬದುಕೇ ಬಣ್ಣಗಳಂತೆ ರಂಜನೀಯವಾಗಿರಬೇಕು ಎಂದು ಬಯಸುವುದು ಮನುಷ್ಯನ ಸಹಜ ಧರ್ಮ. ಆದರೆ ಮಿತಿಮೀರಿ, ಅತಿಯಾಗಿ ಕೃತಕ ಬಣ್ಣ ಬಳಸಿದಲ್ಲಿ ಬಣ್ಣ ಬದುಕನ್ನೇ ಕಸಿದೀತು ಎಂಬ ಕಟು ಸತ್ಯವನ್ನು ಅರಿತು ಜನರು ಹೆಚ್ಚು ಜವಾಬ್ದಾರಿಯುತವಾಗಿ ವರ್ತಿಸಿದಲ್ಲಿ ಮಾತ್ರ ಬಣ್ಣಗಳ ಹಬ್ಬದ ಆಚರಣೆ ಹೆಚ್ಚು ಅರ್ಥಪೂರ್ಣವಾದೀತು. ಅಲ್ಲವೇ?

# ಗ್ರಾಮೀಣ ಕ್ರೀಡೆಗಳಿಂದ ಯುವ ಜನತೆ ದೂರ



### ತೌಡೂರು ಗ್ರಾಮದಲ್ಲಿ ಶಾಸಕ ಎಸ್‌ವಿಆರ್

ಹರಪನಹಳ್ಳಿ, ಮಾ.28. - ಇಂದಿನ ಯುವ ಪೀಳಿಗೆ ಮೊಬೈಲ್, ಕಂಪ್ಯೂಟರ್‌ಗಳ ದಾಸರಾಗಿ ಗ್ರಾಮೀಣ ಕ್ರೀಡೆಗಳಿಂದ ದೂರ ಉಳಿಯುವಂತಾಗಿದೆ ಎಂದು ಕರ್ನಾಟಕ ಮಹರ್ಷಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಅಧ್ಯಕ್ಷರು ಹಾಗು ಶಾಸಕ ಎಸ್.ವಿ. ರಾಮಚಂದ್ರಪ್ಪ ಹೇಳಿದರು.

ತಾಲ್ಲೂಕಿನ ತೌಡೂರು ಗ್ರಾಮದಲ್ಲಿ ಮಾರುತಿ ಸ್ಪೋರ್ಟ್ಸ್ ಕ್ಲಬ್ ವತಿಯಿಂದ ಆಯೋಜಿಸಿದ್ದ ರಾಜ್ಯ ಮಟ್ಟದ ಕಬಡ್ಡಿ ಪಂದ್ಯಾವಳಿಯಲ್ಲಿ ವಿಜೇತರಾದ ಕ್ರೀಡಾಪಟುಗಳಿಗೆ ಬಹುಮಾನ ವಿತರಿಸಿ ಮಾತನಾಡಿ, ಕಬಡ್ಡಿ ಆಟ ಗಂಡು ಮೆಟ್ಟಿನ ಆಟವಾಗಿದ್ದು, ಕ್ರೀಡೆಗಳಲ್ಲಿ ಸೋಲು-ಗೆಲುವು ಮುಖ್ಯವಲ್ಲ, ಭಾಗವಹಿಸುವುದು ಮುಖ್ಯವಾಗಿದ್ದು, ಕ್ರೀಡೆಗಳಿಂದ ಸದೃಢ ಆರೋಗ್ಯ ಕಾಪಾಡಲು ಸಾಧ್ಯವಾಗುತ್ತದೆ ಎಂದರು. ಯಶಸ್ವೀ ಕ್ರೀಡಾ ಪಟುವಿಗೆ ಸದೃಢ ದೇಹದ ಜೊತೆಗೆ ಸದೃಢ ಮನಸ್ಸು ಬೇಕಾಗಿದೆ. ಶಾಲಾ-ಕಾಲೇಜುಗಳಲ್ಲಿ ದೈಹಿಕ ಶಿಕ್ಷಣಕ್ಕೆ ಹೆಚ್ಚಿನ ಮಹತ್ವ ಕೊಡಬೇಕಾಗಿದೆ. ಉತ್ತಮ ಆರೋಗ್ಯ ಕಾಪಾಡಿಕೊಳ್ಳಲು ಕ್ರೀಡೆ ಅವಶ್ಯಕವಾಗಿದೆ ಎಂದರು.

ನಾನು ಶಾಸಕನಾದ ನಂತರ ಕ್ರೀಡೆ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗಿದ್ದು, ಜಗಳೂರು ವಿಧಾನಸಭಾ ವ್ಯಾಪ್ತಿಯಲ್ಲಿ ಅನೇಕ ಕಾರ್ಯಕ್ರಮಗಳನ್ನು ಯಶಸ್ವಿಗೊಳಿಸಲಾಗಿದೆ. ಜಗಳೂರು ಮತ್ತು ಅರಸೀಕೆರೆ ಹೋಬಳಿಯ ಕೆರೆಗಳನ್ನು ತುಂಬಿಸುವ ಯೋಜನೆ ಕಾರ್ಯರೂಪದಲ್ಲಿದ್ದು, ಭರದಿಂದ ಕಾಮಗಾರಿ ನಡೆಯುತ್ತಿದೆ. ಅತಿ ಶೀಘ್ರದಲ್ಲಿ ಕೆರೆಗಳಿಗೆ ನೀರು ತುಂಬಿಸುವ ಕೆಲಸ ಮಾಡುತ್ತೇನೆ ಎಂದರು. 7 ಗ್ರಾಮ ಪಂಚಾಯುತಿ ಭಾಗದಲ್ಲಿ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡಲಾಗುತ್ತಿದೆ. ಅನೇಕ ಕಡೆ ನೂತನ ಶಾಲಾ ಕೊಠಡಿಗಳು ನಿರ್ಮಾಣಗೊಂಡಿವೆ. ಕಂಚಿಕೇರಿಯಿಂದ ಅರಸೀಕೆರೆಯವರೆಗೆ ಸುಸಜ್ಜಿತ ರಸ್ತೆ ಕಾಮಗಾರಿ ಶೀಘ್ರದಲ್ಲಿ ಮುಗಿಯಲಿದೆ ಎಂದರು.

ಜಿ.ಪಂ. ಸದಸ್ಯ ಡಿ. ಸಿದ್ದಪ್ಪ, ಜಿಲ್ಲಾ ಬಿಜೆಪಿ ಪ್ರದಾನ ಕಾರ್ಯದರ್ಶಿ ಸೊಕ್ಕೆ ನಾಗರಾಜ್, ಎಸ್.ಟಿ. ಮೋರ್ಚಾ ಕಾರ್ಯದರ್ಶಿ ಬ್ಯಾಲನಹಳ್ಳಿ ಕೆಂಚನಗೌಡ, ಕಾವಲಹಳ್ಳಿ ಭರ್ಮಪ್ಪ, ಬಿದರಕೆರೆ ರವಿಕುಮಾರ್, ಮಂಜಯ್ಯ, ರಾಜನಾಯ್ಕ, ಗೋಪಿನಾಯ್ಕ, ಸುನೀಲ್, ಪಿ.ಎಸ್.ಐ. ಕಿರಣ್‌ಕುಮಾರ್ ಇತರರಿದ್ದರು.

## ಹರಪನಹಳ್ಳಿ : ಎಸ್ಸೆಸ್ಸೆಲ್ಸಿ ಪರೀಕ್ಷಾ ನಿಮಿತ್ತ ಫೋನ್‌ಇನ್ ಕಾರ್ಯಕ್ರಮ



ಹರಪನಹಳ್ಳಿ, ಮಾ.28- ಪಟ್ಟಣದ ಹಡಗಲಿ ರಸ್ತೆಯಲ್ಲಿರುವ ರಾಜ ಸೋಮಶೇಖರ ನಾಯಕ ಆಂಗ್ಲ ಮಾಧ್ಯಮ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಎಸ್ಸೆಸ್ಸೆಲ್ಸಿ ಫಲಿತಾಂಶವನ್ನು ಉತ್ತಮಪಡಿಸುವ ನಿಟ್ಟಿನಲ್ಲಿ ಫೋನ್‌ಇನ್ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಕ್ಷೇತ್ರ ಶಿಕ್ಷಣಾಧಿಕಾರಿ ಎಸ್.ಎಂ. ವೀರಭದ್ರಯ್ಯ ಅವರ ನೇತೃತ್ವದಲ್ಲಿ 'ನಿಮ್ಮ ಪ್ರಶ್ನೆಗೆ ನಮ್ಮ ಉತ್ತರ' ಶೀರ್ಷಿಕೆಯಡಿ ರಾಜ್ಯದಲ್ಲಿಯೇ ತಾಲ್ಲೂಕು ಹಂತದಲ್ಲಿ ಹರಪನಹಳ್ಳಿಯಲ್ಲಿ ಪ್ರಪ್ರಥಮವಾಗಿ ಈ ವಿನೂತನ ಕಾರ್ಯಕ್ರಮವನ್ನು ಪ್ರಾರಂಭ ಮಾಡಲಾಗಿದೆ. ತಾಲ್ಲೂಕಿನ 62 ಪ್ರೌಢಶಾಲೆಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದು, ಮಕ್ಕಳು ಪಠ್ಯಪುಸ್ತಕದಲ್ಲಿನ ಕ್ಲಿಷ್ಟ ಪರಿಕಲ್ಪನೆಗಳನ್ನು ಫೋನ್ ಮೂಲಕ ವಿಷಯ ತಜ್ಞರ ಜೊತೆ ನೇರವಾಗಿ ಕೇಳಿ ಪರಿಹರಿಸಿಕೊಂಡರು.

ಕಾರ್ಯಕ್ರಮದಲ್ಲಿ ಬಳ್ಳಾರಿ ಜಿಲ್ಲಾ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಸಿ. ರಾಮಪ್ಪ, ಸಂಪನ್ಮೂಲ ವ್ಯಕ್ತಿಗಳಾದ ಗಿರಜ್ಜಿ ಮಂಜುನಾಥ್, ದಯಾನಂದ, ವೀರೇಂದ್ರ, ಲಿಂಗರಾಜ್, ಕೊಟ್ರೇಶ್, ಗಣೇಶ್, ಮಹೇಶ್ ಪೂಜಾರ್, ಕಬೀರ್ ನಾಯ್ಕ, ಜಯ ಮಾಲತೇಶ್ ಇನ್ನಿತರರಿದ್ದರು.

## ಬಿಜೆಪಿ ದಾವಣಗೆರೆ ವಿಭಾಗದ ಮಾಧ್ಯಮ ಮಂಥನ ಕಾರ್ಯಕ್ರಮ



ಚಿತ್ರದುರ್ಗ, ಮಾ.28- ಪಕ್ಷದಲ್ಲಿ ಮಾಧ್ಯಮ ವಿಭಾಗದ ಚಟುವಟಿಕೆಯನ್ನು ಚುರುಕು ಗೊಳಿಸಲು, ಪಕ್ಷದ ಕಾರ್ಯಚಟುವಟಿಕೆಗಳನ್ನು ಮಾಧ್ಯಮಗಳಿಗೆ ಯಶಸ್ವಿಯಾಗಿ ತಲುಪಿಸಲು ದಾವಣಗೆರೆ ವಿಭಾಗ ಮಟ್ಟದ (ದಾವಣಗೆರೆ, ತುಮಕೂರು, ಹಾಗೂ ಚಿತ್ರದುರ್ಗ) ಮಾಧ್ಯಮ ಮಂಥನ ಕಾರ್ಯಕ್ರಮವು ಇಂದು ಚಿತ್ರದುರ್ಗದಲ್ಲಿ ಅಮೋಘ ಇಂಟರ್ ನ್ಯಾಷನಲ್ ಹೋಟೆಲ್‌ನಲ್ಲಿ ಜರುಗಿತು.

ಕಾರ್ಯಕ್ರಮದ ಉದ್ಘಾಟನೆಯನ್ನು ರಾಜ್ಯ ಬಿಜೆಪಿ ವಕ್ತಾರ ಜಗ್ಗೇಶ್ ಉದ್ಘಾಟಿಸಿದರು.

ಸಭೆಯಲ್ಲಿ ಇನ್ನೊಬ್ಬ ರಾಜ್ಯ ವಕ್ತಾರರಾದ ಶ್ರೀಮತಿ ತೇಜಸ್ವಿನಿ ಗೌಡ, ಚಿತ್ರದುರ್ಗ ಶಾಸಕ ಜಿ.ಹೆಚ್ ತಿಪ್ಪಾರೆಡ್ಡಿ, ವಿಭಾಗ ಸಂಘಟಕರು, ಪ್ರಧಾನ ಕಾರ್ಯದರ್ಶಿ ಜೇಷ್ಠ ಪಡಿವಾಳ್, ವಿಭಾಗ ಉಸ್ತುವಾರಿ ಜಿ.ಎಂ. ಸುರೇಶ್, ರಾಜ್ಯ ಮಾಧ್ಯಮದ ಸದಸ್ಯ ಅವಿನಾಶ್, ಪ್ರಶಾಂತ್, ಚಿತ್ರದುರ್ಗ ಜಿಲ್ಲಾ ಬಿಜೆಪಿ ಅಧ್ಯಕ್ಷ ಮುರಳಿ, ನಗರಸಭಾ ಅಧ್ಯಕ್ಷ ಶ್ರೀಮತಿ ತಿಪ್ಪಮ್ಮ ವೆಂಕಟೇಶ್, ದಾವಣಗೆರೆ ಜಿಲ್ಲಾ ವಕ್ತಾರ ಡಿ.ಎಸ್. ಶಿವಶಂಕರ್, ಸಹ ವಕ್ತಾರ ಮಹೇಶ್ವರ ನಾಯ್ಕ, ಜಿಲ್ಲಾ ಮಾಧ್ಯಮ ಸಂಚಾಲಕ ವಿಶ್ವಾಸ್ ಹೆಚ್.ಪಿ, ದಾ. ಉತ್ತರ ಮಂಡಲದ ಸಂಚಾಲಕ ನಾಗರಾಜ್ ಕೆ.ಪಿ, ದಾ.ದಕ್ಷಿಣ ಮಂಡಲದ ಸಂಚಾಲಕ ಹರೀಶ್ ಹೊನ್ನೂರು, ಮಾಯಕೊಂಡ ಮಂಡಲದ ಸಂಚಾಲಕ ಸಂತೋಷ್, ಹರಿಹರ ಗ್ರಾಮಾಂತರ ಮಂಡಲದ ಸಂಚಾಲಕ ಅರವಿಂದ್ ಬಣಕಾರ್, ಚನ್ನಗಿರಿ ಮಂಡಲದ ಸಂಚಾಲಕ ನರೇಂದ್ರ ಪನ್ನೆ ಸಮುದ್ರರವರು ಉಪಸ್ಥಿತರಿದ್ದರು.

### ಈ ಬಾರಿ ಕುಂದಿದ ಕಾಮದಹನದ ಕಳೆ

## ಸಂಭ್ರಮಕ್ಕೆ ಬ್ರೇಕ್ ಹಾಕಿದ ಕೊರೊನಾ, ಮಳೆ

ದಾವಣಗೆರೆ, ಮಾ.28- ಹೋಳಿ ಹಬ್ಬದ ಮುನ್ನಾ ದಿನವಾದ ಇಂದು ರಾತ್ರಿ ಮಕ್ಕಳು, ಯುವಕರು ಸ್ಥಳೀಯವಾಗಿ ಕಾಮದಹನ ಮಾಡಿ ಸಂಭ್ರಮಿಸಿದರು. ಪುಟಾಣಿ ಮಕ್ಕಳು ಸೇರಿದಂತೆ ಯುವಕರು ತಮ್ಮ ಬಡಾವಣೆಗಳ ಖಾಲಿ ನಿವೇಶನಗಳಲ್ಲಿ ಕಾಮನ ಪ್ರತಿರೂಪ ರಚಿಸಿ, ಬೆಂಕಿ ಹಚ್ಚಿ ಸಂಭ್ರಮಿಸಿದರು. ಮಕ್ಕಳ ಸಂಭ್ರಮವೇ ಹೆಚ್ಚಾಗಿದ್ದು ಕಂಡು ಬಂತು. ಕೊರೊನಾ ಹಿನ್ನೆಲೆಯಲ್ಲಿ ಹೆಚ್ಚು ಜನ ಸೇರಬಾರದೆಂಬ ನಿಯಮದ ಕಾರಣ ಪೊಲೀಸರು ಗಸ್ತು ತಿರುಗಿ ಮುಂಜಾಗ್ರತಾ ಕ್ರಮ ಪಾಲಿಸುವಂತೆ ಮುನ್ನೆಚ್ಚರಿಸಿದರು.

ಕೊರೊನಾ ಹಿನ್ನೆಲೆಯಲ್ಲಿ ಸಾರ್ವಜನಿಕವಾಗಿ ಕಾಮದಹನಕ್ಕೆ ಅವಕಾಶ ಇರಲಿಲ್ಲ. ಅಲ್ಲದೇ ಸಂಜೆ ವೇಳೆ ದಿಢೀರ್ ಮಳೆ ಸಿಂಚನವಾಗಿದ್ದರಿಂದ ಕಾಮದಹನದ ಸಂಭ್ರಮದ ಕಳೆ ಕುಂದಿದ್ದು ಸಾಮಾನ್ಯವಾಗಿತ್ತು. ಕೊರೊನಾ ಹಿನ್ನೆಲೆ ಜಿಲ್ಲಾಡಳಿತವು ಸೋಮವಾರ ಸಾರ್ವಜನಿಕವಾಗಿ ಓಕಳಿಯಾಟವನ್ನು ನಿಷೇಧಿಸಿದ್ದು, ಕೊರೊನಾ ಮುಂಜಾಗ್ರತಾ ನಿಯಮಗಳಡಿ ಕೇವಲ ಮನೆಗಳ ಅಂಗಳದಲ್ಲಷ್ಟೇ ಅವಕಾಶ ನೀಡಲಾಗಿದೆ.

# ಕೇಂದ್ರ, ರಾಜ್ಯ ಸರ್ಕಾರಗಳಿಗೆ ಜನಪರ ಕಾಳಜಿ ಇಲ್ಲ



### ಕಾರ್ಮಿಕ ಮುಖಂಡ ಹೆಚ್.ಕೆ.ರಾಮಚಂದ್ರಪ್ಪ

ಹರಪನಹಳ್ಳಿ, ಮಾ.28. - ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ರೈತರ, ಕಾರ್ಮಿಕರ, ಜನಸಾಮಾನ್ಯರ ಬಗ್ಗೆ ಜನಪರ ಕಾಳಜಿ ಇಲ್ಲ ಎಂದು ಅಂಗನವಾಡಿ ಕಾರ್ಯಕರ್ತೆಯರ ಹಾಗೂ ಸಹಾಯಕಿಯರ ಫೆಡರೇಷನ್ ಅಧ್ಯಕ್ಷ ಹೆಚ್.ಕೆ. ರಾಮಚಂದ್ರಪ್ಪ ಆರೋಪಿಸಿದರು.

ಪಟ್ಟಣದ ನಟರಾಜ ಕಲಾಭವನದಲ್ಲಿ ಎ.ಐ.ಟಿ.ಯು.ಸಿ ಶತಮಾನೋತ್ಸವ ಹಾಗೂ ಫೆಡರೇಷನ್ ತಾಲ್ಲೂಕು 6ನೇ ಸಮ್ಮೇಳನ ಉದ್ಘಾಟಿಸಿ ಮಾತನಾಡಿ ಇಂಧನ ಬೆಲೆ ಶ್ರೀಲಂಕಾ ಮತ್ತು ನೇಪಾಳದಲ್ಲಿ ಕಡಿಮೆ ಇದ್ದು ಭಾರತದಲ್ಲಿ ಮಾತ್ರ ಹೆಚ್ಚಾಗಿದೆ. ಇಂಧನ ಬೆಲೆ ಏರಿಕೆಯಿಂದ ಜನಸಾಮಾನ್ಯರು ಜೀವನ ನಡೆಸುವುದು ದುಸ್ತರವಾಗಿದೆ ಎಂದು ದೂರಿದರು.

ಕೆಪಿಸಿಸಿ ಮಹಿಳಾ ಕಾರ್ಯದರ್ಶಿ ಎಂ.ಪಿ.ಲತಾ ಮಲ್ಲಿಕಾರ್ಜುನ್, ಎ.ಐ.ಕೆ.ಎಸ್ ರಾಜ್ಯ ಉಪಾಧ್ಯಕ್ಷ ಹೊಸಳ್ಳಿ ಮಲ್ಲೇಶ್, ಎ.ಐ.ಟಿ.ಯು.ಸಿ ಕಾರ್ಯದರ್ಶಿ ಜನಾರ್ದನ, ಜಿಲ್ಲಾ ಕಾರ್ಯದರ್ಶಿ ಎ.ಆರ್.ಎಂ. ಇಸ್ಮಾಯಿಲ್ ಮಾತನಾಡಿದರು. ಅಂಗನವಾಡಿ ಕಾರ್ಯಕರ್ತೆಯರಿಗೆ ಕನಿಷ್ಟ ವೇತನ ನಿಗದಿ, ಅಂಗನವಾಡಿಗಳಲ್ಲಿ ಎಲ್.ಕೆ.ಜಿ., ಯು.ಕೆ.ಜಿ ಆರಂಭಿಸುವುದು, ಪಠ್ಯ ಪುಸ್ತಕ ಸಮವಸ್ತ್ರ ಒದಗಿಸುವುದು. ಸರ್ಕಾರಿ ನೌಕರರೆಂದು ಪರಿಗಣಿಸುವಂತೆ ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಯಿತು.

ಎ.ಐ.ಟಿ.ಯು.ಸಿ ತಾಲ್ಲೂಕು ಅಧ್ಯಕ್ಷೆ ಬಿ.ಎಂ. ತ್ರಿವೇಣಿ, ಎ.ಐ.ಟಿ.ಯು.ಸಿ ತಾಲ್ಲೂಕು ಕಾರ್ಯದರ್ಶಿ ಗುಡಿಹಳ್ಳಿ ಹಾಲೇಶ್, ಮುಖಂಡರಾದ ಕೆ.ಎಸ್ ಹಡಗಲಿ ಮಠ್, ಕಂಚಿಕೇರಿ ಪಿ.ಜಯಲಕ್ಷ್ಮಿ, ಎಂ.ಸುಮಾ, ರಮೇಶನಾಯ್ಕ, ಮಹಾಂತಮ್ಮ, ಮಂಗಮ್ಮ, ಫಾತಿಮಾ, ನಾಗರತ್ನಮ್ಮ ಇತರರಿದ್ದರು.

# ಏ.3 ರಿಂದ ಬೆಳ್ಳೂಡಿಯಲ್ಲಿ ಮುಖ್ಯದ್ವಾರ ಉದ್ಘಾಟನೆ

ಹರಿಹರ, ಮಾ.28- ತಾಲ್ಲೂಕಿನ ಬೆಳ್ಳೂಡಿ ಗ್ರಾಮದಲ್ಲಿ ಶ್ರೀ ಕಾಗಿನೆಲೆ ಮಹಾಸಂಸ್ಥಾನ ಕನಕ ಗುರುಪೀಠದ ಆಶ್ರಯದಲ್ಲಿ ವಿದ್ಯಾರ್ಥಿ ನಿಲಯ, ಸಮುದಾಯ ಭವನ ಮತ್ತು ಮುಖ್ಯದ್ವಾರ ಉದ್ಘಾಟನೆ, ನೂತನ ಹೊರ ಬೀರದೇವರ ಪ್ರಾಣ ಪ್ರತಿಷ್ಠಾಪನೆ, ಮಹಾಕುಂಭಾಭಿಷೇಕ ಮತ್ತು ಶಾಖಾ ಮಠದ 5ನೇ ವಾರ್ಷಿಕೋತ್ಸವ ಸಮಾರಂಭ ಏ. 3 ರಿಂದ ಮೂರು ದಿನಗಳ ಕಾಲ ಹಮ್ಮಿಕೊಳ್ಳಲಾಗಿದೆ.

ದಿನಾಂಕ 3 ರ ಶನಿವಾರ ಬೆಳಿಗ್ಗೆ 8 ಗಂಟೆಗೆ ಶ್ರೀ ಶಿವಾನಂದಪುರಿ ಸ್ವಾಮೀಜಿಯವರಿಂದ ಧ್ವಜಾರೋಹಣ ನಡೆಯುವುದು. ಅಂದು ಬೆಳಿಗ್ಗೆ 10 ಗಂಟೆಗೆ ವಿವಿಧ ಊರುಗಳಿಂದ ಬೀರಲಿಂಗೇಶ್ವರ ದೇವರ ಆಗಮನವಾಗುವುದು.

ಬೆಳಿಗ್ಗೆ 11 ಕ್ಕೆ ಗ್ರಾಮದ ಒಳ ಗುಡಿಯಿಂದ ಶ್ರೀ ಬೀರದೇವರುಗಳ ಉತ್ಸವ ನಡೆಯುವುದು. ಸಾನ್ನಿಧ್ಯವನ್ನು ಶ್ರೀ ತ್ರಿದಂಡಿ ವೆಂಕಟರಾಮಾನುಜ ಜೀಯರ್ ವಹಿಸುವರು. ಉತ್ಸವವನ್ನು ಎಸ್. ಗಂಗಮ್ಮ ಕೋಂ ಬೀರಪ್ಪ ಉದ್ಘಾಟಿಸುವರು. ಜಿ. ದ್ಯಾವಪ್ಪ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಪರಶುರಾಮಪ್ಪ, ಜೆ.ಸಿ. ನಿಂಗಪ್ಪ, ಜಯಶೀಲ, ಎಂ.ಆರ್. ಮಹೇಶ್, ನಿರ್ಮಲ, ಭಾಗ್ಯಲಕ್ಷ್ಮಿ, ಜಾಹೀರಾಬೀ, ಕೆ. ಜಡಿಯಪ್ಪ ಆಗಮಿಸುವರು.

ದಿನಾಂಕ 4 ರ ಭಾನುವಾರ ಬೆಳಿಗ್ಗೆ 11.30 ಕ್ಕೆ ವಿದ್ಯಾರ್ಥಿನಿಲಯ, ಸಮುದಾಯ ಭವನ, ಮುಖ್ಯದ್ವಾರ ಉದ್ಘಾಟನಾ ಸಮಾರಂಭ ನಡೆಯುವುದು.

ಸಾನ್ನಿಧ್ಯವನ್ನು ಶ್ರೀ ಸಿದ್ಧಲಿಂಗ ಸ್ವಾಮೀಜಿ ವಹಿಸುವರು. ಜಗದ್ಗುರು ಶ್ರೀ ನಿರಂಜನಾನಂದಪುರಿ ಸ್ವಾಮೀಜಿ ನೇತೃತ್ವ ವಹಿಸುವರು.

ಕಾರ್ಯಕ್ರಮವನ್ನು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಉದ್ಘಾಟಿಸುವರು. ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಕೆ.ಎಸ್. ಈಶ್ವರಪ್ಪ, ಬಸವರಾಜ ಬೊಮ್ಮಾಯಿ, ಭೈರತಿ ಬಸವರಾಜ್, ಎಂ.ಟಿ.ಬಿ. ನಾಗರಾಜ್, ಆರ್. ಶಂಕರ್, ಜಿ.ಎಂ. ಸಿದ್ದೇಶ್ವರ ಆಗಮಿಸುವರು.

ದಿನಾಂಕ 5 ರ ಸೋಮವಾರ ಬೆಳಿಗ್ಗೆ 11.30 ಕ್ಕೆ ನೂತನ ಹೊರ ಬೀರದೇವರ ಪ್ರಾಣ ಪ್ರತಿಷ್ಠಾಪನೆ ಮಹಾಕುಂಭಾಭಿಷೇಕ ನಡೆಯುವುದು. ಸಾನ್ನಿಧ್ಯವನ್ನು ಶ್ರೀ ಈಶ್ವರಾನಂದಪುರಿ ಸ್ವಾಮೀಜಿ, ಜಗದ್ಗುರು ಡಾ. ಶಾಂತವೀರ ಸ್ವಾಮೀಜಿ, ಶ್ರೀ ಸಿದ್ದರಾಮಾನಂದಪುರಿ ಸ್ವಾಮೀಜಿ, ಜಗದ್ಗುರು ಶ್ರೀ ಮಾದಾರ ಚೆನ್ನಯ್ಯ ಸ್ವಾಮೀಜಿ, ಜಗದ್ಗುರು ಶ್ರೀ ಪ್ರಸನ್ನಾನಂದಪುರಿ ಸ್ವಾಮೀಜಿ, ಜಗದ್ಗುರು ಶ್ರೀ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ, ಶ್ರೀ ಮುಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ, ಜಗದ್ಗುರು ಶ್ರೀ ವಚನಾನಂದ ಸ್ವಾಮೀಜಿ, ಜಗದ್ಗುರು ಶ್ರೀ ವೇಮಾನಂದಪುರಿ ಸ್ವಾಮೀಜಿ, ಜಗದ್ಗುರು ಶ್ರೀ ಶಾಂತಭೀಷ್ಮ ಅಂಬಿಗರ ಚೌಡಯ್ಯ ಸ್ವಾಮೀಜಿ, ಜಗದ್ಗುರು ಶ್ರೀ ಜಯಮೃತ್ಯುಂಜಯ ಸ್ವಾಮೀಜಿ, ಜಗದ್ಗುರು ಶ್ರೀ ಮಾಚೀದೇವ ಸ್ವಾಮೀಜಿ.

ಮುಖ್ಯ ಅತಿಥಿಗಳು : ಹೆಚ್. ವಿಶ್ವನಾಥ್, ಬಂಡೆಪ್ಪ ಕಾಶೆಂಪೂರ, ಹೆಚ್.ಎಂ. ರೇವಣ್ಣ, ಕೆ. ವಿರೂಪಾಕ್ಷಪ್ಪ, ರಾಮಪ್ಪ, ಭೈರತಿ ಸುರೇಶ್ ಮತ್ತಿತರರು ಭಾಗವಹಿಸುವರು.

ರಾಜ್ಯ ಸಹಕಾರ ಮಹಾಮಂಡಳದ ಚುನಾವಣೆ

## ಜಿ.ಟಿ. ದೇವೇಗೌಡ ಗುಂಪಿಗೆ ಅತ್ಯಧಿಕ ಸ್ಥಾನಗಳು, ಜೆ.ಆರ್.ಎಸ್. ಪರಾಭವ

ಬೆಂಗಳೂರು,ಮಾ.28- ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ಆಡಳಿತ ಮಂಡಳಿಗೆ ಇಂದು ನಡೆದ ಚುನಾವಣೆಯಲ್ಲಿ ಹಿರಿಯ ಶಾಸಕರೂ ಆಗಿರುವ ಸಹಕಾರಿ ಧುರೀಣ ಜಿ.ಟಿ.ದೇವೇಗೌಡ ಅವರ ನೇತೃತ್ವದ ತಂಡಕ್ಕೆ ಅತ್ಯಧಿಕ ಸ್ಥಾನಗಳು ಲಭಿಸಿವೆ.

ಆಡಳಿತ ಮಂಡಳಿಯ ಒಟ್ಟು 14 ಸ್ಥಾನಗಳ ಪೈಕಿ 13 ಸ್ಥಾನಗಳಿಗೆ ರಾಜ್ಯದ 29 ಜಿಲ್ಲಾ ಸಹಕಾರ ಯೂನಿಯನ್ ಗಳಿಂದ 26 ಜನರು ಸ್ಪರ್ಧಿಸಿದ್ದರು. ಇತರೆ ವಲಯಗಳಿಂದ ಒಂದು ಸ್ಥಾನಕ್ಕೆ ನಾಲ್ವರು ಸ್ಪರ್ಧಿಸಿದ್ದರು.

ಸಹಕಾರ ಯೂನಿಯನ್ ಗಳಿಗೆ ಸಂಬಂಧಿಸಿದ 13 ಸ್ಥಾನಗಳಲ್ಲಿ ಬೆಂಗಳೂರು ವಿಭಾಗದಿಂದ ನಾಲ್ವರು, ಮೈಸೂರು, ಬೆಳಗಾವಿ ಮತ್ತು ಕಲಬುರ್ಗಿ ವಿಭಾಗಗಳಿಂದ ತಲಾ ಮೂವರಂತೆ ಆಯ್ಕೆಯಾಗಿದ್ದಾರೆ.

ಬೆಂಗಳೂರು ವಿಭಾಗದಿಂದ ಸ್ಪರ್ಧೆ ಮಾಡಿದವರ ಪೈಕಿ ದಾವಣಗೆರೆ ಜಿಲ್ಲಾ ಸಹಕಾರ ಯೂನಿಯನ್ ನಿಂದ ಸ್ಪರ್ಧಿಸಿದ್ದ ಜೆ.ಆರ್. ಷಣ್ಮುಖಪ್ಪ ಅವರು 9 ಮತಗಳನ್ನು ಪಡೆದು ಪರಾಭವಗೊಂಡಿದ್ದಾರೆ. ಇವರೊಂದಿಗೆ ನಾಲ್ವರು ಪರಾಭವಗೊಂಡಿದ್ದಾರೆ.

ಇದೇ ವಿಭಾಗದಿಂದ ಸ್ಪರ್ಧೆ ಮಾಡಿದವರಲ್ಲಿ ರಾಮನಗರದ ಹೆಚ್.ಎನ್. ಅಶೋಕ್ (18), ಬೆಂಗಳೂರು ಗ್ರಾಮಾಂತರದ ಎ.ಸಿ. ನಾಗರಾಜ್ (18), ಶಿವಮೊಗ್ಗದ ಬಿ.ಡಿ. ಭೂಕಾಂತ (18), ಚಿತ್ರದುರ್ಗದ ಆರ್. ರಾಮರೆಡ್ಡಿ (18) ಚುನಾಯಿತಗೊಂಡಿದ್ದಾರೆ.

ಮೈಸೂರು ವಿಭಾಗದಿಂದ ಉಡುಪಿ ಜಿಲ್ಲೆಯ ಬಿ. ಜಯಕರ ಶೆಟ್ಟಿ (21), ಜಿ.ಟಿ. ದೇವೇಗೌಡ (18), ಚಿಕ್ಕಮಗಳೂರಿನ ಬಿ.ಸಿ. ಲೋಕಪ್ಪ ಗೌಡ (18) ಆಯ್ಕೆಯಾಗಿದ್ದು, ಇಬ್ಬರು ಪರಾಭವಗೊಂಡಿದ್ದಾರೆ.

ಬೆಳಗಾವಿ ವಿಭಾಗದಿಂದ ಹಾವೇರಿ ಜಿಲ್ಲೆಯ ಬಸವರಾಜ ನೀ. ಅರಬಗೊಂಡ (19), ಬೆಳಗಾವಿಯ ಜಗದೀಶ ಮಲ್ಲಿಕಾರ್ಜುನ ಕವಟಗಿಮಠ (18), ವಿಜಯಪುರದ ಈರಣ್ಣ ಪಟ್ಟಣಶೆಟ್ಟಿ (18) ಚುನಾಯಿತಗೊಂಡಿದ್ದು, ನಾಲ್ವರು ಪರಾಭವಗೊಂಡಿದ್ದಾರೆ.

ಕಲಬುರ್ಗಿ ವಿಭಾಗದಿಂದ ಕೊಪ್ಪಳ ಜಿಲ್ಲೆಯ ಶೇಖರಗೌಡ ಮಾಲಿ ಪಾಟೀಲ (21), ಬೀದರ್ ಜಿಲ್ಲೆಯ ಉಮಾಕಾಂತ ನಾಗಮಾರಪಲ್ಲಿ (20), ಬಳ್ಳಾರಿಯ ಜೆ.ಎಂ. ಶಿವಪ್ರಸಾದ್ (18) ಆಯ್ಕೆಯಾಗಿದ್ದು, ಇಬ್ಬರು ಪರಾಭವಗೊಂಡಿದ್ದಾರೆ.

ಇತರೆ ಸಹಕಾರ ಸಂಘಗಳ ಕ್ಷೇತ್ರದಿಂದ ಗದಿಗೆಪ್ಪ ಗೌಡ ಪಾಟೀಲ ಆಯ್ಕೆಯಾಗಿದ್ದಾರೆ.

# ಅಂಬೇಡ್ಕರ್ ಭಾವಚಿತ್ರಕ್ಕೆ ಸಿಕ್ಕ ಪ್ರಚಾರ ತತ್ವ, ಸಿದ್ಧಾಂತಕ್ಕಿಲ್ಲ



ಹರಿಹರ, ಮಾ.28- ಸಂವಿಧಾನಕ್ಕೆ ವಿರು ದ್ಧವಾಗಿ ಆಡಳಿತಗಾರರು ನಡೆದು ಕೊಂಡರೆ ಅದನ್ನು ತಡೆಯಬೇಕಾದವರು ನಿಷ್ಕ್ರಿಯ ರಾಗಿದ್ದಾರೆಂದು ಸಾಹಿತಿ ಡಾ.ಬಂಜಗೆರೆ ಜಯಪ್ರಕಾಶ್ ಹೇಳಿದರು.

ನಗರದಲ್ಲಿ ಪರಸ್ಪರ ಬಳಗದಿಂದ ಆಯೋಜಿಸಿದ್ದ ಡಾ. ಅಂಬೇಡ್ಕರ್‌ರವರ ಚಿಂತನೆಗಳ ಮಾಸಿಕ ಉಪನ್ಯಾಸ ಮಾಲಿಕೆಯ ಉದ್ಘಾಟನೆ ನೆರವೇರಿಸಿ ಮಾತನಾಡಿದ ಅವರು, ಸಂವಿಧಾನಕ್ಕೆ ಈ ದೇಶದ ಜನರೇ ಕೈ-ಕಾಲು, ಶಾಸಕಾಂಗವೇ ಬಾಯಿ, ಸಂದೇಹ ಪರಿಹರಿಸಲು ನ್ಯಾಯಾಂಗವಿದೆ ಎಂದರು.

ಸಂವಿಧಾನವು ಆಡಳಿತಗಾರರಿಂದ ದುರ್ಬಳಕೆ ಆಗುತ್ತಿದ್ದರೆ ಅದನ್ನು ಸರಿದಾರಿಗೆ ತರಲು ಇರುವ ಸಂಸ್ಥೆಗಳು ಸಕ್ರಿಯವಾಗಬೇಕು. ತಪ್ಪಿದಲ್ಲಿ ದುರಾಡಳಿತ ತಡೆಯುವವರ‍್ಯಾರು ಎಂದು ಪ್ರಶ್ನಿಸಿದ ಅವರು, ಚಾಲಕ ರ‍್ಯಾಷ್ ಡ್ರೈವ್ ಮಾಡಿದರೆ ಈ ಮೊಬೈಲ್ ನಂ.ಗೆ ತಿಳಿಸಿ ಎಂದು ವಾಹನಗಳ ಹಿಂದೆ ಬರೆದಿರುವುದನ್ನು ಉದಾಹರಿಸಿದರು.

ಗಾಂಧೀಜಿ, ಅಂಬೇಡ್ಕರ್ ಈ ದೇಶದ ಎರಡು ಮಹಾನ್ ಸಂತರು, ದಾರ್ಶನಿಕರು, ರಾಜಕಾರಣಿಗಳಾಗಿದ್ದಾರೆ. ಧರ್ಮಕ್ಕೆ ಅಂಟಿಕೊಂಡೇ ಗಾಂಧೀಜಿ ಹೇಳಿದ ಕೋಮು ಸಾಮರಸ್ಯ, ಸಹಜೀವನದ ಪಾಠ ನಮಗೆ ಆದರ್ಶವಾಗಬೇಕೆಂದರು.

ಪುರೋಹಿತಶಾಹಿ ಆಡಳಿತ ವಿರೋಧಿಸಿದ್ದ ಅಂಬೇಡ್ಕರ್, ಮೇಲ್ಜಾತಿಯವರಿಗೆ ಆಡಳಿತದ ಚುಕ್ಕಾಣಿ ನೀಡಿದರೆ ನಮಗೆ ಬ್ರಿಟೀಷರ ಆಡಳಿತವೇ ಉತ್ತಮ ಎಂದಿದ್ದರು. ಈ ಹಿಂದೆ ದಮನಿಸಿದವರನ್ನು ದ್ವೇಷಿಸಬೇಡಿ, ಈಗಲೂ ದಮನಿಸುವವರ ವಿರುದ್ಧ ಹೋರಾಡಿ ಎಂದಿದ್ದ ಅಂಬೇಡ್ಕರ್, ಸಮಾಜದಲ್ಲಿ ಹಿಂಸಾಚಾರ ಸೃಷ್ಟಿಸುವ ಇಚ್ಛೆ ಇರಲಿಲ್ಲ, ಸಮಾಜ ಸುಧಾರಣೆ ಬಗ್ಗೆ ವಿವೇಕಯುಕ್ತ ಭಾವನೆ ಹೊಂದಿದ್ದಾರೆಂದರು.

ಅಂಬೇಡ್ಕರ್‌ರವರ ಭಾವಚಿತ್ರ ಪ್ರಚಾರ ಪಡೆದಂತೆ ಅವರ ತತ್ವ, ಸಿದ್ಧಾಂತಗಳು ಪ್ರಚಾರ ಪಡೆದಿಲ್ಲ. ಅವರನ್ನು ಅಭ್ಯಾಸ ಮಾಡುವ ಜನ ಸೀಮಿತವಾಗಿದ್ದಾರೆ. ಯುಕೆ, ಯುಎಸ್‌ಎನಲ್ಲಿ ಉಳಿದಿದ್ದರೆ ಅವರಿಗೆ ಅಲ್ಲಿನ ಸರ್ಕಾರ ಅಧಿಕಾರ, ಅಂತಸ್ತು ನೀಡುತ್ತಿತ್ತು.

ಆದರೆ ಅಪಮಾನ ಎದುರಿಸಿಯೂ ಭಾರತದಲ್ಲಿದ್ದು ದಲಿತರ ಪರ ಧ್ವನಿ ಎತ್ತಿದರು ಎಂದರು.

> **ನಾವು ಗಳಿಸಿದ ವಿದ್ಯೆ, ಜ್ಞಾನ, ಹಣ, ಅಧಿಕಾರದ ಲಾಭ ನಮ್ಮ ಕುಟುಂಬಗಳಿಗೆ ಸೀಮಿತವಾಗದೆ, ಸುತ್ತಲಿರುವ ಬಡವ, ದಲಿತರಿಗೂ ಸಲ್ಲಬೇಕು.**
> **- ಬಂಜಗೆರೆ ಜಯಪ್ರಕಾಶ್**

ಭಾರತೀಯ ಮಹಿಳೆಯರಿಗೆ ಪಿತ್ರಾರ್ಜಿತ ಆಸ್ತಿಯಲ್ಲಿ ಹಕ್ಕು ಕೊಡಿಸುವ ಅವರ ಪ್ರಸ್ತಾವನೆಗೆ ಸಂಸತ್ತಿನಲ್ಲಿ ಸೋಲುಂಟಾದಾಗ ನೊಂದ ಅಂಬೇಡ್ಕರ್ ಕಾನೂನು ಸಚಿವ ಸ್ಥಾನಕ್ಕೆ ರಾಜೀನಾಮೆ ಕೊಟ್ಟರು. ಅವರು ಕೇವಲ ದಲಿತ ಮಹಿಳೆಯರಿಗಲ್ಲ ದೇಶದ ಎಲ್ಲಾ ಜಾತಿ, ಜನಾಂಗದ ಮಹಿಳೆಯರ ಪರ ನಿಲುವು ಹೊಂದಿದ್ದರು ಎಂದರು.

ನಿವೃತ್ತ ಪ್ರಾಚಾರ್ಯ, ಗಾಂಧೀಜಿ ಉಪನ್ಯಾಸ ಮಾಲಿಕೆ ಖ್ಯಾತಿಯ ಪ್ರೊ.ಎಚ್.ಎ. ಭಿಕ್ಷಾವರ್ತಿಮಠ ಮಾತ ನಾಡಿ, ಮತಾಂತರಗೊಂಡಿದ್ದ ಅಂಬೇಡ್ಕರ್ ಬೌದ್ಧ ಧರ್ಮದಲ್ಲೂ ಹೀನಯಾನ, ಮಹಾಯಾನ ಎಂಬ ಮೇಲು, ಕೀಳು ವ್ಯವಸ್ಥೆಯಿಂದ ಬೇಸತ್ತು ನವಯಾನ ಆರಂಭಿಸಿದ್ದರು.

ಅಂಬೇಡ್ಕರ್‌ರನ್ನು ಅಭ್ಯಾಸ ಮಾಡಿದರೆ ಭಾರತವನ್ನು ಅರ್ಥ ಮಾಡಿಕೊಂಡಂತೆ. ಖಾದಿ ಮತ್ತು ಕಾವಿಯವರ ಅನೈತಿಕ ಸಂಬಂಧ ದೇಶಕ್ಕೆ ತೊಡಕಾಗಿದೆ. ಮಹಾತ್ಮರನ್ನು ಜಾತಿಗೆ ಸೀಮಿತಗೊಳಿಸಬಾರದೆಂದರು.

ನಿವೃತ್ತ ಕನ್ನಡ ಉಪನ್ಯಾಸಕ ಪ್ರೊ. ಸಿ.ವಿ.ಪಾಟೀಲ್ ಮಾತನಾಡಿ ಪದಾಧಿಕಾರಿ, ಬ್ಯಾಂಕ್ ಖಾತೆ ಇಲ್ಲದ ಅನೌಪಚಾರಿಕ ಸಂಸ್ಥೆಯಾದ ಪರಸ್ಪರ ಬಳಗದಿಂದ ಈ ಹಿಂದೆ ಎರಡು ವರ್ಷ ಗಾಂಧೀಜಿಯವರ ಕುರಿತು ಮಾಸಿಕ ಉಪನ್ಯಾಸ ಮಾಲಿಕೆ ಯಶಸ್ವಿಯಾಗಿ ನಡೆಸಲಾಗಿದೆ. ಅದೇ ಮಾದರಿಯಲ್ಲಿ ಅಂಬೇಡ್ಕರ್ ಕುರಿತು ಉಪನ್ಯಾಸ ಮಾಲಿಕೆ ನಡೆಯಲಿದೆ. ತಾಲ್ಲೂಕಿನ ಆಸಕ್ತರು ಸದುಪಯೋಗಪಡಿಸಿಕೊಳ್ಳಬೇಕೆಂದರು.

ಲೇಖಕ ಜೆ.ಕಲೀಂಬಾಷಾ, ಹಿರಿಯ ನ್ಯಾಯವಾದಿ ರಾಮಚಂದ್ರ ಕಲಾಲ್, ನಿವೃತ್ತ ಪ್ರಾಚಾರ್ಯ ಡಾ.ಎಸ್.ಎಚ್.ಪ್ಯಾಟಿ, ಕಾರ್ಮಿಕ ಮುಖಂಡ ಎಚ್.ಕೆ.ಕೊಟ್ರಪ್ಪ, ಹುಲಿಕಟ್ಟಿ ಚನ್ನಬಸಪ್ಪ, ಎ.ರಿಯಾಜ್ ಅಹ್ಮದ್, ಪಿ.ಜೆ.ಮಹಾಂತೇಶ್, ಎಚ್.ನಿಜಗುಣ, ಪ್ರೊ. ಹದಡಿ ಯಲ್ಲಪ್ಪ, ಡಾ.ಎ.ಬಿ.ರಾಮ ಚಂದ್ರಪ್ಪ, ಬಿ.ಬಿ.ರೇವಣನಾಯ್ಕ್, ಡಿ.ಎಂ. ಮಂಜುನಾಥಯ್ಯ ಇತರರಿದ್ದರು.

## ಮಹಿಳೆಯರು ಸಮಾಜಮುಖಿ ಕೆಲಸಗಳಲ್ಲಿ ತೊಡಗಿಸಿಕೊಳ್ಳಿ



ದಾವಣಗೆರೆ, ಮಾ.28- ಮಹಿಳೆಯರು ಸಮಾಜಮುಖಿ ಕೆಲಸಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳುವ ಜೊತೆಗೆ ಪ್ರಗತಿಯತ್ತ ಹೆಜ್ಜೆ ಹಾಕಬೇಕಾಗಿದೆ ಎಂದು ಗದಗ ಜಿಲ್ಲೆ ಮುಂಡರಗಿ ಈಶ್ವರಿ ಮಹಿಳಾ ಫೌಂಡೇಶನ್ ಸಂಸ್ಥಾಪಕಿ ಪ್ರಭಾವತಿ ವಿಶ್ವನಾಥ ಬೆಳವಣಿಕೆಮಠ ಹಿತ ನುಡಿದರು.

ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಕಲಾಕುಂಚ ಸಂಸ್ಥೆ ಕುವೆಂಪು ಕನ್ನಡ ಭವನದಲ್ಲಿ ಏರ್ಪಡಿಸಿದ್ದ ದಾವಣಗೆರೆ ಗೃಹಿಣಿ ಸ್ಪರ್ಧೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಪ್ರತಿಯೊಬ್ಬ ಮಹಿಳೆ ಕೂಡ ಸಾಧಕಳೇ. ಅವರಲ್ಲಿನ ಕಲೆಗೆ ಪ್ರೋತ್ಸಾಹ ಹಾಗೂ ಉತ್ತಮ ವೇದಿಕೆ ಕಲ್ಪಿಸಿಕೊಟ್ಟಾಗ ಪ್ರತಿಭಾನ್ವಿತ ಮಹಿಳೆಯಾಗಿ ಹೊರಹೊಮ್ಮಲು ಸಾಧ್ಯ ಎಂದರು.

ಮಹಿಳೆ ಕೇವಲ ನಾಲ್ಕು ಗೋಡೆಗಳ ಮಧ್ಯೆ ಸೀಮಿತವಾಗಿರದೇ ಸಮಾಜಕ್ಕಾಗಿ ದುಡಿದು, ದುಡಿದ ದುಡಿಮೆಯಲ್ಲಿ ಒಂದಿಷ್ಟು ಹಣವನ್ನು ಸಮಾಜ ಸೇವಾ ಕಾರ್ಯಗಳಿಗೆ ವಿನಿಯೋಗಿಸಿದಾಗ ಜೀವನ ಸಾರ್ಥಕಗೊಳ್ಳುತ್ತದೆ ಎಂದರು.

ಮಹಿಳೆ ಎಲ್ಲಾ ಕ್ಷೇತ್ರಗಳಲ್ಲೂ ಮುನ್ನಡೆ ಸಾಧಿಸಿದ್ದು, ಸಬಲೀಕರಣದ ಹೆಜ್ಜೆ ಹಾಕುತ್ತಿರುವುದು ಸಂತಸದ ವಿಚಾರ ಎಂದು ಹೇಳಿದರು

ಖ್ಯಾತ ಸ್ತ್ರೀರೋಗ ತಜ್ಞೆ, ಪರಿಸರವಾದಿ ಡಾ. ಶಾಂತಾ ಭಟ್ ಮಾತನಾಡಿ, ಕಲೆ ಇಲ್ಲದ ಜೀವನ ಜೀವನವೇ ಅಲ್ಲ. ಕಲೆ ಎಂಬ ಲೇಪನವನ್ನು ಲೇಪಿಸಿದಾಗ ಜೀವನಕ್ಕೆ ರಂಗು ಬರುತ್ತದೆ ಎಂದರು. ಕಲಾಕುಂಚ ಮಹಿಳಾ ವಿಭಾಗದ ಅಧ್ಯಕ್ಷೆ ಹೇಮಾ ಶಾಂತಪ್ಪ ಪೂಜಾರಿ ಅಧ್ಯಕ್ಷತೆ ವಹಿಸಿದ್ದರು.

ಶೋಭಾ ಪಂಚಾಕ್ಷರಯ್ಯ, ಜ್ಯೋತಿ ಗಣೇಶ್ ಶೆಣೈ, ಶ್ರೀಮತಿ ಚಂದ್ರಶೇಖರ ಅಡಿಗ, ವಸಂತಿ ಮಂಜುನಾಥ್, ಶಾರದಮ್ಮ ಶಿವನಪ್ಪ, ಸುಜಾತ ಬಸವರಾಜ್, ಗಿರಿಜಮ್ಮ ನಾಗರಾಜ್, ಶೈಲಾ ವಿಜಯಕುಮಾರ್, ಕಲಾಕುಂಚ ಸಂಸ್ಥಾಪಕ ಸಾಲಿಗ್ರಾಮ ಗಣೇಶ್ ಶೆಣೈ, ಸಂತೋಷ್‌ಕುಮಾರ್ ಶೆಟ್ಟಿ ಮತ್ತಿತರರಿದ್ದರು.

ರೇಖಾ ಓಂಕಾರಪ್ಪ ಪ್ರಾರ್ಥಿಸಿದರು. ಕುಸುಮಾ ಲೋಕೇಶ್ ಸ್ವಾಗತಿಸಿದರು. ಡಾ. ಶೋಭಾ ಚಪ್ಪರದಳ್ಳಿಮಠ ಕಾರ್ಯಕ್ರಮ ನಿರೂಪಿಸಿದರು.

### ಕಸಾಪ ಚುನಾವಣೆ : ಶಿವಕುಮಾರ ಕುರ್ಕಿ ಇಂದು ನಾಮಪತ್ರ



ದಾವಣಗೆರೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಚುನಾವಣೆಗೆ ಆರ್. ಶಿವಕುಮಾರಸ್ವಾಮಿ ಕುರ್ಕಿ ಅವರು ಇಂದು ಮಧ್ಯಾಹ್ನ 12 ಗಂಟೆಗೆ ನಾಮಪತ್ರ ಸಲ್ಲಿಸಲಿದ್ದಾರೆ. ಅವರು ಬಂಧು-ಮಿತ್ರರ ಸಂಗಡ ತಾಲ್ಲೂಕು ಕಛೇರಿಗೆ ತೆರಳಿ, ಚುನಾವಣಾಧಿಕಾರಿಗಳಿಗೆ ತಮ್ಮ ನಾಮಪತ್ರ ಸಲ್ಲಿಸಲಿದ್ದಾರೆ ಎಂದು ಜಿಲ್ಲಾ ಉಪನ್ಯಾಸಕರ ಸಂಘದ ಅಧ್ಯಕ್ಷ ಸಿ.ಬಿ. ರವಿ ತಿಳಿಸಿದ್ದಾರೆ.

### ಕಸಾಪ ಚುನಾವಣೆಗೆ ಇಂದು ವಾಮದೇವಪ್ಪ ನಾಮಪತ್ರ ಸಲ್ಲಿಕೆ



ಬರುವ ಮೇ 9 ರಂದು ನಡೆಯಲಿರುವ ದಾವಣಗೆರೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಸ್ಥಾನದ ಚುನಾವಣೆಗೆ ಬಿ. ವಾಮದೇವಪ್ಪ ಅವರು ಇಂದು ತಮ್ಮ ನಾಮಪತ್ರ ಸಲ್ಲಿಸಲಿದ್ದಾರೆ ಎಂದು ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷ ಶ್ಯಾಗಲೆ ಸದಾಶಿವಪ್ಪ ತಿಳಿಸಿದ್ದಾರೆ.

ಇಂದು ಮಧ್ಯಾಹ್ನ 12.15 ಘಂಟೆಗೆ ತಾಲ್ಲೂಕು ಕಛೇರಿಯಲ್ಲಿ ಕಸಾಪ ಜಿಲ್ಲಾ ಚುನಾವಣಾಧಿಕಾರಿಗಳಾದ ತಹಶೀಲ್ದಾರ್ ಅವರಿಗೆ ಬಿ.ವಾಮದೇವಪ್ಪ ಅವರು ನಾಮಪತ್ರ ಸಲ್ಲಿಸುವ ಸಂದರ್ಭದಲ್ಲಿ ಕಸಾಪ ಸದಸ್ಯರು, ಸಾಹಿತ್ಯಾಸಕ್ತರು ಹಾಜರಿರುವಂತೆ ಹಿರಿಯ ಸಾಹಿತಿ ಎಸ್.ಟಿ.ಶಾಂತಗಂಗಾಧರ್ ಕೋರಿದ್ದಾರೆ.

## ಉತ್ತರ ಪ್ರದೇಶದ ಆಸ್ಪತ್ರೆಯಲ್ಲಿ ಬೆಂಕಿ ಅವಘಡ

ಕಾನ್‌ಪುರ, ಮಾ. 28 - ಉತ್ತರ ಪ್ರದೇಶದ ಕಾನ್‌ಪುರದಲ್ಲಿರುವ ಸರ್ಕಾರಿ ಎಲ್‌ಪಿಎಸ್ ಹೃದ್ರೋಗ ಆಸ್ಪತ್ರೆಯಲ್ಲಿ ಬೆಂಕಿ ಅವಘಡ ಸಂಭವಿಸಿದೆಯಾದರೂ, ಅಲ್ಲಿದ್ದ 140ಕ್ಕೂ ಹೆಚ್ಚು ರೋಗಿಗಳನ್ನು ರಕ್ಷಿಸಲಾಗಿದೆ.

ಬೆಳಿಗ್ಗೆ 7.30ರ ಸಮಯದಲ್ಲಿ ನೆಲಮಹಡಿಯಲ್ಲಿರುವ ಸ್ಟೋರ್ ರೂಮ್‌ನಲ್ಲಿ ಬೆಂಕಿ ಕಾಣಿಸಿಕೊಂಡಿದೆ. ಬೆಂಕಿ ನಂದಿಸಲಾಗಿದೆ ಹಾಗೂ ರೋಗಿಗಳನ್ನು ಪಕ್ಕದ ಕಟ್ಟಡಕ್ಕೆ ಸಾಗಿಸಲಾಗಿದೆ. ಎಲ್ಲಾ ರೋಗಿಗಳು ಸುರಕ್ಷಿತವಾಗಿದ್ದಾರೆಂದು ಆಸ್ಪತ್ರೆಯ ನಿರ್ದೇಶಕ ಡಾ. ವಿನಯ್ ಕೃಷ್ಣ ತಿಳಿಸಿದ್ದಾರೆ.

Aayur Cure a healthy life for you | E-store India Save More • Get Pure India's Widest SWADESHI Supermarket
Grand Opening!
E-STORE OPENING CEREMONY
on Monday 29th March 2021 at 5.30 pm
Place : Akshaya Arcade, Opp. Bakkeshwara Kalyana Mantapa, Main Road, Nijalingappa Badavane, Davanagere.
Best Price Supermarket
Up to 33% Discount
Inauguration by : Sri Dr. SHAMANUR SHIVASHANKARAPPA
Ex-Minister, M.L.A., Davangere South.
Chief Guests :
CA. C. R. Dhavalagi, Chartered Accountant, Hubballi.
B.K. Leelaji, Co-ordinator, Brahmakumaris Eshwariya Vishwa Vidyalaya, DVG.
Dr. A.M. Shivakumar, Chairman, Indian Red Cross Society, Davangere.
CA. Umesh Shetty, Chartered Accountant, Davangere.
A. Nagaraj, Opposion Leader, Munciple Corporation, Davangere.
Dinesh K. Shetty, Ex-President, Davangere CMC
Eshwar Singh Kavitala, President, Rajputh Samaja, Davangere.
Rtn. P.D.G. Nayan S. Patil, R.I.D. 3160
Dr. Shankar Patil B.G. President, D.H.R.M. Souharda Co-Op. Ltd.,
AAYUR CURE & E-STORE INDIA TEAM
Mr. Anil Jadhav (National Promoter)
Mrs. Sanjana Paranjape (South India Promoter)
Mr. Santosh Pawar (Maharastra Promoter)
and All Aayur Cure & E-Store India Team
CONTACT FOR MEMBERSHIP : 9448155182, 9060333457
Avail Inaugural Discount subject to condition.

Grand Opening
Aayur Cure a healthy life for you | E-store India Save More • Get Pure India's Widest SWADESHI Supermarket
E-STORE OPENING CEREMONY
on Monday 29th March 2021 at 5.30 pm
Place : Akshaya Arcade, Opp. Bakkeshwara Kalyana Mantapa, Main Road, Nijalingappa Badavane, Davanagere.
ಶುಭ ಕೋರುವವರು :
ಅಕ್ಷಯ ಆರ್ಕೇಡ್ ಮತ್ತು ಅಂಬರ್‌ಕರ್ ಫ್ಯಾಮಿಲಿ
ದಾವಣಗೆರೆ.

ssims SPARSH CENTRE FOR ACCIDENTS BONE & JOINT CARE
ಸ್ಪರ್ಶ್ ಆಸ್ಪತ್ರೆ - ಬೆಂಗಳೂರು,
ಇಲ್ಲಿನ ಪ್ರಮುಖ ಮೂಳೆ ಹಾಗೂ ಕೀಲು ಶಸ್ತ್ರಚಿಕಿತ್ಸಕರು
ನಿಮ್ಮ ದಾವಣಗೆರೆಗೆ ಭೇಟಿ ನೀಡುತ್ತಾರೆ
ಡಾ. ರವಿಕುಮಾರ್ ಮುಕಾರ್ತಿಹಾಳ್
D'Ortho, DNB (Ortho), Fellowship in Arthroplasty (Depuy, SPARSH India), Fellowship in Septic & Aseptic Revision Joint Replacement surgery (EndoKlinik, Germany)
ಮೂಳೆ ಮತ್ತು ಕೀಲು ಮರುಜೋಡಣಾ ಶಸ್ತ್ರಚಿಕಿತ್ಸಕರು
• ಕೀಲು ನೋವು • ಮೊಣಕಾಲು ನೋವು • ಭುಜದ ನೋವು • ಸ್ಪೋರ್ಟ್ಸ್ ಇಂಜುರೀಸ್
• ಕೀಲು ಮರುಜೋಡಣೆ • ಹಿಪ್ ಮರುಜೋಡಣೆ • ರಿವಿಷನ್ ಶಸ್ತ್ರಚಿಕಿತ್ಸೆ • ಡಿಫಾರ್ಮಿಟಿ ಸರಿಪಡಿಸುವಿಕೆ
ಇತರೇ ಮೂಳೆ ಮತ್ತು ಕೀಲು ಸಮಸ್ಯೆಗೆ ಸಂಪರ್ಕಿಸಿ
ದಿನಾಂಕ: ಗುರುವಾರ, 1 ಏಪ್ರಿಲ್ 2021 ಸಮಯ: ಬೆಳಿಗ್ಗೆ 11ರಿಂದ ಮಧ್ಯಾಹ್ನ 2ರ ವರೆಗೆ
ಹೊರ ರೋಗಿಗಳ ಕ್ಲಿನಿಕ್ ವಿಳಾಸ: ಎಸ್. ಎಸ್. ಸ್ಪೆಷಾಲಿಟಿ ಕ್ಲಿನಿಕ್,
ಮೋದಿ ಕಾಂಪೌಂಡ್, ಎಂ.ಸಿ.ಸಿ. 'ಎ' ಬ್ಲಾಕ್, ಮೋತಿ ವೀರಪ್ಪ ಕಾಲೇಜು ಹತ್ತಿರ, ದಾವಣಗೆರೆ
ನೋಂದಣಿಗಾಗಿ ಕರೆಮಾಡಿ: 96869 29090
ಸ್ಪರ್ಶ್ ಆಸ್ಪತ್ರೆ ಎಲ್ಲಾ ಆರೋಗ್ಯ ವಿಮಾ (TPA) ಯೋಜನೆಯಡಿಯಲ್ಲಿ ಅಂಗೀಕೃತವಾಗಿದೆ

ಹುಟ್ಟುಹಬ್ಬದ ಶುಭಾಶಯಗಳು ಅಪ್ಪಾಜಿ...

ಶ್ರೀ ಯಜಮಾನ್ ಮೋತಿ ವೀರಣ್ಣನವರು
ಮಾಜಿ ಶಾಸಕರು, ಹಿರಿಯ ವರ್ತಕರು, ದಾವಣಗೆರೆ.
ದಿನಾಂಕ 29.03.2021ರಂದು ತಮ್ಮ 83 ವರ್ಷಗಳನ್ನು ಪೂರೈಸಿ, 84ನೇ ವಸಂತಕ್ಕೆ ಪಾದಾರ್ಪಣೆ ಮಾಡುತ್ತಿರುವ ನಮ್ಮ ಪ್ರೀತಿಯ ಅಪ್ಪಾಜಿಗೆ ಜನುಮ ದಿನದ ಶುಭಾಶಯಗಳು.
ತಮಗೆ ಸದಾ ಆಯುರಾರೋಗ್ಯ ಭಾಗ್ಯ ಕರುಣಿಸಲಿ ಎಂದು ಭಗವಂತನಲ್ಲಿ ಪ್ರಾರ್ಥಿಸುತ್ತಾ, ನಿಮ್ಮ ಆಶೀರ್ವಾದ ಮತ್ತು ಮಾರ್ಗದರ್ಶನ ನಮ್ಮೆಲ್ಲರ ಜೀವನದಲ್ಲಿ ಸದಾ ಇರಲಿ.
ಪುತ್ರಿ : ✦ ಶ್ರೀಮತಿ ರಾಜೇಶ್ವರಿ ಮತ್ತು ನಾಗಾನಂದ ಮೋತಿಖಾನೆ, ಮೈಸೂರು.
ಪುತ್ರರು : ✦ ಶ್ರೀಮತಿ ಸವಿತ ಮತ್ತು ಯಜಮಾನ್ ಮೋತಿ ರಾಜೇಂದ್ರ
✦ ಶ್ರೀಮತಿ ಮತ್ತು ಯಜಮಾನ್ ಮೋತಿ ರುದ್ರಪ್ರಸಾದ್
ಮೊಮ್ಮಕ್ಕಳು :
✦ ನಿಹಾರಿಕಾ ನಾಗ ಮೋತಿಖಾನೆ ✦ ಅಲೋಕ್ ನಾಗ ಮೋತಿಖಾನೆ
✦ ಆದಿತ್ಯ ಯಜಮಾನ್ ✦ ಆರ್ಯನ್ ಯಜಮಾನ್ ✦ ನಾರಾಯಣಿ ಯಜಮಾನ್
ಮತ್ತು ಕುಟುಂಬ ವರ್ಗದವರು, ಸಮಸ್ತ ಸ್ನೇಹ, ಬಂಧು ಬಳಗದವರು

JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte